
ಚಕ್ರಗಳು

THE CHAKRAS



ಸಿ. ಡಬ್ಲ್ಯು. ಲೆಡ್‌ಬೀಟರ್

ಚಕ್ರಗಳು

ಸಿ. ಡಬ್ಲ್ಯು. ಲೆಡ್‌ಬೀಟರ್
(ಗ್ರಂಥಕರ್ತ)

ಭಾಷಾಂತರಕಾರ:
ಟಿ.ವಿ. ರಾಚಪ್ಪ ಎಂ.ಎ.ಬಿ. ಟಿ.
ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯ

2000

ಪ್ರಕಾಶಕರು:

ಕರ್ನಾಟಕ ಥಿಯಸಾಫಿಕಲ್ ಫೆಡರೇಷನ್
ಪ್ರಚಾರ ಮತ್ತು ಶಿಕ್ಷಣ ಸಮಿತಿ
ನಂ.90, ಶ್ರೀ ಕೃಷ್ಣರಾಜೇಂದ್ರ ರಸ್ತೆ,
ಬೆಂಗಳೂರು 560 004

ಮುದ್ರಕರು:

ಓಂಕಾರ್ ಆಫ್‌ಸೆಟ್ ಪ್ರಿಂಟರ್
ನಂ.3/3, ಮೊದಲನೆ ಮುಖ್ಯ ರಸ್ತೆ, ಹೊಸತರಗುಪೇಟೆ
ಬೆಂಗಳೂರು - 560 002, ಟೆಲಿಫ್ಯಾಕ್ಸ್: 6709026, 6708186
e-mail:omkar@vsnl.com
Website : www.omkarprinters.com

ಗ್ರಂಥಕರ್ತರ ಪೀಠಿಕೆ

ಒಬ್ಬ ಮನುಷ್ಯನು ತನ್ನ ಉನ್ನತ ಮಟ್ಟದ ದೃಷ್ಟಿಯನ್ನು ಬೆಳೆಸಿಕೊಂಡಾಗ ಒಂದು ನೂತನವಾದ ಮತ್ತು ಆಕರ್ಷಣೀಯವಾದ ದೃಷ್ಯವು ಅತನಿಗೆ ಗೋಚರವಾಗುತ್ತದೆ. ಅದರಲ್ಲಿ ಚಕ್ರಗಳು ಪ್ರಪ್ರಥಮವಾಗಿ ಆತನ ಗಮನವನ್ನು ಆಕರ್ಷಿಸುತ್ತವೆ. ಅಂತಹವನಿಗೆ ಆತನ ಸಹವಾಸಿಗಳು ಒಂದು ಹೊಸ ಲಕ್ಷಣದಲ್ಲಿ ಕಾಣಿಸಿಕೊಳ್ಳುತ್ತಾರೆ. ಆಗ ಅದುವರೆಗೆ ಅವರಲ್ಲಿ ಅಡಗಿದ್ದ ಎಷ್ಟೋ ಭಾಗವು ಆತನಿಗೆ ಗೋಚರವಾಗುತ್ತದೆ. ಆಗ ಅವರನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅವರಿಗೆ ಹೆಚ್ಚು ಪ್ರಯೋಜನಕರವಾದ ಸೇವೆ ಸಲ್ಲಿಸಲು ಸಮರ್ಥನಾಗುತ್ತಾನೆ. ಅವರ ಸಂಕಲ್ಪಗಳೂ ಭಾವನೆಗಳೂ ಹೆಚ್ಚು ಪರಿಷ್ಕಾರವಾಗಿ ಅಭಿವ್ಯಕ್ತವಾಗುತ್ತವೆ. ಏಕಂದರೆ ಅವುಗಳ ರೂಪಗಳು ಮತ್ತು ಬಣ್ಣಗಳು ಪರಿಷ್ಕಾರವಾಗಿ ಕಾಣಿಸಿಕೊಳ್ಳುತ್ತವೆ. ಅವರ ಬೆಳವಣಿಗೆ ಅಂತಸ್ತು ಅವರ ಆರೋಗ್ಯ ಪರಿಸ್ಥಿತಿ ಇವುಗಳನ್ನು ಊಹಿಸುವದಕ್ಕಿಂತ ಪರಿಷ್ಕಾರವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಚಕ್ರಗಳ ಪ್ರಕಾಶ ಮತ್ತು ಬಣ್ಣ-ಇವುಗಳು ಆತನ ದೃಷ್ಟಿಗೆ ಎದ್ದು ಕಾಣುವಂತೆ ಆಗುತ್ತವೆ. ಆಗ ಅವುಗಳನ್ನು ಅರ್ಥ ಮಾಡಿಕೊಳ್ಳಲು ಶಕ್ತನಾಗುತ್ತಾನೆ. ಈ ಗ್ರಂಥವನ್ನು ಬರೆದಿರುವ ಮುಖ್ಯೋದ್ದೇಶ ಈ ಚಕ್ರಗಳ ಕಡೆಗೆ ಅಂತಹವರ ಗಮನವನ್ನು ಸೆಳೆದು ಅವರೂ ಸಹ ತಮ್ಮ ಸುಪ್ತ ಶಕ್ತಿಗಳನ್ನು ಬೆಳೆಸಿಕೊಳ್ಳುವ ಮಾರ್ಗದಲ್ಲಿ ಬಾಳಲಿ ಎಂಬುದೇ ಆಗಿದೆ. ಆ ರೀತಿ ತಮ್ಮ ದಿವ್ಯಶಕ್ತಿಯನ್ನು ಬೆಳೆಸಿಕೊಂಡಿರುವಂತಹವರು ಆ ಮಾರ್ಗದಲ್ಲಿ ಬಾಳಬೇಕೆಂಬ ಉದ್ದೇಶವುಳ್ಳವರಿಗೆ ಸಾಹಾಯ ಮಾಡಬೇಕೆಂಬುದೇ ಈ ಗ್ರಂಥವನ್ನು ಬರೆದಿರುವವರ ಉದ್ದೇಶ.

ಈ ದಿವ್ಯದೃಷ್ಟಿಯೆಂಬುದು ವಿಲಕ್ಷಣವೂ ಅಸ್ವಾಭಾವಿಕವೂ ಆದುದಲ್ಲ. ಈಗ ನಮಗಿರುವ ಶಕ್ತಿಗಳನ್ನು ಬೆಳೆಸಿಕೊಂಡರೆ ಆ ದಿವ್ಯದೃಷ್ಟಿಯನ್ನು ಪಡೆಯಬಹುದು. ನಮ್ಮ ಗ್ರಹಣಶಕ್ತಿಯನ್ನು ಸೂಕ್ಷ್ಮ ಪಡಿಸಿಕೊಂಡರೆ ಈಗ ನಮ್ಮ ಸ್ಥೂಲದೃಷ್ಟಿಗೆ ಎಟುಕದ ಸ್ಪಂದಗಳಿಗೆ ಓಗೊಡುವ ಶಕ್ತಿಯನ್ನು ಪಡೆಯಬಹುದು. ಪ್ರತಿಯೊಬ್ಬ ಮಾನವನೂ ಸಾಕಾದಷ್ಟು ಸಂಸರಣ ಮಾರ್ಗದಲ್ಲಿ ಮುಂದುವರಿದಾಗ ಆ ದಿವ್ಯದೃಷ್ಟಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಆದರೆ ಅದಕ್ಕೆ ತಕ್ಕ ಪರಿಶ್ರಮ ಮತ್ತು ಪರಿಶುದ್ಧ ಜೀವನ ಅತ್ಯಾವಶ್ಯಕ.

ಇನ್ನೂ ರೈಲನ್ನು ನೋಡದೆ ಇರತಕ್ಕ ಹಳ್ಳಿಯ ಜನರು ಇರುತ್ತಾರೆ. ಹಾಗೆಯೇ ಮೇಲ್ಕಂಡ ದಿವ್ಯದೃಷ್ಟಿ ಮೊದಲಾದ ಸಿದ್ಧಿಗಳಲ್ಲಿ ನಂಬಿಕೆಯಿಲ್ಲದವರೂ ಇರುತ್ತಾರೆ. ಅಂತಹವರಿಗೆ ಬರೆದು ಸ್ಪಷ್ಟಪಡಿಸುವಷ್ಟರ ಕಾಲಾವಕಾಶವು ನನಗಿರುವುದಿಲ್ಲ. ಹೆಚ್ಚಿಗೆ ತಿಳಿಯಬೇಕೆಂದಿರುವವರು ನನ್ನ ದಿವ್ಯದೃಷ್ಟಿ (Clairvoyance) ಎಂಬ ಪುಸ್ತಕವನ್ನು ಓದಬಹುದು.

ಚಕ್ರಗಳ ವಿಷಯವಾಗಿ ವಿಪುಲವಾದ ಬರವಣಿಗೆಯಿರುತ್ತದೆ. ಆದರೆ ಅದು ಬಹುಶಃ ಸಂಸ್ಕೃತ ಭಾಷೆಯಲ್ಲಿರಬಹುದು. ಈಚೆಗೆ ಈ ವಿಷಯವು ಆಂಗ್ಲ ಬಾಷೆಯಲ್ಲಿ ಹೊರಬಂದಿರುತ್ತದೆ. ಆದರೆ ಚಕ್ರಗಳ ಚಿತ್ರಗಳು ಈ ಗ್ರಂಥದಲ್ಲಿ ಕೊಟ್ಟಿರುವಂತೆ ಪರಿಷ್ಕಾರವಾದವು ಬೇರೆ ಗ್ರಂಥಗಳಲ್ಲಿ ದೊರೆಯುವುದಿಲ್ಲ. ಈ ಚಕ್ರಗಳ ನಿಜ ಸ್ವರೂಪವನ್ನು ರೆವರೆಂಡ್ ಎಡ್ವರ್ಡ್ ವಾರ್ನರ್ ಎಂಬ ನನ್ನ ಮಿತ್ರರು ಚಿತ್ರಿಸಿರುತ್ತಾರೆ. ಇವರಿಗೆ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಲ್ಲದೆ ಐದನೆಯ ಅಧ್ಯಾಯದಲ್ಲಿ ಬರೆದಿರುವಂತೆ ಹಿಂದೂ ಸಂಸ್ಕೃತಿಗೆ ಸಂಬಂಧಪಟ್ಟ ಸಮಸ್ತ ವಿಷಯಗಳನ್ನು ಸಂಗ್ರಹಿಸಿದ ಅರ್ನೆಸ್ಟ್‌ವುಡ್‌ರವರಿಗೂ ನಾನು ಕೃತಜ್ಞನಾಗಿರುತ್ತೇನೆ.

1895 ನೆಯ ಇಸವಿಯಲ್ಲೇ ಡಾ|| ಆನಿಬೆಸೆಂಟರವರು ಇದಕ್ಕೆ ಸಂಬಂಧಪಟ್ಟ ಸಂಶೋಧನೆ ನಡೆಸಿದ್ದಾಗ್ಗೂ ಆಗ ನಾನು ಅದಕ್ಕೆ ಹೆಚ್ಚು ಗಮನಕೊಡಲು ಸಾಧ್ಯವಾಗಲಿಲ್ಲ.

ಸಿ. ಡಬ್ಲ್ಯು. ಲೆಡ್‌ಬೀಟರ್
ಗ್ರಂಥಕರ್ತರು

ಭಾಷಾಂತರಕಾರನ ಮುನ್ನುಡಿ

ಈ ಗ್ರಂಥದ ಚಕ್ರಗಳ ವಿಷಯವು ಅತ್ಯಂತ ಉನ್ನತ ಮಟ್ಟದ್ದು. ಅವುಗಳನ್ನು ಎಚ್ಚರಗೊಳಿಸುವ ಅರ್ಹತೆಯು ಈ ಗ್ರಂಥವನ್ನು ಭಾಷಾಂತರ ಮಾಡಿರುವ ನನಗಾಗಲೀ ಇದನ್ನು ಓದುವಂತಹರಿಗಾಗಲೀ ಇರುವುದಿಲ್ಲ. ಆದರೆ ಈ ಅದ್ಭುತಶಕ್ತಿ ವಿಶೇಷಗಳು ಪ್ರತಿಯೊಬ್ಬ ಮಾನವನಲ್ಲೂ ಬೀಜರೂಪವಾಗಿ ನೆಲೆಸಿವೆ. ಅವುಗಳನ್ನು ಎಚ್ಚರ ಮಾಡುವುದಕ್ಕೆ ತಕ್ಕ ಪರಿಶುದ್ಧ ಜೀವಿತವನ್ನು ಅನುಷ್ಠಾನ ಮಾಡಲು ಓದುಗರೆಲ್ಲರೂ ಪ್ರಯತ್ನ ಪಡಲಿ ಎಂಬ ದೃಷ್ಟಿಯಿಂದಲೂ ಮತ್ತು ಅದಕ್ಕೆ ಪೂರ್ವ ಭಾವಿಯಾಗಿ ಆಧ್ಯಾತ್ಮಿಕ ಜೀವಿತವನ್ನು ಎಂದರೆ ಮಾನವರೆಲ್ಲರನ್ನೂ ಸಹೋದರ ಭಾವನೆಯಿಂದ ಕಾಣುವಂತಹ ಸ್ಫೂರ್ತಿ ಉತ್ಸಾಹಗಳನ್ನು ಪಡೆದು ಆ ಬೆಳಕಿನಲ್ಲಿ ಬಾಳಲಿ ಎಂಬ ಸದುದ್ದೇಶದಿಂದ ಈ ಅದ್ಭುತ ಗ್ರಂಥವನ್ನು ಬಾಷಾಂತರ ಮಾಡಿರುತ್ತೇನೆ. ಎಲ್ಲರೂ ಆ ದೃಷ್ಟಿಯಿಂದ ಓದಿ ಪುನೀತರಾಗಲಿ ಎಂಬ ದೃಷ್ಟಿಯಿಂದ ಈ ಕನ್ನಡ ಗ್ರಂಥವನ್ನು ಪ್ರಕಟಿಸಿರುತ್ತೇನೆ.

ಇದಕ್ಕೆ ಅಡಯಾರ್ ಕೇಂದ್ರದಿಂದ ಅನುಮತಿಯನ್ನು ಪಡೆದು ಭಾಷಾಂತರಿಸಲಾಗಿದೆ.

Donated to Gandhi Shanti Pratishthana Library by Kamalamma S. R. Guru 23-4-2001

ಪರಿವಿಡಿ

ಪುಟ ಸಂಖ್ಯೆ

ಚಕ್ರಗಳು

ಅಧ್ಯಾಯ ೧

ಶಕ್ತಿ - ಕೇಂದ್ರಗಳು

ಶಬ್ದಾರ್ಥ

ಚಕ್ರವೆಂಬ ಸಂಸ್ಕೃತ ಶಬ್ದದ ಅರ್ಥ ಎಲ್ಲರಿಗೂ ಗೊತ್ತು, ಸುತ್ತುವ ಸ್ವಭಾವದ್ದು. ಅಲ್ಲದೆ ಬೇರೆ ಅರ್ಥಗಳಲ್ಲೂ ಎಂದರೆ ಸಂಸಾರ ಚಕ್ರ, ಹುಟ್ಟುಸಾವುಗಳ ಚಕ್ರ, ಧರ್ಮಚಕ್ರ ಪ್ರವರ್ತ ಸೂತ್ರ ಎಂಬರ್ಥಗಳಲ್ಲೂ ಪ್ರಯೋಗವಾಗಿದೆ. ಆದರೆ ಇಲ್ಲಿ ಮಾನವನ ಪ್ರಾಣಮಯ ಕೋಶದ ಮೇಲೆ ಕಂಡು ಬರುವ ಸುಳಿಗಳು ಎಂಬರ್ಥದಲ್ಲಿ ಪ್ರಯೋಗವಾಗಿದೆ.

ಪ್ರಾಥಮಿಕ ವಿವರಣೆ

ಈ ವಿವರಣೆಯು ಥಿಯಾಸಫಿ ಪರಿಚಯವಿಲ್ಲದಂತಹ ಓದುಗರಿಗಾಗಿ ಬರೆಯಲ್ಪಟ್ಟಿದೆ. ಅನೇಕರು ಶರೀರವೇ ತಾವೆಂದು ಅದನ್ನು ಸಜೀವವಾಗಿಟ್ಟಿರುವ ಆತ್ಮವೆಂಬುದು ಮೇಲೆಲ್ಲೋ ತೇಲಾಡುತ್ತಿರುವ ಆಕಾಶ ಬುಟ್ಟಿಯೆಂದೂ ಭಾವಿಸುತ್ತಾರೆ; ಇದು ಸರಿಯಲ್ಲ. ಮಾನವನ ಸ್ವರೂಪವೇ ಆತ್ಮ. ಅದು ದೇಹದ ಮೂಲಕ ಕೆಲಸ ಮಾಡುತ್ತಿರುತ್ತದೆ ಎಂಬುದು ವಾಸ್ತವಾಂಶ. ಅಲ್ಲದೆ ಮಾನವನಿಗಿರುವುದು ಇದು ಒಂದೇ ಶರೀರವಲ್ಲ, ಕಾಮ ಮತ್ತು ಮನೋಶರೀರಗಳೂ ಇರುತ್ತವೆ. ಇವುಗಳು ಆತನಿಗೆ ಕಾಮಲೋಕ ಮತ್ತು ಮನೋ ಲೋಕಗಳಲ್ಲಿ ಕೆಲಸ ಮಾಡತಕ್ಕ ಸಾಧನಗಳಾಗಿರುತ್ತವೆ. ಈಗ ಸಧ್ಯಕ್ಕೆ ಅವುಗಳ ವಿಷಯ ಇಲ್ಲಿ ಬೇಕಾಗಿಲ್ಲ.

ಕಳೆದ ಶತಮಾನದಲ್ಲಿ ಈ ಸ್ಥೂಲದೇಹಕ್ಕೆ ಸಂಬಂಧಪಟ್ಟಂತೆ ಪರಿಶೋಧನೆಗಳು ನಡೆದು ತುಂಬ ಪ್ರಗತಿದಾಯಕವಾದ ತಿಳುವಳಿಕೆ ಕರಗತವಾಗಿರುತ್ತದೆ. ವೈದ್ಯ ಶಾಸ್ತ್ರಜ್ಞರು ಸ್ಥೂಲ ದೇಹದ ಸೂಕ್ಷ್ಮ ವಿವರಗಳನ್ನು ತಿಳಿದುಕೊಂಡಿರುತ್ತಾರೆ. ಈಗ ಅದರ ತೊಡಕಾದ ವಿವರಗಳನ್ನೆಲ್ಲಾ ಪರಿಚಯ ಮಾಡಿಕೊಂಡು ಅದು ಹೇಗೆ ಅದ್ಭುತವಾದ ಒಂದು ತೊಡಕಾದ ಯಂತ್ರದಂತೆ ಕೆಲಸ ಮಾಡುತ್ತದೆ ಎಂಬಂಶವನ್ನು ಪತ್ತೆ ಹಚ್ಚಿರುತ್ತಾರೆ.

ಪ್ರಾಣಮಯಕೋಶ

ನಮ್ಮ ಕಣ್ಣಿಗೆ ಕಾಣಿಸುವಂತಹ ಸ್ಥೂಲದೇಹಕ್ಕೆ ಮಾತ್ರ ಅವರು ತಮ್ಮ ಗಮನವನ್ನು ಹರಿಸಿರುತ್ತಾರೆ. ಆದರೆ ಅವರಲ್ಲಿ ಅನೇಕರಿಗೆ ಅದಕ್ಕಿಂತ ಸೂಕ್ಷ್ಮತರವಾದ ಅತಿ ವಾಯುತತ್ವದಿಂದ ವಿರಚಿತವಾಗಿರುವ ಪ್ರಾಣಮಯಕೋಶದ ವಿಷಯ ಬಹುಶಃ ತಿಳಿಯದು-ಸ್ಥೂಲದೇಹಕ್ಕೆ ಅನ್ಯೋನ್ಯ ಸಂಬಂಧವುಳ್ಳ ಪ್ರಾಣಮಯ ಕೋಶದ ವಿಷಯ ಬಹು ಪ್ರಾಮುಖ್ಯವಾದುದು. ಏಕೆಂದರೆ ಅದರ ಮೂಲಕವೇ ಈ ಸ್ಥೂಲದೇಹವನ್ನು ಸಜೀವವಾಗಿಟ್ಟಿರುವ ಪ್ರಾಣಶಕ್ತಿಯು ಪ್ರವಹಿಸುತ್ತಿರುವುದು, ಅಲ್ಲದೆ ಮೇಲಿನ ಮನೋಮಯ ಕೋಶ ಮತ್ತು ಕಾಮದೇಹಗಳಿಂದ ಹೊರ ಹೊಮ್ಮುವಂತಹ ಯೋಚನೆ ಭಾವನೆಗಳು ಸ್ಥೂಲದೇಹದ ಪ್ರಜ್ಞೆ ಮಟ್ಟಕ್ಕೆ ಹರಿದು ಬರಬೇಕಾದರೆ ಅದೇ ಮಧ್ಯದ ಸಾಧನ. ಅದಿಲ್ಲದಿದ್ದರೆ ಅಂತರಾತ್ಮನು ದೇಹದ ಮೆದಳನ್ನು ವಿನಿಯೋಗ ಮಾಡುವುದಕ್ಕೆ ಆಗುತ್ತಲೇ ಇರಲಿಲ್ಲ. ಆ ಮಟ್ಟದ ದಿವ್ಯ ದೃಷ್ಟಿಯುಳ್ಳವರಿಗೆ ಪ್ರಾಣಮಯಕೋಶವು ಮಸುಕಾದ ಬೂದುಮಿಶ್ರ ನೇರಳೆ ಬಣ್ಣದ ಪ್ರಕೃತಿ ತತ್ವದಿಂದ ವಿರಚಿತವಾಗಿ, ಸ್ಥೂಲದೇಹದ ಒಳಗೂ ಸ್ವಲ್ಪ ಹೊರಗೂ ವ್ಯಾಪಿಸಿರುವುದು ಗೋಚರವಾಗುತ್ತದೆ.

ಸ್ಥೂಲದೇಹದ ಜೀವಿತವು ಸತತವಾಗಿ ಬದಲಾವಣೆ ಹೊಂದುತ್ತಲೇ ಇರುತ್ತದೆ. ಆದುದರಿಂದ ಅದನ್ನು ಸಜೀವವಾಗಿಡಬೇಕಾದ ಪ್ರಾಣಶಕ್ತಿ ಮೂರು ವಿಧಗಳಲ್ಲಿ ಮುಖ್ಯವಾಗಿ ಒದಗಬೇಕಾಗಿರುತ್ತದೆ. ದೇಹಕ್ಕೆ ಅವಶ್ಯಕವಾದ ಆಹಾರ, ಉಚ್ಛ್ವಾಸ ನಿಶ್ವಾಸಗಳಿಗೆ ಅವಶ್ಯಕವಾದ ಗಾಳಿ ಮತ್ತು ಮೂರು ವಿಧವಾದ ಪ್ರಾಣಶಕ್ತಿ ಅದರ ಸಜೀವ ಬಾಳ್ವಿಗೆ ಅವಶ್ಯಕವಾಗಿರುತ್ತವೆ. ಈ ಪ್ರಾಣ ಶಕ್ತಿಯು ಮೂಲಭೂತವಾಗಿ ಒಂದು ಬಲ, ಆದರೆ ಅದು ಪ್ರಕೃತಿಯೊಡನೆ ಮಿಶ್ರವಾಗಿರುವಾಗ ತುಂಬಾ ನಾಜೋಕಾದ ಮೂಲವಸ್ತುವಂತೆ ಕಂಡು ಬರುತ್ತದೆ. ಈ ಪ್ರಾಣ ಶಕ್ತಿಯು ಎಲ್ಲ ಪ್ರಕೃತಿ ಸಾಂದ್ರತಾ ಮಟ್ಟಗಳಲ್ಲೂ (ಎಂದರೆ ಮೇಲಿನ ಲೋಕಗಳಲ್ಲೂ ಸಹ) ಇರುತ್ತದೆ. ಆದರೆ ಈಗ ನಾವು ಗಮನ ಕೊಡಬೇಕಾಗಿರುವುದು ಸ್ಥೂಲಲೋಕಕ್ಕೆ ಸಂಬಂಧಪಟ್ಟಂತೆ ಅಭಿವ್ಯಕ್ತವಾಗಿರುವ ಅದರ ಅಂತಸ್ತಿಗೆ ಮಾತ್ರ.

ಈ ಪ್ರಾಣಶಕ್ತಿಯನ್ನು ಪೂರ್ಣ ಅರ್ಥಮಾಡಿಕೊಳ್ಳಬೇಕಾದರೆ ಅದರ ವಾಹಿನಿಯಾದ ಈ ಪ್ರಾಣಮಯಕೋಶದ ಸ್ವರೂಪ ಮತ್ತು ಲಕ್ಷಣಗಳನ್ನೂ ಸಹ ತಿಳಿದುಕೊಳ್ಳಬೇಕಾದುದು ಅವಶ್ಯಕ. ಈ ದೇಹದ ಸಮಗ್ರ ತಿಳುವಳಿಕೆಯನ್ನು ಎ.ಇ. ಪೋವೆಲ್ ಎಂಬ ಗ್ರಂಥಕರ್ತರು ತಾವು ಅನೇಕ ಗ್ರಂಥಗಳಲ್ಲಿ ಬರೆದಿರುವ ವಿಷಯಗಳನ್ನೆಲ್ಲ ಸಂಗ್ರಹಿಸಿ ತಮ್ಮ ''ಅತಿವಾಯು ತತ್ವದ ಪ್ರತೀಕ'' (The Etheric Double) ಎಂಬ ಗ್ರಂಥದಲ್ಲಿ ಸಂಗ್ರಹಿಸಿ ಬರೆದಿರುತ್ತಾರೆ.

ಕೇಂದ್ರಗಳು

ಚಕ್ರಗಳು ಎಂಬ ಶಕ್ತಿಕೇಂದ್ರಗಳ ದ್ವಾರ ಪ್ರಾಣಶಕ್ತಿಯು ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹರಿಯುತ್ತದೆ. ಈ ಪ್ರಾಣದೇಹದ ಮೇಲ್ಭಾಗದಲ್ಲಿರುವ ಶಕ್ತಿ ಕೇಂದ್ರಗಳನ್ನು ಒಳಭಾಗ ತಗ್ಗಿದ ಬಟ್ಟಲಂತಿರುವ ಚಕ್ರಗಳನ್ನು ದಿವ್ಯ ದೃಷ್ಟಿಯುಳ್ಳವರು ಯಾರು ಬೇಕಾದರೂ ನೋಡಬಹುದು. ಆದರೆ ಇನ್ನೂ ಬೆಳೆಯದೆ ಇರುವ ಸಾಧಾರಣ ಮನುಷ್ಯರಲ್ಲಿ ಎರಡು ಅಂಗುಲಗಳವರೆಗೆ ವಿಸ್ತರಿಸುವ ಮುಸುಕು ಮುಸುಕಾಗಿ ಪ್ರಕಾಶಿಸುತ್ತಿರುವ ಚಕ್ರಗಳಿರುತ್ತವೆ. ಆದರೆ ದಿವ್ಯ ದೃಷ್ಟಿಯನ್ನು ಬೆಳೆಸಿಕೊಂಡಿರುವಂತಹ ಮುಂದುವರಿದಂತಹ ಮಾನವರಲ್ಲಿ ಅವು ಸೂರ್ಯನಂತೆ ಪ್ರಕಾಶಮಾನವಾಗಿ ಕಂಗೊಳಿಸುತ್ತಿರುವ ವಿಶಾಲವಾದ ಚಕ್ರಗಳಂತೆ ಕಂಡು ಬರುತ್ತವೆ. ಅವುಗಳು ಸ್ಥೂಲ ದೇಹದ ಅಂಗಗಳಿಗೆ ಸಂಬಂಧಪಟ್ಟಂತೆ ಕೆಲವು ಸಂದರ್ಭಗಳಲ್ಲಿ ವಿವರಿಸಲ್ಪಡುತ್ತವೆ. ವಾಸ್ತವವಾಗಿಯೂ ಅವು ಸ್ಥೂಲ ದೇಹಕ್ಕಿಂತಲೂ ಮುಂದುವರಿದು ಪ್ರಸರಿಸಿರುವ ಪ್ರಾಣಮಯ ಕೋಶದ ಮೇಲ್ಭಾಗದಲ್ಲಿ ಕಂಡು ಬರುತ್ತವೆ. ಸುತ್ತುತ್ತಿರುವ ಹೂವಿನ ಮಧ್ಯಭಾಗವನ್ನು ದೃಷ್ಟಿಸಿ ನೋಡುತ್ತಿದ್ದರೆ ಅವುಗಳ ಸ್ವರೂಪವು ಎದ್ದು ಕಾಣುವಂತೆ ಆಗುತ್ತದೆ. ಪ್ರತಿಯೊಂದು ಚಕ್ರದ ಬೇರೂ ಬೆನ್ನು ಮೂಳೆಯಲ್ಲಿರುತ್ತದೆ. ಬೆನ್ನು ಮೂಳೆಯೂ ಒಂದು ಕೊಂಬೆಯಂತೆ ಭಾವಿಸಲ್ಪಟ್ಟರೆ ಚಕ್ರಗಳು ಅದರಿಂದ ಹೊರ ಹೊಮ್ಮಿದ ವಿಕಸಿತ ಹೂಗಳಂತೆ ಇರುತ್ತದೆ.(ಚಿತ್ರ-ಪ್ರಾಣಶಕ್ತಿಯ ಪ್ರವಾಹಗಳು) ಈಗ ನಾವು ಬರೆದು ವಿವರಿಸಬೇಕೆಂದಿರುವ ಏಳು ಚಕ್ರಗಳಿವು. ಮೂಲಾಧಾರ ಚಕ್ರ-ಇದು ಬೆನ್ನು ಮೂಳೆಯ ಕೇವಲ ಕೆಳ ತುದಿಯಲ್ಲಿರುತ್ತದೆ. ಸ್ವಾಧಿಷ್ಠಾನ - ಹೊಟ್ಟೆಯ ಎಡಭಾಗದಲ್ಲಿರುವ ಗುಲ್ಮದ ಹತ್ತಿರವಿರುತ್ತದೆ. ಮಣಿಪುರ - ಒಕ್ಕಳಿನ ಮೇಲ್ಭಾಗದಲ್ಲಿರುತ್ತದೆ. ಅನಾಹತ - ಹೃದಯದ ಮೇಲ್ಭಾಗದಲ್ಲಿರುತ್ತದೆ. ವಿಶುದ್ದ-ಕತ್ತಿನ ಮುಂಭಾಗದಲ್ಲಿರುತ್ತದೆ. ಆಜ್ಞಾಚಕ್ರ-ಭ್ರೂಮಧ್ಯದಲ್ಲಿರುತ್ತದೆ. ಸಹಸ್ರಾರ ಚಕ್ರ-ಮಂಡೆಯ ಮೇಲೆ ಇರುತ್ತದೆ.


ಇವೆಲ್ಲವೂ ಬಿಡುವಿಲ್ಲದೆ ಸುತ್ತುತ್ತಲೇ ಇರುತ್ತವೆ. ಈ ಚಕ್ರಗಳಲ್ಲಿ ಪ್ರತಿಯೊಂದಕ್ಕೂ ಮೇಲಿನ ಲೋಕದಿಂದ ಒಂದು ವಿಧವಾದ ದಿವ್ಯ ಶಕ್ತಿಯು ವರ್ಷಿಸಲ್ಪಡುತ್ತಲೇ ಇರುತ್ತದೆ. ಈ ದಿವ್ಯ ಶಕ್ತಿಯು ವಿಷ್ಣುವಿನಿಂದ ಹೊರ ಹೊಮ್ಮುತ್ತದೆ. ಈ ಶಕ್ತಿಯೇ ಮೂಲಭೂತವಾದುದು. ಈ ಮೂಲ ಭೂತವಾದ ಶಕ್ತಿಯು ಸಪ್ತ ಸ್ವಭಾವದ್ದು. ಈ ಏಳು ಶಕ್ತಿಗಳೂ ಕೂಡ ಪ್ರತಿಯೊಂದು ಕೇಂದ್ರದಲ್ಲೂ ಕೆಲಸ ಮಾಡತ್ತವೆ. ಆದರೆ ಅವುಗಳಲ್ಲಿ ಒಂದೊಂದು ಶಕ್ತಿ ವಿಶೇಷವು ಒಂದೊಂದು ಚಕ್ರದಲ್ಲಿ ಹೆಚ್ಚು ಪ್ರಭಾವಯುತವಾಗಿ ಕೆಲಸ ಮಾಡುತ್ತದೆ. ಈ ರೀತಿ ವರ್ಷಿಸಲ್ಪಡುವ ಶಕ್ತಿಯಿಲ್ಲದಿದ್ದರೆ ಸ್ಥೂಲ ದೇಹವು ಸಜೀವವಾಗಿರಲು ಸಾಧ್ಯವಾಗುತ್ತಿರಲಿಲ್ಲ. ಅದುದರಿಂದ ಮೇಲ್ಕಂಡ ಚಕ್ರಗಳು ಪ್ರತಿಯೊಬ್ಬ

ಬೆಳೆದ ಮನುಷ್ಯರಲ್ಲೂ ಸತತವಾಗಿ ಕೆಲಸ ಮಾಡುತ್ತವೆ. ಆದರೆ ಸಾಧರಣ, ಇನ್ನೂ ಬೆಳೆಯದೆ ಇರುವ ಮಾನವರಲ್ಲಿ ಮಾತ್ರ ಈ ಶಕ್ತಿಯು ಅಷ್ಟಾಗಿ ಪ್ರಬಲವಾಗಿ ಕೆಲಸ ಮಾಡುತ್ತಿಲ್ಲ, ಕೇವಲ ಸಜೀವವಾಗಿ ಬದುಕಿರಲು ಅನುಕೂಲಿಸುವಷ್ಟರಮಟ್ಟಿಗೆ ಮಾತ್ರ ಮಂದಗತಿಯಲ್ಲಿ ಕೆಲಸ ಮಾಡುತ್ತಿವೆ. ಸಾಕಾದಷ್ಟು ಮಟ್ಟಿಗೆ ಬೆಳೆದ ಮನುಷ್ಯನಲ್ಲಿ ಚಕ್ರಗಳು ಪ್ರಕಾಶಮಾನವಾಗಿ ಕಂಗೊಳಿಸುತ್ತಿರುತ್ತವೆ. ಏಕೆಂದರೆ ಹೆಚ್ಚು ಪ್ರಮಾಣದ ಶಕ್ತಿಯು ಅಂತಹವರಿಗೆ ವರ್ಷಿಸಲ್ಪಡುತ್ತಿರುತ್ತದೆ. ಅಂತಹವರಲ್ಲಿ ಉನ್ನತ ಮಟ್ಟದ ಶಕ್ತಿ ವಿಶೇಷಗಳು ಬೆಳೆದಿರುವುದಲ್ಲದೇ ಇನ್ನೂ ಹೆಚ್ಚು ಅವಕಾಶಗಳ ಸುಯೋಗವಿರುತ್ತದೆ.

ಶಕ್ತಿ ಕೇಂದ್ರಗಳ (ಸುಳಿಗಳ) ರೂಪಗಳು

ಈ ದಿವ್ಯ ಶಕ್ತಿಯು ಪ್ರತಿಯೊಂದು ಚಕ್ರದ ಕೇಂದ್ರಕ್ಕೆ ಲಂಬವಾಗಿ ವರ್ಷಿಸಲ್ಪಡುತ್ತಿರುವಾಗ ಆ ಚಕ್ರವನ್ನು ಸುತ್ತಿಕೊಂಡು ಹರಿಯುವಂತಹ ಎಂದರೆ ಪ್ರಾಣಮಯಕೋಶದ ಮೇಲ್ಭಾಗದಲ್ಲಿ ಎರಡನೆಯ ದರ್ಜೆ ಶಕ್ತಿವಾಹಿನಿಯನ್ನು ಉತ್ಪತ್ತಿ ಮಾಡುತ್ತದೆ. ಅಲ್ಲದೆ ಆ ದಿವ್ಯ ಪ್ರಥಮ ದರ್ಜೆಯ ಶಕ್ತಿಯು ಬೈಸಿಕಲ್ಲಿನ ಮಧ್ಯ ಭಾಗದ ಹಬ್ಬಿನಿಂದ ಸುತ್ತಲೂ ನೇರವಾದ ತಂತಿಗಳು ಚಾಚಿಕೊಂಡಿರುವಂತೆ ಮತ್ತೊಂದು ಶಕ್ತಿ ವಿಶೇಷವನ್ನು ಪ್ರಸರಿಸುತ್ತದೆ. ಈ ವಿಧವಾದ ಎರಡನೆ ದರ್ಜೆ ಶಕ್ತಿ ವಿಶೇಷಗಳು ಕಾಮದೇಹವನ್ನೂ ಪ್ರಾಣಮಯಕೋಶವನ್ನೂ ಒತ್ತಾದ ಸಂಬಂಧವುಳ್ಳವಂತೆ ಮಾಡುತ್ತದೆ. ಈ ರೀತಿ ಬೈಸಿಕಲ್ಲಿನ ಚಕ್ರದ ತಂತಿಗಳಂತೆ ಪ್ರಸರಿಸುವಂತಹವುಗಳ ಸಂಖ್ಯೆಯು ಚಕ್ರ ಚಕ್ರಕ್ಕೂ ಭಿನ್ನವಾಗಿರುತ್ತದೆ. ಆದುದರಿಂದಲೇ ಪ್ರತಿಯೊಂದು ಚಕ್ರದಲ್ಲಿನ ಎಸಳುಗಳ ಸಂಖ್ಯೆಯು ಭಿನ್ನವಾಗಿರುವುದಕ್ಕೆ ಕಾರಣ. ಆದುದರಿಂದಲೇ ಭಿನ್ನ ಭಿನ್ನ ಎಸಳುಗಳುಳ್ಳ ಪುಷ್ಪಗಳಂತೆ ಹಿಂದೂ ಸಂಸ್ಕೃತಿಯಲ್ಲಿ ಇವುಗಳನ್ನು ಕರೆದಿದೆ. (ಚಿತ್ರ- 1)

ಎರಡನೆಯ ದರ್ಜೆಯ ಶಕ್ತಿ ವಿಶೇಷಗಳಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಸ್ಪಂದಗತಿಯಿರುತ್ತದೆ. ಸ್ಥೂಲ ಲೋಕದ ಬೆಳಕಿನಿಂದ ಉದ್ಭವವಾಗುವ ಬಣ್ಣಗಳ ಸ್ಪಂದಗತಿಯಂತೆ ಚಕ್ರದ ಸುತ್ತಲೂ ವ್ಯಾಪಿಸಿಕೊಂಡು ಹರಿಯುತ್ತಿರುವ ಶಕ್ತಿವಿಶೇಷವು ಅದರೊಳಗೆ ಸುತ್ತುತ್ತಿರುವ ಶಕ್ತಿಯ ವಿಶೇಷಗಳಿಗಿಂತಲೂ ಹೆಚ್ಚು ತೀವ್ರವಾದ ಗತಿಯಲ್ಲಿ ಸ್ಪಂದಿಸುತ್ತದೆ. ಪ್ರತಿಯೊಂದು ಚಕ್ರದಲ್ಲಿರುವ ಎಸಳುಗಳು ಆ ರೀತಿ ಸುತ್ತುತ್ತಿರುವ ಶಕ್ತಿ ವಿಶೇಷಗಳನ್ನು ಪ್ರತಿನಿಧಿಸುತ್ತವೆ. ಎರಡನೆಯ ದರ್ಜೆ ಶಕ್ತಿ ವಿಶೇಷವು ಬೈಸಿಕಲ್ಲಿನ ಚಕ್ರದ ತಂತಿಗಳಂತಿರುವ ಪ್ರಥಮ ದರ್ಜೆಯ ಪ್ರತಿಯೊಂದರ ಸುತ್ತಲೂ ವ್ಯಾಪಿಸಿಕೊಂಡು ಸುತ್ತುತ್ತದೆ. ಈ ರೀತಿ ಶಕ್ತಿ ವಿಶೇಷಗಳು ವಿಧ ವಿಧವಾಗಿ ವ್ಯಾಪಿಸಿಕೊಂಡು ಒಂದು ಬಿದರು ಬುಟ್ಟಿಯ ಮಾದರಿಯಲ್ಲಿ ಹೆಣೆದುಕೊಂಡು ಸುತ್ತುತ್ತಿರುವುದರಿಂದ ವಿಧ ವಿಧವಾದ ಎಸಳುಗಳುಳ್ಳ ಹೂಗಳಂತೆ ಅವುಗಳನ್ನು ಕರೆದಿರುವುದು. ಈ ಪ್ರತಿಯೊಂದು ಎಸಳಿಗೂ



(ಚಿತ್ರ - 1)

ನವಿಲಿನ ಗರಿಯಂತೆ ಹೊಳೆಯುವ ಬಣ್ಣವಿರುತ್ತದೆ. ಆ ವಿಧ ವಿಧವಾದ ಬಣ್ಣಗಳಲ್ಲಿ ಒಂದು ಪ್ರಧಾನವಾಗಿರುತ್ತದೆ.

ನಿರೂಪಣೆ

ಈ ಉದಾಹರಣೆಗಳು ದಿವ್ಯದೃಷ್ಟಿಗೆ ಗೋಚರವಾದಂತೆ ಚಿತ್ರಿಸಲ್ಪಟ್ಟಿರುತ್ತವೆ. ಆದರೆ ಚಿತ್ರಗಳಿಗೆ ಸಂಬಂಧಪಟ್ಟ ಬಣ್ಣಗಳು ಚಕ್ರಗಳ ಪ್ರಕಾಶಮಾನವಾದ ಬಣ್ಣಗಳನ್ನು ಹೋಲುತ್ತಿಲ್ಲ. ಈ ಭೌತಿಕ ವಾಸ್ತವಾಂಶಗಳೆಲ್ಲ ಕೇವಲ ಪರಿಮಿತಿಯುಳ್ಳವು. ಆದರೆ ಈ ಚಿತ್ರಗಳು ಚಕ್ರಗಳ ಸ್ವರೂಪವನ್ನು ಕರಾರುವಾಕ್ಕಾಗಿ ಪ್ರತಿನಿಧಿಸುತ್ತವೆ. ಆದರೆ ಈ ಚಕ್ರಗಳು-ಎಂದರೆ ಶಕ್ತಿ ಕೇಂದ್ರಗಳು ಮಾನವರಲ್ಲೆಲ್ಲ ಒಂದೇ ಸಮನಾಗಿರದೇ ಅವರವರ ಬೆಳವಣಿಗೆ ಮಟ್ಟಕ್ಕೆ ಅನುಗುಣವಾಗಿ ಗಾತ್ರದಲ್ಲೂ ಮತ್ತು ಹೊಳಪಿನಲ್ಲೂ ಭಿನ್ನ ಭಿನ್ನವಾಗಿರುತ್ತವೆ. ಅಲ್ಲದೆ ಒಬ್ಬನೇ ಮನುಷ್ಯನಲ್ಲೂ ಕೂಡ ಕೆಲವು ಇತರೆಯವುಗಳಿಗಿಂತ ಹೆಚ್ಚು ವಿಕಾಸಗೊಂಡಿರುವುದಕ್ಕೆ ಸಾಧ್ಯ. ಈ ಗ್ರಂಥದಲ್ಲಿ ಚಿತ್ರಿಸಿರುವ ಚಕ್ರಗಳು ಮಾನವರಲ್ಲಿ ಕಾಣಬಹುದಾದಷ್ಟು ಗಾತ್ರವನ್ನು ಹೋಲುತ್ತಿದ್ದಾಗ್ಯೂ ಸಹಸ್ರಾರ ಚಕ್ರ ಮಾತ್ರ ಅದು ಸಹಜವಾಗಿ ಕಂಡುಬರುವ ಗಾತ್ರಕ್ಕಿಂತಲೂ ಹೆಚ್ಚು ವಿಕಸಿತ ಪ್ರಮಾಣದಲ್ಲಿ ಚಿತ್ರಿಸಲ್ಪಟ್ಟಿರುತ್ತದೆ. ಏಕೆಂದರೆ ಅದರ ಅದ್ಭುತ ವಿವರಗಳನ್ನೆಲ್ಲ ಪರಿಷ್ಕಾರವಾಗಿ ಕಾಣುವಂತೆ ಮಾಡಬೇಕೆಂಬ ಉದ್ದೇಶದಿಂದ, ಒಬ್ಬಾನೊಬ್ಬ ಮನುಷ್ಯನಲ್ಲಿ ಕೆಲವು ವಿಶೇಷ ಗುಣಗಳು ಹೆಚ್ಚು ವಿಕಸಿತವಾಗಿದ್ದ ಪಕ್ಷದಲ್ಲಿ ಅಂತಹ ಬೆಳವಣಿಗೆಯನ್ನು ಸೂಚಿಸುವಂತಹ ಚಿತ್ರದಗಾತ್ರ ಮತ್ತು ಪ್ರಕಾಶಗಳು ಎದ್ದು ಕಾಣುವಂತೆ ಬೆಳದಿರುತ್ತವೆ. ಅಂತಹ ಚಕ್ರದ ಮೂಲಕ ಸ್ವರ್ಣ ವರ್ಣದ ತೇಜಸ್ಸು ಹೊರ ಚಿಮ್ಮುತ್ತಿರುತ್ತದೆ. ಕರ್ನಲ್ ಆಲ್ಕಾಟ್ ಬರೆದಿರುವ (old Diary Leaves) ಎಂಬ ಗ್ರಂಥದ ಒಂದನೆಯ ಸಂಪುಟದ 364 ನೆಯ ಪುಟದಲ್ಲಿ ಚಿತ್ರಿಸಲ್ಪಟ್ಟಿರುವ ಒಬ್ಬ ಮಹಾಶಯನ ಚಕ್ರದ ಚಿತ್ರವನ್ನು ನೋಡಿದರೆ ಅದರ ಸ್ವರೂಪವು ಸ್ವಲ್ಪ ಮಟ್ಟಿಗೆ ಅರ್ಥವಾಗಬಹುದು.

ಈ ಚಕ್ರಗಳು ಮೂರು ಗುಂಪುಗಳಾಗಿ ಸಹಜವಾಗಿ ವಿಂಗಡವಾಗುತ್ತವೆ. ಕೇವಲ ಕೆಳ ಮಟ್ಟದವು, ವ್ಯಕ್ತಿ ಮಧ್ಯಸ್ತಿಕೆ ಮತ್ತು ಉನ್ನತ ಮಟ್ಟದ್ದವು. ಶರೀರ ಬೆಳವಣಿಗೆಗೆ ಸಂಬಂಧ ಪಟ್ಟವು, ವೈಯಕ್ತಿಕ ಹಾಗೂ ಆಧ್ಯಾತ್ಮಿಕ ಮಟ್ಟದವು ಎಂದು ಕರೆಯಲ್ಪಡುತ್ತವೆ.

ಪ್ರಥಮ ಮತ್ತು ಎರಡನೆಯ ಚಕ್ರಗಳು ಕೇವಲ ಕೆಲವೇ ಎಸಳುಗಳುಳ್ಳವು. ಅಲ್ಲದೆ ಅವುಗಳೊಳಕ್ಕೆ ವರ್ಷಿಸಲ್ಪಡುವ ಶಕ್ತಿ ವಿಶೇಷಗಳು ಕೇವಲ ಸ್ಥೂಲ ಲೋಕಕ್ಕೆ ಸಂಬಂಧಪಟ್ಟವು-ಮೂಲಾಧಾರ ಚಕ್ರವು ಮೂಲ ಕುಂಡಲಿನಿ ಶಕ್ತಿಯನ್ನು

ಭೂಮಿಯಿಂದಲೂ ಗುಲ್ಮಾ ಚಕ್ರವು ಸೂರ್ಯನಿಂದಲೂ ಪ್ರಾಣಶಕ್ತಿಯನ್ನು ಪಡೆಯುತ್ತವೆ. ಮಧ್ಯದ ಗುಂಪಿನವು-ಎಂದರೆ ಹೊಕ್ಕುಳ ಹೃದಯ ಮತ್ತು ಗಂಟಲುಗಳಿಗೆ ಸಂಬಂಧ ಪಟ್ಟವು-ಇವುಗಳಿಗೆ ವರ್ಷಿಸಲ್ಪಡುವ ಶಕ್ತಿ ವಿಶೇಷಗಳು ಮಾನವನ ದೇಹಾತ್ಮಕ್ಕೆ ಸಂಬಂಧ ಪಟ್ಟವು. ಮೂರನೆಯದು ಕಾಮದೇಹದ ಕೆಳಮಟ್ಟದಿಂದಲೂ ನಾಲ್ಕನೆಯದು ಕಾಮದೇಹದ ಉನ್ನತಮಟ್ಟದಿಂದಲೂ ಐದನೆಯದು ರೂಪಮನಸ್ತತ್ವದಿಂದಲೂ ಹೊರಹೊಮ್ಮತಕ್ಕವು. ಇವೆಲ್ಲವೂ ಸ್ಥೂಲದೇಹದ ನರ ಗ್ರಂಥಿಗಳಿಗೆ ಪೋಷಣೆ ಕೊಡತಕ್ಕವು. ಆರನೆಯ ಮತ್ತು ಏಳನೆಯ ಚಕ್ರಗಳು ಉನ್ನತಮಟ್ಟದುವು. ಇವು ಪಿಟ್ಯುಟರಿ ಮತ್ತು ಪೀನಿಯಲ್ ಗ್ರಂಥಿಗಳಿಗೆ ಸಂಬಂಧಪಟ್ಟವು. ಒಂದು ಗೊತ್ತಾದ ಆಧ್ಯಾತ್ಮಿಕ ಬೆಳವಣಿಗೆ ಮಟ್ಟವನ್ನು ತಲುಪಿದ ಮಾನವನಲ್ಲಿ ಮಾತ್ರ ಚಟುವಟಿಕೆಯಿಂದ ಕೆಲಸ ಮಾಡತಕ್ಕುವುಗಳಾಗುತ್ತವೆ.

ಈ ಚಕ್ರಗಳಿಗೆ ಸಂಬಂಧಪಟ್ಟ ಶಕ್ತಿ-ಕೇಂದ್ರಗಳ ಎಸಳುಗಳು ಮಾನವನ ನೀತಿ ಮಟ್ಟವನ್ನು ಪ್ರತಿನಿಧಿಸುತ್ತವೆ. ನೀತಿ ನಡವಳಿಕೆಯಲ್ಲಿ ಮುಂದುವರಿದಂತಹ ವ್ಯಕ್ತಿಗಳಲ್ಲಿ ಈ ಶಕ್ತಿ ಕೇಂದ್ರಗಳು ಚಟುವಟಿಕೆಯಿಂದ ಕೆಲಸ ಮಾಡತಕ್ಕವುಗಳಾಗಿರುತ್ತವೆ. ಉದಾಹರಣೆಗಾಗಿ ಹೃದಯಚಕ್ರವು ಧ್ಯಾನಬಿಂದೋ ಉಪನಿಷತ್ತಿನ ಪ್ರಕಾರ ಭಕ್ತಿ-ಸೋಮಾರಿತನ- ಕೋಪ-ಔದಾರ್ಯ ಮುಂತಾದ ಗುಣಗಳಿಗೆ ಸಂಬಂಧಪಟ್ಟವು ಎಂಬುದಾಗಿ ಬರೆಯಲ್ಪಟ್ಟಿದೆ. ಆದರೆ ನನ್ನ ಅನುಭವ ಪೂರ್ವಕವಾದ ಪರಿಶೋಧನೆಯಲ್ಲಿ ಈ ನಿಯಮಕ್ಕೆ ತಕ್ಕ ನಿದರ್ಶನಗಳು ಕಂಡು ಬರುತ್ತಿಲ್ಲ. ನಾನು ಕೆಲವರನ್ನು ಖುದ್ದಾಗಿ ಸಂಧಿಸಿರುತ್ತೇನೆ. ಅಂತಹವರು ನೀತಿ ನಡವಳಿಕೆಯಲ್ಲಿ ಅಷ್ಟು ಉನ್ನತ ಮಟ್ಟದವರಲ್ಲದಿದ್ದಾಗ್ಯೂ ಅಂತಹರಲ್ಲಿ ಚಕ್ರಗಳು ಚಟುವಟಿಕೆಯಿಂದ ಕೆಲಸ ಮಾಡತಕ್ಕ ಪರಿಸ್ಥಿತಿಯನ್ನೂ ಮತ್ತೆ ಕೆಲವರು ನೀತಿ ನೈಪುಣ್ಯತೆ ಪಡೆದಿದ್ದಾಗ್ಯೂ ಅಂತಹವರಲ್ಲಿ ಚಕ್ರಗಳು ಅಷ್ಟು ಚಟುವಟಿಕೆಯಿಂದ ಕೆಲಸ ಮಾಡತಕ್ಕ ಪರಿಸ್ಥಿತಿಯಿರುವುದಿಲ್ಲವೆಂಬಂಶವನ್ನೂ ಮನಗಂಡಿರುತ್ತೇನೆ. ಇದರಿಂದ ಚಕ್ರಗಳ ಬೆಳವಣಿಗೆ ಮಟ್ಟಕ್ಕೂ ನೀತಿ ನೈಪುಣ್ಯಕ್ಕೂ ಸಂಬಂಧವಿರುವುದಿಲ್ಲವೆಂಬಂಶವು ಎದ್ದು ಕಂಡು ಬರುತ್ತದೆ.

ಆದಾಗ್ಯೂ ಮೇಲ್ಕಂಡ ನಿಯಮವನ್ನು ದೃಢೀಕರಿಸತಕ್ಕ ನಿದರ್ಶನಗಳು ದೊರೆತಿವೆ, ಪ್ರಪ್ರಥಮ ವಿಶೇಷವು ಒಂದೇ ಸಮನಾಗಿ ಪ್ರತಿಯೊಂದು ಎಸಳಿನ ಮುಲಕ ಹಾದು ಹೋಗುತ್ತಿದ್ದಾಗ್ಯೂ ಪ್ರತಿಯೊಂದು ಎಸಳಿನ ಬಣ್ಣವು ಸ್ವಲ್ಪ ಮಟ್ಟಿಗೆ ಭಿನ್ನವಾಗಿರುತ್ತದೆ; ಏಕೆಂದರೆ ಒಳಕ್ಕೆ ಧುಮುಕುವ ಶಕ್ತಿ ವಿಶೇಷವು ತನ್ನ ಒಳ ಭೇದಗಳಿಗನುಗುಣವಾಗಿ ಭಿನ್ನ-ಭಿನ್ನ ಗುಣವನ್ನು ವ್ಯಕ್ತಪಡಿಸುತ್ತದೆ. ಎರಡನೆಯ ದರ್ಜೆಯ ಶಕ್ತಿಯು ಪ್ರತಿಯೊಂದು ಎಸಳಿನ ಮೂಲಕ ಹಾದು ಹೋಗುವಾಗ ಆ ಪ್ರಥಮ ಶಕ್ತಿ ವಿಶೇಷದಿಂದ ಸ್ವಲ್ಪ ಮಟ್ಟಿಗೆ ಬದಲಾವಣೆಗೊಂಡು ತನ್ನ ಬಣ್ಣದಲ್ಲಿ ಸ್ವಲ್ಪ ವ್ಯತ್ಯಾಸವನ್ನು ವ್ಯಕ್ತಪಡಿಸುತ್ತದೆ. ಈ ಭಿನ್ನತೆಗೆ ಸಂಬಂಧಪಟ್ಟ ಲಕ್ಷಣಗಳು ನೀತಿ ನೈಪುಣ್ಯದ ಬೆಳವಣಿಗೆಗೆ ಸಂಬಂಧಪಟ್ಟಿರಬಹುದು.

ಅಂತಹ ಬಣ್ಣಗಳ ಪ್ರಕಾಶವು ಎದ್ದು ಕಾಣುವಂತಿದ್ದಾಗ ಉನ್ನತ ಮಟ್ಟದ ನೀತಿ ನೈಪುಣ್ಯತೆಯನ್ನು ಮಂಕಾಗಿದ್ದಾಗ ಅವುಗಳ ಕ್ಷೀಣತೆಯನ್ನು ಪ್ರತಿನಿಧಿಸಬಹುದು ಎಂಬುದಾಗಿ ಊಹಿಸಬೇಕಾಗಿದೆ.

ಮೂಲಾಧಾರ ಚಕ್ರ

ಒಂದನೆಯ ಚಕ್ರ ಮೂಲಾಧಾರ ಚಕ್ರ. ಇದು ಬೆನ್ನು ಮೂಳೆಯ ತಳ-ಭಾಗದಲ್ಲಿರುವಂಥದು. ಪ್ರಥಮ ಶಕ್ತಿ ವಿಶೇಷವು ನಾಲ್ಕು ಎಸಳುಗಳ ಮೂಲಕ ಪ್ರಸರಿಸುತ್ತದೆ. ಆದುದರಿಂದ ಅದರ ಪ್ರಸಾರವು ನಾಲಕ್ಕು ಸಮಭಾಗಗಳಾಗಿ ವಿಂಗಡವಾಗಿರುತ್ತದೆ. ಕೆಂಪು ಮತ್ತು ಕಿತ್ತಲೆ ವರ್ಣಗಳು ಒಂದಾದಮೇಲೊಂದರಂತೆ ಪುನರಾವರ್ತನೆಗೊಳ್ಳುತ್ತಿರುವಂತೆಯೂ ಅವುಗಳ ಮಧ್ಯೆ ಯಾವ ಬಣ್ಣವೂ ಇಲ್ಲದ ಸಂದುಗಳಂತೆಯೂ ವಿಂಗಡವಾಗಿವೆ. ಈ ನಾಲ್ಕಕ್ಕೂ ಎಸಳುಗಳುಳ್ಳ ರೂಪವು ಪ್ರಜ್ವಲಿಸುವ ಶಿಲುಬೆಯನ್ನು ಪ್ರತಿನಿಧಿಸುತ್ತದೆ. ಈ ಜಾಜ್ವಲ್ಯಮಾನವಾದ ಶಿಲುಬೆಯು ಅದರಲ್ಲಿ ಸುಪ್ತವಾಗಿರುವ ಮೂಲಕುಂಡಲಿಯನ್ನು ಪ್ರತಿನಿಧಿಸುತ್ತದೆ. ಇದು ಶಕ್ತಿಯುತವಾಗಿ ಕೆಲಸ ಮಾಡುತ್ತಿರುವಾಗ ಅದರ ಪ್ರಕಾಶವು ಕೆಂಪು-ಕಿತ್ತಲೆ ಬಣ್ಣಗಳಿಂದ ಪ್ರಕಾಶಿಸುವ ಅಗ್ನಿಜ್ವಾಲೆಯಂತೆ ಕಂಡು ಬರುತ್ತದೆ. ಈ ಬಣ್ಣವು ಗುಲ್ಮಾ ಚಕ್ರದಿಂದ ಹೊರಸೂಸಿ ಬರುವಂತಹ ಪ್ರಾಣ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಇದರಂತೆಯೇ ಪ್ರತಿಯೊಂದು ಚಕ್ರದಲ್ಲೂ ಧುಮುಕಿ ಬರುವ ಪ್ರಾಣಶಕ್ತಿಯ ಬಣ್ಣವು ರೂಪುಗೊಳ್ಳುತ್ತದೆ.

ಗುಲ್ಮಾ ಚಕ್ರ

ಈ ಎರಡನೆಯ ಚಕ್ರವು ಗುಲ್ಮಾದ ಹತ್ತಿರವಿರುವಂಥದು. ಸೂರ್ಯನಿಂದ ಬರುವ ಪ್ರಾಣಶಕ್ತಿಯನ್ನು ಶರೀರ ಪ್ರಕೃತಿಗೆ ತಕ್ಕಂತೆ ಬದಲಾಯಿಸಿ ಅದನ್ನು ವಿಭಾಗ ಮಾಡಿ ಪ್ರಸಾರ ಮಾಡುವ ಕೆಲಸಕ್ಕೆ ಸಂಬಂಧಪಟ್ಟುದು. ಈ ಪ್ರಾಣ ಶಕ್ತಿಯು ಆರು ಪ್ರವಾಹಗಳಲ್ಲಿ ಈ ಚಕ್ರದಿಂದ ಪ್ರಸಾರವಾಗುತ್ತದೆ. ಏಳನೆಯ ಶಕ್ತಿ ವಿಶೇಷವು ಈ ಚಕ್ರದ ಕೇಂದ್ರಕ್ಕೆ ಸೆಳೆಯಲ್ಪಡುತ್ತದೆ. ಆದುದರಿಂದ ಈ ಚಕ್ರಕ್ಕೆ ಆರು ಎಸಳುಗಳಿರುವುದು. ಪ್ರತಿಯೊಂದು ಎಸಳಿಗೂ ತನ್ನದೇ ಆದ ಬಣ್ಣವಿರುವದು-ಇದು ವಿಶೇಷವಾಗಿ ಸೂರ್ಯನಂತೆ ಪ್ರಕಾಶಿಸತಕ್ಕ ಹೊಳಪುಳ್ಳದ್ದು. ಈ ಆರು ಎಸಳುಗಳಲ್ಲಿ ಪ್ರತಿಯೊಂದು ಪ್ರಾಣಶಕ್ತಿಯ ಒಂದೊಂದು ಬಣ್ಣವನ್ನು ಎಂದರೆ ಕೆಂಪು-ಕಿತ್ತಲೆ-ಹಳದಿ- ಹಸುರು-ನೀಲಿ ಮತ್ತು ನೇರಳೆ ಬಣ್ಣವನ್ನು ವ್ಯಕ್ತಪಡಿಸುತ್ತದೆ.

ಹೊಕ್ಕುಳು ಚಕ್ರ

ಈ ಚಕ್ರದೊಳಕ್ಕೆ ಧುಮುಕುವ ಶಕ್ತಿ ವಿಶೇಷವು ಹತ್ತು ಪ್ರವಾಹಗಳಲ್ಲಿ ಪ್ರಸಾರವಾಗುತ್ತದೆ. ಆದುದರಿಂದ ಈ ಚಕ್ರಕ್ಕೆ ಹತ್ತು ಎಸಳುಗಳಿರುವುದು. ಈ ಚಕ್ರವು ವೇದನೆಗಳು-ವಿಧ ವಿಧ ಭಾವನೆಗಳಿಗೆ ಸಂಬಂಧ ಪಟ್ಟದ್ದು. ಇದರ ಎದ್ದು ಕಾಣುವ ಬಣ್ಣವು ಕೆಂಪಿನ ವಿಧವಿಧ ಛಾಯೆಗಳಿಂದೊಡಗೂಡಿರುತ್ತದೆ. ಆದಾಗ್ಗೂ ಹೆಚ್ಚು ಹಸಿರು ಬಣ್ಣದಿಂದ ಮಿಳಿತವಾಗಿರುತ್ತದೆ. ಈ ವಿಭಾಗಗಳು ಕೆಂಪು ಮತ್ತು ಹಸಿರು ಬಣ್ಣದ ಪಟ್ಟಿಗಳು ಒಂದಾದ ಮೇಲೊಂದರಂತೆ ಕಾಣಿಸಿಕೊಳ್ಳುತ್ತವೆ.

ಹೃದಯ ಚಕ್ರ

ಈ ಚಕ್ರವು ಸ್ವರ್ಣವರ್ಣದಿಂದ ಕಂಗೊಳಿಸುತ್ತದೆ. ಇದು ಮುಖ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡವಾಗಿರುತ್ತದೆ. ಈ ಪ್ರತಿಯೊಂದು ಮುಖ್ಯ ಭಾಗದಲ್ಲೂ ಮೂರು ಒಳಭಾಗಗಳಿರುತ್ತವೆ. ಆದುದರಿಂದ ಹನ್ನೆರಡು ಎಸಳುಗಳಿರುವಂತೆ ಕಾಣಿಸಿಕೊಂಡಿದೆ. ಪ್ರಪ್ರಥಮ ಶಕ್ತಿಯು ಇದರೊಳಕ್ಕೆ ಧುಮುಕುವಾಗ ಹನ್ನೆರಡು ವಿಭಾಗಗಳಾಗಿ ಪ್ರಸರಿಸುತ್ತದೆ.

ಕೊರಳಿನ ಚಕ್ರ

ಈ ಚಕ್ರಕ್ಕೆ ಹದಿನಾರು ವಿಭಾಗಗಳಲ್ಲಿ ಶಕ್ತಿಯು ಧುಮುಕುವುದರಿಂದ ಇದಕ್ಕೆ ಹದಿನಾರು ಎಸಳುಗಳಿರುತ್ತವೆ. ಇದರ ಬಣ್ಣ ಎದ್ದು ಕಾಣುವಂತಹ ನೀಲಿ ಬಣ್ಣ. ಆದರೆ ಅದರ ಸಾಮಾನ್ಯ ಪರಿಣಾಮ ಬೆಳ್ಳಿಯಂತೆ ಪ್ರಕಾಶಿಸತಕ್ಕ ಸ್ವಭಾವದ್ದು. ನೀರಿನ ಅಲೆಯ ಮೇಲೆ ಪ್ರಕಾಶಮಾನವಾಗಿ ಬಿದ್ದಿರುವ ಬೆಳದಿಂಗಳಂತೆ ಹೊಳೆಯುತ್ತದೆ. ನೀಲಿ ಮತ್ತು ಹಸಿರು ಬಣ್ಣದ ಪಟ್ಟೆಗಳು ಒಂದಾದ ಮೇಲೆ ಒಂದರಂತೆ ಕಾಣಿಸಿಕೊಳ್ಳುವಂತಹ ರೂಪದ್ದು.

ಹುಬ್ಬುಗಳ ಮಧ್ಯೆ ಇರುವ ಚಕ್ರ

ಈ ಆರನೆಯ ಚಕ್ರವು ಎರಡು ಭಾಗಗಳಾಗಿ ವಿಂಗಡವಾಗಿರುತ್ತದೆ. ಒಂದು ಎದ್ದು ಕಾಣುವ ಗುಲಾಬಿ ಬಣ್ಣ. ಇದರಲ್ಲಿ ಹಳದಿ ಬಣ್ಣವೂ ಮಿಶ್ರಣವಾಗಿರುತ್ತದೆ. ಮತ್ತೊಂದು ಭಾಗವು ಊದಾ ಬಣ್ಣದಿಂದ ಕೂಡಿದ್ದು-ಆದರೆ ಅದರೊಳಕ್ಕೆ ಧುಮುಕುವ ಪ್ರಾಣಶಕ್ತಿ ವಿಶೇಷಗಳಿಗೆ ಹೊಂದಿಕೊಳ್ಳುವ ಬಣ್ಣಗಳ ಸ್ವಭಾವದ್ದು, ಆದುದರಿಂದಲೇ ಇದಕ್ಕೆ ಪೂರ್ವ

ಸಂಸ್ಕೃತಿಯಲ್ಲಿ ಎರಡೇ ಎಸಳುಗಳಿರುವಂತೆ ಹೇಳಿರುವುದು. ಆದರೆ ಪ್ರತಿಯೊಂದು ವಿಭಾಗದಲ್ಲೂ 48 ಅಲೆಗಳಾಗಿ ಪ್ರಸರಿಸುತ್ತದೆ. ಎಂದರೆ ಒಟ್ಟಿನಲ್ಲಿ 96 ಎಸಳುಗಳುಳ್ಳದ್ದು ಎಂದು ಹೇಳಬೇಕಾಗುತ್ತದೆ.

ಈಗ 16 ಎಸಳುಗಳುಳ್ಳ ಕೊರಳು ಚಕ್ರದಿಂದ 96 ಎಸಳುಗಳುಳ್ಳ ಹುಬ್ಬು ಮಧ್ಯದ ಚಕ್ರಕ್ಕೂ ಅಲ್ಲಿಂದ ತಲೆಯ ಮೇಲಿರುವ ಸಹಸ್ರಾರ ಚಕ್ರಕ್ಕೂ (ಇದಕ್ಕೆ ನಮ್ಮ ಗ್ರಂಥಕರ್ತರ ಪರಿಶೋಧನೆಯಂತೆ 972 ಎಸಳುಗಳಿರುತ್ತವೆ) ಹತ್ತುವಾಗ ನಮಗೆ ಭಾಸವಾಗುವುದೇನೆಂದರೆ ಈ ಮೇಲಿನ ಎರಡು ಚಕ್ರಗಳೂ ವಿಶೇಷವಾದ ಉನ್ನತ ಮಟ್ಟದವು ಎಂದು ಹೇಳಬೇಕಾಗುತ್ತದೆ. ಪ್ರತಿಯೊಂದು ಚಕ್ರದ ಎಸಳುಗಳನ್ನು ಪ್ರತ್ಯೇಕವಾಗಿ ಏರ್ಪಡಿಸುವಂತಹ ಕಾರಣಗಳು ನಮಗೆ ಇನ್ನೂ ಪರಿಷ್ಕಾರವಾಗಿ ತಿಳಿದಿಲ್ಲ. ಆದರೆ ಪ್ರತಿಯೊಂದು ಚಕ್ರದೊಳಕ್ಕೆ ಧುಮುಕುವ ಪ್ರಾಣಶಕ್ತಿಯ ವಿಭಾಗವೆಂಬಂಶ ಮಾತ್ರ ನಮಗೆ ತಿಳಿದಿರುತ್ತದೆ. ಇದಕ್ಕೆ ಎಂದರೆ ಇಂತಹ ಮೇಲ್ದರ್ಜೆಯ ತಿಳುವಳಿಕೆಯು ನಮಗೆ ಕರಗತವಾಗಬೇಕಾದರೆ ನೂರಾರು ಬಾರಿ ಪರಿಶೋಧನೆಗಳನ್ನು ನಡೆಸಿದ ಸೂಕ್ಷ್ಮವಾದ ಗ್ರಹಿಕೆಗೆ ತಕ್ಕ ಯೊಗ್ಯತೆಯು ನಮ್ಮದಾಗಬೇಕು. ಆದರೆ ಸದ್ಯಕ್ಕೆ ಇಷ್ಟು ಮಾತ್ರ ಸುಸ್ಪಷ್ಟವಾಗಿರುತ್ತದೆ. ಏನೆಂದರೆ ದೇಹಾತ್ಮ ಮಟ್ಟದ ಪ್ರಜ್ಞೆಗೆ ಕೇವಲ ಕೆಲವೇ ಆದ ಪ್ರಾಣ ಶಕ್ತಿ ವಿಶೇಷಗಳ ತಿಳುವಳಿಕೆಯು ಸಾಕಾಗುತ್ತದೆ. ಆದರೆ ಮಾನವನ ಅಮರವಾದ ಉನ್ನತ ತತ್ವಗಳಿಗೆ ಸಂಬಂಧಪಟ್ಟಂತೆ ತಿಳುವಳಿಕೆ ಅವಶ್ಯಕವಾದಾಗ ನಮಗೆ ಹೆಚ್ಚು ತೊಡಕಾದ ಪ್ರಸಂಗವು ಏರ್ಪಡುತ್ತದೆ. ಅದರ ತಿಳುವಳಿಕೆ ಸಮಗ್ರವಾಗಿ ಲಭಿಸಬೇಕಾದರೆ ಪ್ರಾಣಶಕ್ತಿಯ ಅನೇಕ ಮಟ್ಟಗಳ ತಿಳುವಳಿಕೆಯು ಅವಶ್ಯಕವಾಗುತ್ತದೆ.

ಕಿರೀಟ ಚಕ್ರ

ಶಿರಸ್ಸಿನ ಮೇಲಿರುವ ಚಕ್ರವು ಪೂರ್ಣ ವಿಕಸಿತವಾದಾಗ ಎಲ್ಲ ಚಕ್ರಗಳಿಗಿಂತಲೂ ಅತ್ಯುನ್ನತ ಮಟ್ಟದ ಪ್ರಕಾಶದಿಂದ ಕಂಗೊಳಿಸುವ ಸ್ವಭಾವದ್ದೂ ಆಗುತ್ತದೆ. ನಮ್ಮ ಮನಸ್ಸಿಗೆ ಎಟುಕದಷ್ಟು ವೇಗವಾಗಿ ಸ್ಪಂದಗೊಳ್ಳತಕ್ಕ ಸ್ವಭಾವದ್ದು, ಇದರ ಪ್ರಕಾಶವು ವಿಧ ವಿಧವಾದ ಬಣ್ಣಗಳಿಂದ ಹೊಳೆಯತಕ್ಕುದಾದಾಗ್ಯೂ ಒಟ್ಟಿನಲ್ಲಿ ನೇರಳೆ ಬಣ್ಣವು ಎದ್ದು ಕಾಣುವಂತಹ ಪ್ರಕಾಶವುಳ್ಳದ್ದು. ಪೂರ್ವ ದೇಶದ ಸಂಸ್ಕೃತಿಯಲ್ಲಿ ಸಹಸ್ರ ದಳಗಳುಳ್ಳದು ಎಂಬುದಾಗಿ ವರ್ಣಿಸಲ್ಪಟ್ಟಿದೆ. ಆದರೆ ಇದು ಅತಿಶಯೋಕ್ತಿಯಲ್ಲ. ಇದಕ್ಕೆ ವಾಸ್ತವವಾಗಿಯೂ 972 ದಳಗಳಿರುತ್ತವೆ. ಮೊದಲನೆಯ ಅಧ್ಯಾಯದಲ್ಲಿ ಬರುವ 7ನೆಯ ಚಿತ್ರದಲ್ಲಿರುವ ಈ ಚಕ್ರವನ್ನು ಅದು ಇದ್ದಂತೆ ಚಿತ್ರಿಸಿದ್ದಾಗ್ಯೂ ಅದರ ಎಸಳುಗಳನ್ನೆಲ್ಲ ವಿಂಗಡಿಸಿ ಚಿತ್ರಿಸುವುದಕ್ಕೆ ಸಾಧ್ಯವಿಲ್ಲ, ಅಲ್ಲದೆ ಇದಕ್ಕೆ ಒಂದು ವಿಶೇಷವಾದ ಲಕ್ಷಣವಿರುತ್ತದೆ. ಇದು ಇತರೆ

ಚಕ್ರಗಳಂತಿರುವುದಿಲ್ಲ. ಅದೇನೆಂದರೆ ಮಧ್ಯದಲ್ಲಿ 12 ಎಸಳುಳ್ಳ ಕೇಂದ್ರವಿರುತ್ತದೆ. ಇದರ ಬಣ್ಣ ಸ್ವರ್ಣವರ್ಣದಿಂದ ಕೂಡಿದ ಶ್ವೇತದ್ದು.

ಈ ಚಕ್ರವು ಯೋಗಾಭ್ಯಾಸದ ಅಂತ್ಯ ದರ್ಜೆಯಲ್ಲಿ ಎಚ್ಚರಗೊಳ್ಳತಕ್ಕದ್ದು. ಪ್ರಾರಂಭದಲ್ಲಿ ಇದು ಇತರೆ ಚಕ್ರಗಳಷ್ಟೇ ಇರುತ್ತದೆ. ಆದರೆ ಆಧ್ಯಾತ್ಮಿಕ ಮಾರ್ಗದಲ್ಲಿ ಬೆಳೆದಂತೆಲ್ಲ, ಇದು ವಿಶಾಲವಾಗುತ್ತಾ ಹೋಗಿ ತಲೆಯ ಮೇಲ್ಭಾಗವನ್ನೆಲ್ಲ ಆಕ್ರಮಿಸುವಷ್ಟು ದೊಡ್ಡದಾಗುತ್ತದೆ. ಇದು ಬೆಳೆದಂತೆಲ್ಲ ಮತ್ತೊಂದು ವಿಶೇಷ ಬದಲಾವಣೆ ಇದರಲ್ಲುಂಟಾಗುತ್ತದೆ. ಮೊದಲು ಪ್ರಾಣಮಯಕೋಶದಲ್ಲಿ ಬಟ್ಟಲಿನಂತೆ ಮಧ್ಯಭಾಗ ಆಳವಾಗಿರುತ್ತದೆ - (ಇತರೆ ಚಕ್ರಗಳಂತೆ), ಏಕೆಂದರೆ ಮೇಲಿನಿಂದ ವರ್ಷಿಸಲ್ಪಡುವ ಪ್ರಾಣಶಕ್ತಿಗೆ ಒಗೊಡುವ ಪರಿಸ್ಥಿತಿಯಲ್ಲಿರುತ್ತದೆ. ಮಾನವನಿಗೆ ತನ್ನ ದೈವಿಕ ಸ್ವರೂಪವು ಮನದಟ್ಟಾದಾಗ ಆತನು ತನ್ನ ಶುಭಾಶಯಗಳನ್ನು ಸುತ್ತ ಮುತ್ತಲಿರುವವರ ಮೇಲೆಲ್ಲ ಪ್ರಸರಿಸುವ ಹಂತಕ್ಕೆ ಹತ್ತಿದಾಗ ಈ ಚಕ್ರದ ಒಳಭಾಗವು ಮೇಲಕ್ಕೆದ್ದು ಕಿರೀಟಾಕೃತಿಯನ್ನು ತಳೆಯುತ್ತದೆ. ಆಗ ತನ್ನಿಂದ ಅನುಗ್ರಹಶಕ್ತಿಗಳನ್ನು ಸುತ್ತಲೂ ಪ್ರಸರಿಸುವಂತಹ ದಿವ್ಯತೆಯನ್ನು ಪಡೆಯುತ್ತದೆ.

ಪೂರ್ವ ದೇಶದಲ್ಲಿನ ದೈವಿಕ ವಿಗ್ರಹಗಳಲ್ಲೂ ಮತ್ತು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿದ ಆದರ್ಶ ವ್ಯಕ್ತಿಗಳ ರೂಪಗಳನ್ನು ಚಿತ್ರಿಸುವ ಸಂದರ್ಭದಲ್ಲೂ ತಲೆಯ ಮೇಲೆ ಪ್ರಕಾಶ ಮಾನವಾದ ಕಿರೀಟಗಳನ್ನು ಚಿತ್ರಿಸುವುದು ವಾಡಿಕೆಯಾಗಿದೆ. ಅನೇಕ ಬುದ್ಧನ ಪ್ರತಿಮೆಗಳನ್ನು ಈ ರೀತಿ ದಿವ್ಯವಾದ ಕಿರೀಟಗಳಿರುವಂತೆ ತಲೆಯ ಭಾಗವನ್ನು ಕಡಿದಿರುತ್ತಾರೆ. ಎರಡು ಹಂತಗಳಲ್ಲಿ ಸಹಸ್ರಾರು ಚಕ್ರ ಇರುತ್ತದೆ. ದೊಡ್ಡ ಗುಮ್ಮಟದಲ್ಲಿ 960 ಮತ್ತು ಚಿಕ್ಕ ಗುಮ್ಮಟದಲ್ಲಿ 12 ಇರುತ್ತದೆ.

ಕ್ರೈಸ್ತ ಸಂಪ್ರದಾಯದಲ್ಲೂ ಸಹ ಇಪ್ಪತ್ನಾಲ್ಕು ಜನ ಮಹಾ ಪುರಷರುಗಳು ತಮ್ಮ ಕಿರೀಟಗಳನ್ನು ಭಗವಂತನ ಸಿಂಹಾಸನದ ಮುಂದೆ ಕೆಳಗಿಡುವ ಪದ್ಧತಿಯಿರುತ್ತದೆ. ಇದರ ಅಂತರಾರ್ಥವೇನೆಂದರೆ ಆಧ್ಯಾತ್ಮಿಕವಾಗಿ ಉನ್ನತಮಟ್ಟಕ್ಕೆ ಬೆಳೆದ ಮಹಾಪುರಷರುಗಳ ಸಹಸ್ರಾರ ಚಕ್ರದ ಮೂಲಕ ಅವರು ಅದುವರೆಗೆ ಗಳಿಸಿದ ಆಧ್ಯಾತ್ಮಿಕ ದಿವ್ಯಶಕ್ತಿ ವಿಶೇಷಗಳನ್ನೆಲ್ಲ ಭಗವಂತನ ಸೇವೆಗಾಗಿ ವಿನಿಯೋಗ ಮಾಡುವ ದಿವ್ಯ ಸಂಕೇತವೇ ಅದು. ಈ ರೀತಿ ಮಹಾಪುರಷನು ತನ್ನ ಕಿರೀಟವನ್ನು ಕಿತ್ತು ಕಿತ್ತು ಭಗವಂತನಿಗೆ ಅರ್ಪಿಸಿದಂತೆಲ್ಲ ಹೊಸ-ಹೊಸ ಕಿರೀಟಗಳು ಅಂತಹನ ಶಿರಸ್ಸಿನ ಮೇಲೆ ಉದ್ಭವವಾಗುತ್ತಿರುತ್ತವೆ. ಏಕಂದರೆ ಅವರ ಜೀವಿತವೆಲ್ಲ ಆಧ್ಯಾತ್ಮಿಕ ಧ್ಯೇಯದ ಬೆಳಕಿನಲ್ಲಿ ಸತತವಾಗಿ ಮುಂದುವರಿಯತಕ್ಕದ್ದು.

ಕೇಂದ್ರಗಳ ಬಗ್ಗೆ ಇತರೆ ಹೇಳಿಕೆಗಳು

ಚಿಕ್ಕ ಉಪನಿಷತ್ತುಗಳಲ್ಲೂ ಪುರಾಣಗಳಲ್ಲೂ ಮತ್ತು ತಾಂತ್ರಿಕ ಗ್ರಂಥಗಳಲ್ಲೂ ಈ ಏಳು ಚಕ್ರಗಳ ಬಗ್ಗೆ ಅನೇಕ ವಿವರಣೆಗಳಿರುತ್ತವೆ. ಈಗಲೂ ಕೂಡ ಚಕ್ರಗಳನ್ನು ವಿನಿಯೋಗ ಮಾಡತಕ್ಕ ಹಿಂದೂ ಯೋಗಿಗಳಿರುತ್ತಾರೆಂದು ತಿಳಿದು ಬಂದಿದೆ. ಇಂಡಿಯಾ ದೇಶದ ಅಂತರಂಗಿಕ ಜೀವಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಚಯ ಮಾಡಿಕೊಂಡಿರುವಂತಹ ಒಬ್ಬ ಸ್ನೇಹಿತನ ಹೇಳಿಕೆ ಪ್ರಕಾರ ದೇಶಾದ್ಯಂತ ವ್ಯಾಪಕವಾಗಿ ಹರಡಿರುವಂತಹ ಒಂದು ಪರಂಪರೆಯ ಸದಸ್ಯರುಗಳು ಹದಿನಾರು ಸಾವಿರದಷ್ಟು ಯೋಗಿಗಳಿರುತ್ತಾರೆಂದು ತಿಳಿದು ಬರುತ್ತದೆ. ಹಿಂದೂ ಸಂಸ್ಕೃತಿಯಿಂದ ಹೇರಳವಾಗಿ ತಿಳಿಯ ಬೇಕಾದ ಸ್ವಾರಸ್ಯವಾದ ವಿಷಯಗಳಿರುತ್ತವೆ. ಇವುಗಳ ವಿಷಯವಾಗಿ ವ್ಯಾಖ್ಯಾನದೊಡನೆ ವಿವರವನ್ನು ಮುಂದಿನ ಅಧ್ಯಾಯದಲ್ಲಿ ಬರೆಯಲಾಗುತ್ತದೆ.

ಯೂರೋಪು ಖಂಡದ ಕೆಲವು ಯೋಗಿಗಳಿಗೂ ಚಕ್ರಗಳ ಪರಿಚಯವಿರುತ್ತದೆಂದು ತಿಳಿದು ಬಂದಿದೆ. ರೋಸಿಕ್ರೂಸಿಯನ್ ಗುಪ್ತ ಸಂಸ್ಥೆಗೆ ಸೇರಿದ ಜಾಕಬ್ ಬೊಹಿಮ್ ಎಂಬುವವರ ಶಿಷ್ಯರಾದ ಜರ್ಮನಿಯ ಯೋಗಿಯಾದ ಜಾರ್ಜ್‌ಗಿಚ್ಚೆಲ್‌ರವರ ಥಿಯಾಸಫಿಯ ಪ್ರಾಕ್ಟಿಕ (Theosophia Practica) ಎಂಬ ಗ್ರಂಥವು ಇದಕ್ಕೆ ನಿದರ್ಶನವಾಗಿರುತ್ತದೆ. ಈ ಗ್ರಂಥದಲ್ಲಿನ ಮೂರನೆಯ ಚಕ್ರವು ಗಿಚ್ಚೆಲ್‌ರವರ ಮೇಲ್ಕಂಡ ಗ್ರಂಥದಿಂದ ಆರಿಸಲ್ಪಟ್ಟದ್ದಾಗಿದೆ. ಅವರ ಥಿಯಾಸಫಿಯ ಪ್ರಾಕ್ಟಿಕ ಎಂಬ ಗ್ರಂಥವು 1897ನೆಯ ಇಸವಿಯಲ್ಲಿ ಪ್ರಕಟಿಸಲ್ಪಟ್ಟಿದ್ದು (ಫ್ರೆಂಚು ಭಾಷೆಯಲ್ಲಿ) ಅದರಿಂದ ಈ ಗ್ರಂಥದಲ್ಲಿನ ಮೇಲ್ಕಂಡ ಚಕ್ರದ ಚಿತ್ರವು ಫೋಟೋಗ್ರಾಫ್ ಮುಲಕ ತೆಗೆದುಕೊಳ್ಳಲ್ಪಟ್ಟಿತು.

ಗಿಚ್ಚೆಲ್ ಎಂಬುವವರು 1638ರಲ್ಲಿ ಜನ್ಮತಾಳಿ, ಕಾನೂನು ಗ್ರಂಥಗಳನ್ನು ಓದಿ ಅಡ್ವೋಕೇಟಾಗಿ ಕೆಲಸ ಮಾಡುತ್ತಿದ್ದವರು. ಆಧ್ಯಾತ್ಮಿಕ ಪ್ರಪಂಚಕ್ಕೆ ಸಂಬಂಧಪಟ್ಟ ವಿಷಯಗಳ ಪರಿಚಯವಾದ ಕೂಡಲೇ ತನ್ನ ಲೌಕಿಕ ಕಸಬನ್ನು ತ್ಯಜಿಸಿ ಕ್ರೈಸ್ತಮತಕ್ಕೆ ಸಂಬಂಧಪಟ್ಟ ಯೋಗ ವಿದ್ಯಾಶಾಲೆಯ ಸ್ಥಾಪಕರಾದರು. ಆಗ ಕ್ರೈಸ್ತ ಮತದ ಸನಾತನಿಗಳು ಆತನನ್ನು ಬಹಿಷ್ಕಾರ ಹಾಕಿ ಓಡಿಸಲು ಆತನು ಹಾಲೆಂಡಿನಲ್ಲಿ ಅಶ್ರಯ ಪಡೆದು ತನ್ನ ಜೀವಿತದ ಅಂತ್ಯ ನಲವತ್ತು ವರ್ಷಗಳನ್ನು ಅಲ್ಲಿ ಕಳೆದನು.

ಥಿಯಾಸಫಿಯ ಪ್ರಾಕ್ಟಿಕ ಎಂಬ ಗ್ರಂಥದಲ್ಲಿನ ಮೇಲ್ಕಂಡ ಚಕ್ರಗಳ ಚಿತ್ರಗಳ ವಿಷಯವನ್ನು ಗುಪ್ತವಾಗಿ ಭಾವಿಸಿ ಅವುಗಳ ಪರಿಚಯವು ತನ್ನ ಶಿಷ್ಯ ವೃಂದದ ಆಚೆಗೆ ಪ್ರಚಾರವಾಗದಂತೆ ಗೋಪ್ಯವಾಗಿಟ್ಟಿದ್ದನು. ಅವುಗಳ ವಿಷಯ ಯೋಗ ದೃಷ್ಟಿಯನ್ನು ಬೆಳೆಸಿಕೊಂಡಿರುವವರಿಗೆ ಮಾತ್ರ ತಿಳಿಯಬೇಕಾದುದು ಎಂದು ಬಾವಿಸಿದ್ದನು. ತನ್ನ

ಗ್ರಂಥದಲ್ಲಿನ ಪ್ರಪ್ರಥಮ ಪುಟದಲ್ಲಿ ತನ್ನ ಧ್ಯಾನಾನುಷ್ಠಾನದ ಫಲಿತಾಂಶವಾಗಿ ಕಂಡು ಬಂದ ಮೂರು ಲೋಕಗಳ ಪ್ರಜ್ಞೆಯ ಅಂತಸ್ತುಗಳಿಗೆ ಸಂಬಂಧಪಟ್ಟ ಚಕ್ರಗಳು ಮಾನವನ ಅಂತರಂಗಿಕ ಸ್ವಭಾವಕ್ಕೆ ಸಂಬಂಧಪಟ್ಟವು ಎಂಬುದಾಗಿ ಬರೆಯುತ್ತಾನೆ.

ನಿಜವಾದ ಯೋಗವಿದ್ಯೆಗೂ ಮತ್ತು ಗುಪ್ತವಿದ್ಯೆಗೂ ಸಂಬಂಧಪಟ್ಟಂತಹ ಕರಾರುವಾಕ್ಕಾದ ತಿಳುವಳಿಕೆಯು ಗಿಚ್ಚೆಲ್‌ರವರಿಗೆ ಇರಲಿಲ್ಲ. ಆತನು ತನ್ನ ವಾಸ್ತವವಾಗಿಯೂ ನಡೆಸಿದ ಆಧ್ಯಾತ್ಮಿಕ ಜೀವಿತಾನುಷ್ಠಾನದ ನಿಷ್ಠೆಯ ಫಲಿತಾಂಶವಾಗಿ ಚಕ್ರಗಳನ್ನು ನೋಡುವಷ್ಟು ದಿವ್ಯ ದೃಷ್ಟಿಯನ್ನು ಬೆಳೆಸಿಕೊಂಡನೆಂದೂ ಆದರೆ ಅವುಗಳ ಸ್ವರೂಪವೇನು, ಅವುಗಳನ್ನು ಬಳಸುವ ವಿಧಾನವು ಆವುದು ಎಂಬಂಶ ಆತನಿಗೆ ತಿಳಿಯದಾಗಿತ್ತು. ಪ್ರಪ್ರಥಮ ಮೂಲಾಧಾರ ಮತ್ತು ಸ್ವಾಧಿಷ್ಠಾನ ಚಕ್ರಗಳು ಸ್ಥೂಲದೇಹದ ಜೀವಿತಕ್ಕೆ ಸಂಬಂಧಪಟ್ಟುವೆಂತಲೂ-ಹೊಕ್ಕುಳು ಚಕ್ರವನ್ನು ಕೋಪ ಸ್ವಭಾವದವೆಂತಲೂ ಹೃದಯ ಚಕ್ರವನ್ನು ಆತ್ಮಾಭಿಮಾನಕ್ಕೆ ಸಂಬಂಧಪಟ್ಟುದೆಂದೂ-ಕೊರಳಿನ ಚಕ್ರವು ಹೊಟ್ಟೆ ಕಿಚ್ಚು ಮತ್ತು ಅತ್ಯಾಸೆಗೆ ಸಂಬಂಧಪಟ್ಟುದೆಂದೂ ಮತ್ತು ಮೇಲಿನ ಎರಡು ಚಕ್ರಗಳೂ ಅಹಂಭಾವಕ್ಕೆ ಸಂಬಂಧಪಟ್ಟುವೆಂದೂ ಕರೆದಿರುತ್ತಾನೆ. ಈ ಗ್ರಂಥಕರ್ತನು ಹೇಳುವ ವಿಷಯಗಳು ಅಷ್ಟು ಪ್ರಾಧಾನ್ಯವಲ್ಲ-ಆದರೆ ಹದಿನೇಳನೆಯ ಶತಮಾನದಲ್ಲೇ ಜನರಿಗೆ ಈ ಚಕ್ರಗಳ ಪರಿಚಯವಿತ್ತೆಂಬಂಶವು ಎದ್ದು ಕಾಣುತ್ತದೆ.

ಅಲ್ಲದೆ ಫ್ರಿಮೇಸನ್ರಿ ಸಂಸ್ಥೆಗೂ ಕೂಡ ಚಕ್ರಗಳ ವಿಷಯ ತಿಳಿದಿತ್ತು. ಮತ್ತು ಆ ಸಂಸ್ಥೆಯ ಸಂಸ್ಕಾರಗಳ ಮೂಲಕ ಸದಸ್ಯರ ಕೆಲವು ಚಕ್ರಗಳು ಉದ್ಬೋಧವಾಗುತ್ತವೆ ಎಂಬಂಶ ಕಂಡುಬರುತ್ತದೆ. ಈ ಸಂಸ್ಥೆಗೆ ಸಂಬಂಧಪಟ್ಟಂತೆ ಚಕ್ರಗಳ ವಿಷಯವನ್ನು ಇಲ್ಲಿ ವಿವರಿಸಿ ಹೇಳುವುದಕ್ಕೆ ಆಗುವುದಿಲ್ಲ . ಏಕೆಂದರೆ ಆ ಬಗ್ಗೆ ಸಾಕಾದಷ್ಟು ವಿವರಣೆಯನ್ನು ನಾನು (Hidden Life in free Masonry) ಎಂಬ ಗ್ರಂಥದಲ್ಲಿ ಕೊಟ್ಟಿರುತ್ತೇನೆ.

ಅಧ್ಯಾಯ ೨

ಶಕ್ತಿವಿಶೇಷಗಳು

ಪ್ರಪ್ರಥಮ ಶಕ್ತಿ ಅಥವಾ ಜೀವ ಶಕ್ತಿ

ಬ್ರಹ್ಮಾಂಡಾಧಿಪತಿಯಿಂದ ಅನೇಕ ವಿಧವಾದ ಶಕ್ತಿಗಳು ವರ್ಷಿಸಲ್ಪಡುತ್ತವೆ. ಅವುಗಳಲ್ಲಿ ಎಷ್ಟೋ ಸಂಖ್ಯೆ ನಮ್ಮ ತಿಳುವಳಿಕೆಗೆ ಎಟುಕದವು. ಆದರೆ ಅವುಗಳಲ್ಲಿ ಕೆಲವು ಮಾತ್ರ ನಮ್ಮ ಪರಿಶೀಲನೆಗೆ ದೊರೆತಿರುತ್ತವೆ. ಆ ರೀತಿ ಪರಿಚಿತವಾಗಿರುವಂತಹ ಶಕ್ತಿ ವಿಶೇಷಗಳು ನಮ್ಮ ವಿದ್ಯಾರ್ಥಿಗಳ ಪ್ರಜ್ಞೆಮಟ್ಟಕ್ಕೆ ಎಟುಕುವಂತೆ ಪ್ರತಿಯೊಂದು ಅಭಿವ್ಯಕ್ತವಾಗಿರುವ ವಿಧಾನವು ತಿಳಿದು ಬಂದಿದೆ. ಆದರೆ ಸದ್ಯಕ್ಕೆ ಸ್ಥೂಲಲೋಕದಲ್ಲಿ ಅಭಿವ್ಯಕ್ತವಾಗಿರತಕ್ಕ ಶಕ್ತಿ ವಿಶೇಷಗಳಿಗೆ ಮಾತ್ರ ನಮ್ಮ ಗಮನ ಹರಿಸೋಣ. ಅವುಗಳಲ್ಲಿ ಒಂದು ವಿದ್ಯುಚ್ಛಕ್ತಿ ರೂಪದಲ್ಲೂ ಮತ್ತೊಂದು ಮೂಲ ಕುಂಡಲಿನಿ ರೂಪದಲ್ಲೂ ಪ್ರಾಣಶಕ್ತಿ ರೂಪದಲ್ಲೂ ಮತ್ತೊಂದು ಜೀವಶಕ್ತಿ ರೂಪದಲ್ಲೂ (ಇದು ಪ್ರಾಣಶಕ್ತಿಗೆ ಭಿನ್ನವಾದುದು) ಅಭಿವ್ಯಕ್ತವಾಗಿರುತ್ತವೆ.

ತಾಳ್ಮೆಯಿಂದ ದೀರ್ಘಕಾಲದ ಪ್ರಯತ್ನದ ಫಲವಾಗಿ ಮಾತ್ರ ವಿದ್ಯಾರ್ಥಿಯು ಇವುಗಳ ಸ್ವರೂಪವನ್ನು ತಿಳಿದು ಅವುಗಳ ಪರಸ್ಪರ ಸಂಬಂದವನ್ನು ತಿಳಿಯಬಲ್ಲನು. ''ವಾಸ್ತವಾಂಶಗಳ ಗುಪ್ತಭಾಗ'' (Hidden side of things)ಎಂಬ ಗ್ರಂಥದಲ್ಲಿ ಕುಂಡಲಿನಿ ಮತ್ತು ಪ್ರಾಣಶಕ್ತಿಗಳ ವಿಷಯವಾಗಿ ಬರೆದಿರುತ್ತೇನೆ. ಆದರೆ ಅವು ದೈವಿಕ ಮೂರು ಉತ್ಸೃಷ್ಟಿ ತರಂಗಗಳಿಗೆ ಹೇಗೆ ಸಂಬಂಧಪಟ್ಟುವು ಎಂಬಂಶ ಅಗ ಗೊತ್ತಿರಲಿಲ್ಲ. ಆದುದರಿಂದ ಅವುಗಳು ಪರಸ್ಪರ ಸಂಬಂಧವಿಲ್ಲದುವು ಎಂಬುದು ಕಂಠೋಕ್ತವಾಗಿ ಬರೆದಿದ್ದೆ- ಮುಂದಿನ ಪರಿಶೀಲನೆಯಿಂದ ದೊರೆತ ತಿಳುವಳಿಕೆಯ ಬೆಳಕಿನಲ್ಲಿ ಆ ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ದೊರೆಯಿತು.

ಚಕ್ರಗಳ ಮೂಲಕ ಹೊರಹೊಮ್ಮುವ ಶಕ್ತಿ ವಿಶೇಷಗಳು ಮೂರು ಮುಖವಾಗಿವೆ. ಅವುಗಳು ತ್ರಿಮೂರ್ತಿಗಳಿಗೆ ಸಂಬಂಧಪಟ್ಟವು ಎಂದು ಧಾರಾಳವಾಗಿ ಹೇಳಬಹುದು. ಚಕ್ರದ ಬಾಯಿಯೊಳಕ್ಕೆ ಧುಮುಕುವ ಶಕ್ತಿಯ ಪ್ರಭಾವದಿಂದ ಮತ್ತೊಂದು ಚಕ್ರವನ್ನು

ಬಳಸಿಕೊಂಡು ಹರಿಯುವ ಶಕ್ತಿಯು ಉದ್ಭವವಾಗುತ್ತದೆ. ಈ ಪ್ರಥಮಶಕ್ತಿ ವಿಶೇಷವು ಎರಡನೆಯ ಮೂರ್ತಿಗೆ ಸಂಬಂಧಪಟ್ಟುದು. ಪ್ರಕೃತಿಯೊಳಕ್ಕೆ ಮೊದಲೇ ಪ್ರಪ್ರಥಮ ಸೃಷ್ಟಿತರಂಗದಿಂದ ಹೊರಹೊಮ್ಮಿದ ಶಕ್ತಿ ವಿಶೇಷವು ಮೂರನೆಯ ಮೂರ್ತಿಗೆ ಸಂಬಂಧಪಟ್ಟುದು. ಅದರ ಮೂಲಕ ಏಳು ಪ್ರಕೃತಿ ಸಾಂದ್ರತೆಗಳು ಏರ್ಪಟ್ಟಿರುತ್ತವೆ. ಅಂತಹ ಪ್ರಕೃತಿಯೊಳಕ್ಕೆ ಮೇಲ್ಕಂಡ ಎರಡನೇ ಉತ್ಸೃಷ್ಟಿ ತರಂಗದ ಶಕ್ತಿಯು ಧುಮುಕಿ ರೂಪವನ್ನು ಕಟ್ಟುತ್ತದೆ. ಈ ತತ್ವವನ್ನು ಕ್ರೈಸ್ತ ಮತಕ್ಕೆ ಸಂಬಂಧಪಟ್ಟ ಸಂಕೇತವು ಕ್ರಿಸ್ತ ದೇವನು ಪರಿಶುದ್ಧಾತ್ಮಕ ಚೈತನ್ಯ ಮತ್ತು ಮೇರಿ (ಕನ್ಯೆ) ಯಿಂದ ಅವತರಿಸಿದರು ಎಂದು ಹೇಳಿರುವುದು.

ಎರಡನೆಯ ಉತ್ಸೃಷ್ಟಿ ತರಂಗವು ಲೆಖ್ಖವಿಲ್ಲದಷ್ಟು ನಾಲೆಗಳ ದ್ವಾರ ಹರಿದು ಬಂದು ಪ್ರತಿಯೊಂದು ಪ್ರಕೃತಿ ಸಾಂದ್ರತೆ ಹಂತದಲ್ಲೂ ಅಭಿವ್ಯಕ್ತವಾಗಿರುತ್ತದೆ. ಇದನ್ನು ಪ್ರಥಮ ಸೃಷ್ಟಿ ತರಂಗ ಶಕ್ತಿಗೆ ಭಿನ್ನವಾಗಿರುವಂತೆ ತಿಳಿಯಬೇಕು. ಮೊದಲನೆಯ ಉತ್ಸೃಷ್ಟಿ ತರಂಗ ಶಕ್ತಿಯು ಭೌತಿಕ ಮೂಲ ವಸ್ತುಗಳನ್ನು ಉತ್ಪನ್ನ ಮಾಡುವವರೆಗೆ ಕೆಲಸ ಮಾಡಿರುತ್ತದೆ. ಎರಡನೆಯ ಉತ್ಸೃಷ್ಟಿ ತರಂಗದ ಶಕ್ತಿಯು ಆ ಮೂಲಕ ಸಿದ್ಧವಾದ ಪ್ರಕೃತಿ ತತ್ವಗಳಿಂದ ರೂಪಗಳನ್ನು ನಿರ್ಮಿಸುತ್ತದೆ. ಆ ಶಕ್ತಿಯ ಅಭಿವ್ಯಕ್ತತೆಯು ಬುದ್ಧಿ ಮಟ್ಟದ ಪ್ರಕೃತಿಯ ಮೂಲಕ ಸಂಭವಿಸುತ್ತದೆ. ಮಾನವನ ಆತ್ಮದೊಳಗೆ ಅದು ಕ್ರಮೇಣ ಬೆಳೆದು ವಿಕಸಿಸುತ್ತದೆ. ಮಾನವನ ಮನೋಶರೀರ ಮತ್ತು ಕಾಮದೇಹಗಳಿಗೆ ಸಂಬಂಧಪಟ್ಟ ಪ್ರಕೃತಿ ಸಾಂದ್ರತೆಗಳಲ್ಲೂ ಅದು ಚೇತನಗೊಳಿಸತಕ್ಕ ಶಕ್ತಿಯಾಗಿ ಕೆಲಸ ಮಾಡುತ್ತದೆ. ಆದುದರಿಂದಲೇ ಮಾನವನ ಉನ್ನತ ಭಾವನೆಗಳು (ಭಕ್ತಿ, ನಿಷ್ಕಾಮ ಪ್ರೇಮ ಮೊದಲಾದವು) ಆತನ ಕಾಮ ದೇಹದ ಉನ್ನತ ಪ್ರಕೃತಿ ಸಾಂದ್ರತೆ ಮಟ್ಟಗಳಲ್ಲಿ ಮಾತ್ರ ಅಭಿವ್ಯಕ್ತವಾಗುವುದೂ ಅಲ್ಲದೆ ಅವುಗಳ ಕೆಳಮಟ್ಟದ ಸಾಂದ್ರತೆ ಪ್ರಕೃತಿ ತತ್ವಗಳನ್ನು ಚೇತನಗೊಳಿಸುತ್ತದೆ.

ಆ ದಿವ್ಯ ಶಕ್ತಿಯ ಕೆಳಮಟ್ಟದ ಅಭಿವ್ಯಕ್ತತೆಯು ತನ್ನ ಸುತ್ತಲೂ ಅತಿವಾಯು ತತ್ವದ ಹೊದಿಕೆಯನ್ನು ರೂಪಿಸಿಕೊಂಡು ಪ್ರಾಣಮಯಕೋಶದ ಮೇಲಿರುವ ಚಕ್ರಗಳ ಕೇಂದ್ರಗಳೊಳಕ್ಕೆ ಧುಮುಕುತ್ತದೆ. ಇಲ್ಲಿ ಮಾನವನ ಶರೀರದ ಅಂತರಾಳದಿಂದ ಉಕ್ಕಿ ಹೊರ ಸೂಸುವಂತಹ ಕುಂಡಲಿನಿ ಶಕ್ತಿಯನ್ನು ಸಂಧಿಸುತ್ತದೆ.

ಕುಂಡಲಿನಿ ಶಕ್ತಿ

ಮೂರನೆಯ ಮೂರ್ತಿಯಿಂದ ಹೊರಹೊಮ್ಮುವ ಅನೇಕ ವಿಧವಾದ ಪ್ರಪ್ರಥಮ ಸೃಷ್ಟಿ ತರಂಗಕ್ಕೆ ಸಂಬಂಧಪಟ್ಟ ಸ್ಥೂಲಲೋಕದಲ್ಲಿ ರೂಪಿತವಾಗುವ ಶಕ್ತಿಗಳಲ್ಲಿ ಇದೂ ಒಂದು. ಇದು ಎಲ್ಲ ಪ್ರಜ್ಞೆ ಹಂತಗಳಲ್ಲೂ ಅಭಿವ್ಯಕ್ತವಾಗಿರುತ್ತದೆ, ಆದರೆ ಅತಿ ವಾಯು



THE ROOT CHAKRA

ಮೂಲಾಧಾರ ಚಕ್ರ



THE SPLEEN CHAKRA

ಗುಲ್ಮಾ ಚಕ್ರ




THE NAVEL CHAKRA

ಒಕ್ಕಳು ಚಕ್ರ




THE HEART CHAKRA

ಹೃದಯ ಚಕ್ರ




THE THROAT CHAKRA

ಕೊರಳಿನ ಚಕ್ರ




THE BROW CHAKRA

ಹುಬ್ಬುಗಳ ಮಧ್ಯೆ ಇರುವ ಚಕ್ರ



THE CHAKRAS ACCORDING TO GICHTEL

ಗಿಚ್ಟೆಲ್‌ರವರ ಪ್ರಕಾರ ಚಕ್ರಗಳು



ಪ್ರಾಣಶಕ್ತಿಯ ಪ್ರವಾಹಗಳು

THE STREAMS OF VITALITY

ತತ್ವ ದರ್ಜೆಯ ಪ್ರಕೃತಿಗೆ ಸಂಬಂಧಪಟ್ಟಂತೆ ಇರುವುದಕ್ಕೆ ಈಗ ನಮ್ಮ ಗಮನ ಹರಿಸಬೇಕಾಗಿದೆ. ಇದು ಮೇಲ್ಕಂಡ ಪ್ರಪ್ರಥಮ ಶಕ್ತಿ ವಿಶೇಷ (ಎರಡನೆಯ ಮೂರ್ತಿಯಿಂದ ಹೊರಹೊಮ್ಮತಕ್ಕದ್ದು) ದಂತೆ ಪರಿವರ್ತಿಸಲು ಸಾಧ್ಯವಿಲ್ಲ. ಅಲ್ಲದೆ ಬೇರೆ ಯಾವ ವಿಧವಾದ ಶಕ್ತಿಗಳೂ ಇದರ ಮೇಲೆ ಪ್ರಭಾವ ಬೀರುವುದಕ್ಕೆ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ಸ್ಥೂಲ ಶರೀರದೊಳಕ್ಕೆ ಲಕ್ಷಾಂತರ ವೋಲ್ಟ್‌ಗಳ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಬಿಟ್ಟಾಗಲೂ ಕೂಡ ಆತನು ಕೈ ಚಾಚಿದಾಗ ಅದರ ಮೂಲಕ ದೊಡ್ಡ ಪ್ರಮಾಣದ ಜ್ವಾಲೆಗಳು ಹೊರಹೊಮ್ಮಿದುವು; ಆಗ ಮನುಷ್ಯನಿಗೆ ಯಾವ ತೊಂದರೆಯೂ ಉಂಟಾಗಲಿಲ್ಲ. ಆದರೆ ಆ ಪರಿಸ್ಥಿತಿಯಲ್ಲಿ ಆತನು ಒಂದು ವಸ್ತುವನ್ನು ಮುಟ್ಟಿದ್ದ ಪಕ್ಷದಲ್ಲಿ ಆತನಿಗೆ ಧಕ್ಕೆಯುಂಟಾಗುತ್ತಿತ್ತು. ಇಂತಹ ಅಪರೂಪ ಸಂದರ್ಭದಲ್ಲೂ ಕೂಡ ಕುಂಡಲಿನಿ ಶಕ್ತಿಯು ಯಾವ ಪರಿಣಾಮವನ್ನು ಹೊಂದಿರಲಿಲ್ಲ.


ಭೂಮಿಯ ಆಳವಾದ ಮಧ್ಯಪ್ರದೇಶದಲ್ಲಿ ಮೂರನೆಯ ಮೂರ್ತಿಗೆ ಸಂಬಂಧಪಟ್ಟ ಒಂದು ಪ್ರಯೋಗ ಶಾಲೆಯಿರುತ್ತದೆ. ಅದು ಭೂಮಿಯ ಆಳವಾದ ಗರ್ಭದಲ್ಲಿ ಹುದುಗಿರುತ್ತದೆ. ಆ ಭೂಮಿಯ ಹೃದಯಾಂತರಾಳದ ಗೋಳವನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲದಷ್ಟು ಶಾಖವಾಗಿರುತ್ತದೆ. ಆದರೆ ಅದರ ಹೊರ ಪದರಗಳನ್ನು ಮಾತ್ರ ಮುಟ್ಟಬಹುದು. ಅಂತಹ ಸಂದರ್ಭದಲ್ಲೂ ಕೂಡ ಕುಂಡಲಿನಿ ಶಕ್ತಿಯ ಮೇಲೆ ಯಾವ ವ್ಯತ್ಯಾಸವೂ ಉಂಟಾಗಲಿಲ್ಲ. ಅನೇಕ ಕಲ್ಪಗಳ ಹಿಂದೆಯೇ ಬ್ರಹ್ಮನ ಶಕ್ತಿ ವಿಶೇಷಗಳು ಅದರೊಳಕ್ಕೆ ಹೊಗಿ ಕೆಲಸ ಮಾಡುತ್ತಿವೆ, ಹೊಸ ರಾಸಾಯನಿಕ ಮೂಲವಸ್ತುಗಳ ಉತ್ಪತ್ತಿಗೋಸ್ಕರ ಆ ಪ್ರಯೋಗ ಶಾಲೆಯು ಕೆಲಸ ಮಾಡುತ್ತಿರುತ್ತದೆ.

ಮಾನವನ ದೇಹದ ಕುಂಡಲಿನಿ ಶಕ್ತಿಯು ಭೂಗರ್ಭದಲ್ಲಿರುವ ಬ್ರಹ್ಮನ ಕಾರ್ಯಾಗಾರದಿಂದ ಹೊರ ಹೊಮ್ಮುತ್ತದೆ. ಅದು ಭೂಮಿಯ ಗರ್ಭದಲ್ಲಿ ಜಾಜ್ವಲ್ಯ ಮಾನವಾಗಿ ಉರಿಯುತ್ತಿರುವ ಅಗ್ನಿಗೆ ಸಂಬಂಧಪಟ್ಟದ್ದು. ಅದರೆ ಈ ಬೆಂಕಿಯು ಸೂರ್ಯನಿಂದ ಬರುವ ಪ್ರಾಣಾಗ್ನಿಗಿಂತ ಭಿನ್ನವಾಗಿರುತ್ತದೆ. ಪ್ರಾಣಾಗ್ನಿಯು ಗಾಳಿಗೂ ಬೆಳಕಿಗೂ ಸಂಬಂಧಪಟ್ಟುದು-ವಿಶಾಲವಾದ ಬಯಲಿನ ಮೂಲಕ ಬರತಕ್ಕುದು. ಆದರೆ ಭೂಗರ್ಭದಿಂದ ಹೊರ ಹೊಮ್ಮತಕ್ಕುದು. ಕಬ್ಬಿಣ ಕಾದು ಕೆಂಪಗೆ ಆಗಿರುವಂತಹ ಮೂಲದಿಂದ ಬರತಕ್ಕದು. ಅದರ ರಭಸ ತುಂಬ ಭಯಂಕರವಾದುದು.

ಬ್ರಹ್ಮನು ಸ್ಥೂಲವಾದ ಸಾಂದ್ರವಾದ ಮೂಲ ವಸ್ತುಗಳನ್ನು ರೂಪಿಸುವುದರಲ್ಲಿ ವಿನಿಯೋಗ ಮಾಡತಕ್ಕ ಶಕ್ತಿ ವಿಶೇಷವೇ ಬೇರೆ. ಕುಂಡಲಿನಿ ಶಕ್ತಿಗೂ ಅದಕ್ಕೂ ಸಂಬಂಧವಿಲ್ಲ. ಈ ಕುಂಡಲಿನಿ ಶಕ್ತಿಯು ತನ್ನ ಮೂಲದಿಂದ ಕೆಳಕ್ಕೆ ಇಳಿದು ಪುನಃ ಮೇಲಕ್ಕೆ

ಹತ್ತುವ ಸಂದರ್ಭದಲ್ಲಿ ಮಾತ್ರ ಬ್ರಹ್ಮ ಚೈತನ್ಯ ಸಂಬಂಧವನ್ನು ಪಡೆಯುತ್ತದೆ. ಎರಡನೆಯ ಉತ್ಸಲ್ಪ್ಷಿತರಂಗವು ನಮಗೆ ತಿಳಿದಿರುವಂತೆ ಎರಡನೆಯ ಮೂರ್ತಿಯಿಂದ ಹೊರ ಹೊಮ್ಮಿ ಒಂದನೆಯ ಎರಡನೆಯ ಮೂರನೆಯ ಭೂತ ವರ್ಗಗಳ ಮೂಲಕ ಖನಿಜ ವರ್ಗಕ್ಕೆ ಇಳಿದು ಪುನಹ ಸಸ್ಯ-ಪಶುವಿನ ಮೂಲಕ ಮಾನವ ವರ್ಗಕ್ಕೆ ಹತ್ತುತ್ತದೆ. ಅಲ್ಲಿ ಅದು ಮೊದಲನೆಯ ಮೂರ್ತಿಯಿಂದ ಇಳಿದು ಬರುವ ಶಿವ ಚೈತನ್ಯಧಾರೆಯನ್ನು ಸಂಧಿಸುತ್ತದೆ. ಮೂರನೆಯ ಉತ್ಸಲ್ಪ್ಷಿತರಂಗವೂ ಕೂಡ ಕೇವಲ ಸ್ಥೂಲ ಮಟ್ಟಕ್ಕೆ ಇಳಿದ ಮೇಲೆ ಕುಂಡಲಿನಿ ಶಕ್ತಿಯಾಗಿ ಮೇಲಕ್ಕೆ ಹತ್ತಿ ಸಂಸರಣದಲ್ಲಿ ಮುಂದುವರಿಯುವ ಪ್ರಾಣಿಗಳಲ್ಲಿ ಪ್ರಥಮ ಶಕ್ತಿಯೊಡನೆ ಮಿಳಿತವಾಗಿ ಅವುಗಳನ್ನು ಪ್ರಥಮ ಮೂರ್ತಿಯ ಮೂರನೆಯ ಉತ್ಸಲ್ಪ್ಷಿತರಂಗವನ್ನು ತಡೆಯುವಂತೆ ಹದಗೊಳಿಸುತ್ತದೆ; ಅಲ್ಲದೆ ಅನಂತರವೂ ಕೂಡ ನೂತನ ಶರೀರಗಳಲ್ಲಿ ಕೆಲಸ ಮಾಡುತ್ತಾ ಮುಂದುವರಿಯುತ್ತದೆ. ಮಾನವರಾದ ನಾವು ಕೆಳಮಟ್ಟದ ಭೂಮಿಯಿಂದಲೂ ದೈವಿಕ ಶಕ್ತಿಯನ್ನು ಪಡೆಯುವುದಲ್ಲದೆ ಮೇಲಿನಿಂದಲೂ ಅಕಾಶದಿಂದಲೂ ಶಕ್ತಿಯನ್ನು ಪಡೆಯುತೇವೆ. ಮಾನವರಾದ ನಾವು ಸ್ವರ್ಗ ಮತ್ತು ಭೂದೇವಿಯ ಮಕ್ಕಳು. ಈ ಎರಡು ವಿಧವಾದ ಶಕ್ತಿಗಳು ನಮ್ಮಲ್ಲಿ ಕೆಲಸ ಮಾಡುತ್ತ ನಮ್ಮ ಸಂಸರಣವನ್ನು ಮುಂದುವರಿಸುತ್ತವೆ. ಒಂದು ಇಲ್ಲವೆ ಮತ್ತೊಂದು ಇರುವುದಕ್ಕೆ ಸಾಧ್ಯವಿಲ್ಲ. ಇವೆರಡರಲ್ಲಿ ಒಂದು ಮಿತಿ ಮೀರಿ ಹೆಚ್ಚಾದರೆ ಅಪಾಯಕ್ಕೆ ಒಳಗಾಗುತ್ತೇವೆ. ಆದುದರಿಂದಲೇ ಮಾನವನ ಜೀವಿತವು ಪರಿಶುದ್ಧವಾಗುವವರೆಗೆ ಮೂಲ ಕುಂಡಲಿನಿ ಶಕ್ತಿಯನ್ನು ಉದ್ಬೋಧ ಮಾಡುವುದು ಅಪಾಯಕರವಾದುದು. ಆದರೆ ಮಾನವನ ದೈನಂದಿನ ಜೀವಿತದಲ್ಲಿ ಅದು ವಿಶೇಷವಾಗಿ ಕೆಲಸ ಮಾಡುತ್ತ ನಮ್ಮ ಆರೋಗ್ಯಕ್ಕೆ ಸಹಾಯಕರವಾಗಿರುತ್ತದೆ. ಅದು ಅನೇಕರಿಗೆ ತಿಳಿಯದು: ಈ ದಿವ್ಯಶಕ್ತಿಯು ಮೂಲಾಧಾರ ಚಕ್ರದ ಮೂಲಕ ಮಾನವನ ದೇಹವನ್ನು ಪ್ರವೇಶಿಸುತ್ತದೆ.

ಮಿಕ್ಕ ಶಕ್ತಿಗಳಂತೆ ಕುಂಡಲಿನಿ ಶಕ್ತಿಯೂ ಕೂಡ ದೃಷ್ಟಿಗೆ ಗೋಚರವಾಗುವುದಿಲ್ಲ, ಆದರೆ ಮಾನವ ದೇಹದಲ್ಲಿ ಅದು ಕಾಮದೇಹ ಮತ್ತು ಪ್ರಾಣಮಯ ಕೋಶಕ್ಕೆ ಸಂಬಂಧಪಟ್ಟ ಪ್ರಕೃತಿ ತತ್ವಗಳಿಂದ ಮಾಡಲ್ಪಟ್ಟ ಹೊದಿಕೆಗಳನ್ನು ಪಡೆಯುತ್ತದೆ. ಇವು ಸುತ್ತಲೂ ಬಳಸಿಕೊಂಡು ಬಂದಿರುವ ಒಂದರೊಳಗೊಂದರಂತೆ ಏಳು ಗೋಳಗಳಿರುತ್ತವೆ. ಇವೆಲ್ಲ ಮೂಲಾಧಾರ ಚಕ್ರದಲ್ಲಿರುತ್ತವೆ. ಇವುಗಳಲ್ಲಿ ಅತ್ಯಂತ ಹೊರಭಾಗದ ಗೋಳದಲ್ಲಿ ಕುಂಡಲಿನಿ ಶಕ್ತಿಯು ಸಾಧರಣ ಮನುಷ್ಯನಲ್ಲಿ ಕೆಲಸ ಮಾಡುತ್ತವೆ, ಉಳಿದ ಟೊಳ್ಳು ಗೋಳಗಳಲ್ಲಿ ಅದು ಸುಪ್ತಾವಸ್ಥೆಯಲ್ಲಿರುತ್ತದೆ. ಈ ಸುಪ್ತ ಸ್ಥಿತಿಯ ಟೊಳ್ಳು ಗೋಳಗಳಲ್ಲಿರುವ ಕುಂಡಲಿನಿ ಶಕ್ತಿಯನ್ನು ಎಚ್ಚಿಸಿದರೆ ಮಾನವನು ಅಪಾಯಕ್ಕೆ ಸಿಕ್ಕಿಕೊಳ್ಳುತ್ತಾನೆ. ಕೇವಲ ಹೊರಮಟ್ಟದ ಟೊಳ್ಳು ಗೋಳದ ಕುಂಡಲಿನಿ ಶಕ್ತಿಯು ಬೆನ್ನು


ಮೊದಲನೆಯ ಮೂರ್ತಿ
ಎರಡನೆಯ ಮೂರ್ತಿ
ಮೂರನೆಯ ಮೂರ್ತಿ
ಆದಿ ಲೋಕ
ಅನುಪಾದಕ ಲೋಕ
ನಿರ್ವಾಣ ಲೋಕ
ಬುದ್ಧಿ ಲೋಕ
ಮನೋ ಲೋಕ
ಕಾಮ ಲೋಕ
ಸ್ಥೂಲ ಲೋಕ
ಎರಡನೆಯ ಚೈತನ್ಯ ಪ್ರವಾಹ
ಮೊದಲನೆಯ ಚೈತನ್ಯ ಪ್ರವಾಹ
ಮೂರನೆಯ ಚೈತನ್ಯ ಪ್ರವಾಹ

ಮೂಳೆಗೆ ಸಂಬಂಧಪಟ್ಟ ಇಡ-ಪಿಂಗಳ-ಶುಷುಮ್ನ ನಾಡಿಗಳಲ್ಲಿ ಓಡಾಡುತ್ತಿರುತ್ತದೆ.

ಬೆನ್ನು ಮೂಳೆಗೆ ಸಂಬಂಧಪಟ್ಟ ಮೂರು ಕಾಲುವೆಗಳು

ಈ ಮೂರು ಪ್ರವಾಹಗಳ ವಿಷಯವಾಗಿ ಮೇಡಂ ಬ್ಲಾವಟ್ಕಿಸ್ಸಿಯು 'ಗುಪ್ತ ಸಿದ್ಧಾಂತ' ಗ್ರಂಥದಲ್ಲಿ ಬರೆಯುವುದೇನೆಂದರೆ:

ಹಿಮಾಲಯದ ಆಚೆಗಿರುವ ಶಾಲೆಯು ಶುಷಮ್ನವು ಮೆದಳು ಬಳ್ಳಿಯ ಮಧ್ಯ ಬಾಗದಲ್ಲಿರುವಂತೆಯೂ ಇದು ಬಹು ಮುಖ್ಯವಾದುದೆಂದೂ ಹೇಳುತ್ತದೆ.

ಇಡ, ಪಿಂಗಳಗಳು ಆ ಮುಖ್ಯ ನಾಡಿಯ ಗೌಣ ಭಾಗಗಳಿದ್ದಂತೆ. ಶುಷುಮ್ನ ನಾಡಿಯನ್ನು ಎಚ್ಚರಗೊಳಿಸಿದರೆ ಪಕ್ಕದ ನಾಡಿಗಳು ಎಚ್ಚರಗೊಳ್ಳುತ್ತವೆ. ಆತ್ಮಕ್ಕೆ ಸಂಬಂಧಪಟ್ಟ ಶುಷುಮ್ನ, ಪಕ್ಕದಲ್ಲಿನ ನಾಡಿಗಳಿಂದ ಮನಸ್ತತ್ವ-ಕಾಮತತ್ವಗಳೂ ಪ್ರಚೋದನೆಗೊಳ್ಳುತ್ತವೆ. ಆಗ ಉನ್ನತ ಮಟ್ಟದ್ದು ಕೆಳಗಿನದನ್ನು ದಮನ ಮಾಡುತ್ತದೆ.


ಶುಷುಮ್ನ ನಾಡಿಯಲ್ಲಿ ಹಾದು ಹೋಗಿರುವುದು ಸ್ವಚ್ಛ ಆಕಾಶ ತತ್ವ- ಅದರ ಎರಡು ಮುಖಗಳು ಇಡ ಮತ್ತು ಪಿಂಗಳಗಳಲ್ಲಿ ಹರಿಯುತ್ತವೆ. ಈ ಮೂರು ಪ್ರಾಣವಾಯುಗಳನ್ನು ಬ್ರಾಹ್ಮಣರು ಹಾಕಿಕೊಳ್ಳುವ ಮೂರೆಳೆಯ ಜನಿವಾರವು ಪ್ರತಿನಿಧಿಸುತ್ತದೆ. ಇವುಗಳು ಇಚ್ಛಾಶಕ್ತಿಯ ಸ್ವಾಧೀನದಲ್ಲಿರುತ್ತವೆ. ಆಶೆಯು ಇಚ್ಛೆಯ ಕೆಳಮಟ್ಟದ ಸ್ಫುರಣೆ. ಆದುದರಿಂದ ಈ ನಾಡಿಗಳ ಪರಿಶುದ್ಧತೆಯು ಬಹು ಮುಖ್ಯವಾದುದು. ಈ ಮೂರು ನಾಡಿಗಳಿಂದ ಸುತ್ತುವರಿಯತಕ್ಕ ಪ್ರವಾಹವು ಹೊರಹೊಮ್ಮಿ ಶುಷುಮ್ನ ಮೂಲಕ ಶರೀರವನ್ನೆಲ್ಲ ವ್ಯಾಪಿಸುತ್ತದೆ. ಇಡ, ಪಿಂಗಳ ನಾಡಿಗಳು ಶುಷುಮ್ನ ಮೂಲಕ ಶರೀರವನ್ನೆಲ್ಲ ವ್ಯಾಪಿಸುತ್ತವೆ. ಇಡ ಪಿಂಗಳ ನಾಡಿಗಳು ಶುಷುಮ್ನ ನಾಡಿಯನ್ನು (ಮಧ್ಯ ನಾಡಿಯನ್ನು) ಹಾವಿನಂತೆ ಸುತ್ತಿಕೊಂಡು ಹೋಗುತ್ತವೆ. ಇವು ಅರ್ಧಂಬರ್ಧ ಪ್ರಕೃತಿ ಮಟ್ಟದವು. ಒಂದು ಋಣ ಮತ್ತೊಂದು ಧನ ಶಕ್ತಿಯಂತೆ ಕೆಲಸ ಮಾಡತಕ್ಕವು. ಎರಡೂ ಸೇರಿ ಶುಷುಮ್ನ ನಾಡಿಯ ಆಧ್ಯಾತ್ಮಿಕ ಶಕ್ತಿಯನ್ನು ಉದ್ಬೋದ ಮಾಡುತ್ತವೆ. ಇವುಗಳು ಕೆಲಸ ಮಾಡುವ ಮಾರ್ಗಗಳೇ ಬೇರೆ. ಹಾಗಿಲ್ಲದಿದ್ದರೆ ದೇಹಕ್ಕೆಲ್ಲ ವ್ಯಾಪಿಸುವಂತೆ ಶಕ್ತಿಯನ್ನು ಪ್ರಸರಿಸುತ್ತಿದ್ದುವು.

ಫ್ರೀ ಮೇಸನ್ರಿಗೆ ಸಂಬಂಧಪಟ್ಟ 'ಗುಪ್ತ ಜೀವಿತ' ಎಂಬ ಗ್ರಂಥದಿಂದ ಉದ್ಧರಿಸಿ ಬರೆಯಲ್ಪಟ್ಟ ಮುಂದಿನ ವಾಕ್ಯಗಳು ಈ ಶಕ್ತಿಗಳನ್ನು ಎಚ್ಚರಗೊಳಿಸುವ ಭಾಗ:-ಫ್ರೀಮೇಸನ್ರಿ ಸಂಸ್ಕಾರಗಳ ಉದ್ದೇಶ ಈ ಶಕ್ತಿಗಳನ್ನು ಎಚ್ಚರಗೊಳಿಸಿ ಮಾನವನ ಬೆಳವಣಿಗೆಗೆ ಸಹಾಯ ಮಾಡುವುದೇ ಆಗಿದೆ.

R.W.M. Creates-receives and constitutes ಎಂದು ಹೇಳಿದಾಗ ಈ ಶಕ್ತಿಗಳು ಎಚ್ಚರಗೊಳ್ಳುತ್ತವೆ. ಪ್ರಥಮ ಡಿಗ್ರಿಯಲ್ಲಿ ಇಡನಾಡಿಯು ಎಚ್ಚೆತ್ತು ಸದಸ್ಯನು ತನ್ನ ಉದ್ವೇಗಗಳನ್ನು ಸ್ವಾಧೀನಕ್ಕೆ ತಂದುಕೊಳ್ಳುವ ಶಕ್ತಿಯನ್ನು ಕೊಡುತ್ತದೆ. ಎರಡನೆಯ ಡಿಗ್ರಿಯಲ್ಲಿ ಪಿಂಗಳನಾಡಿ ಎಚ್ಚೆತ್ತು ಮನಸ್ಸನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಮೂರನೆಯ ಡಿಗ್ರಿಯಲ್ಲಿ ಶುಷುಮ್ನ ನಾಡಿ ಎಚ್ಚೆತ್ತು ಉನ್ನತಾದರ್ಶದಿಂದ ಸ್ಫುರಣೆ ಬರಲು ಸಹಾಯ ಮಾಡುತ್ತದೆ. ಯೋಗಿಯು ಶುಷುಮ್ನ ನಾಡಿಯ ಮೂಲಕವೇ ಪ್ರಜ್ಞಾವತ್ತಾಗಿ ಮೇಲಿನ ಲೋಕಗಳಿಗೆ ಹತ್ತಿ ಅಲ್ಲಿನ ಅನುಭವವನ್ನು ಸ್ಥೂಲ ಮೆದುಳಿಗೆ ತಂದು ಕೊಳ್ಳುವಂತೆ ಆಗುವುದು. ಗಂಡಸಿನಲ್ಲಿ ಇಡ-ಪಿಂಗಳ ಆತನ ಎಡ ಬಲ ಭಾಗಗಳಲ್ಲಿರುತ್ತವೆ. ಹೆಂಗಸಿನಲ್ಲಿ ಅದಲು ಬದಲಾಗುತ್ತವೆ. ಈ ನಾಡಿಗಳೂ ತಲೆಯಲ್ಲಿನ ಮಣಿಶಿರ ಅವಯವದಲ್ಲಿ ಕೊನೆಗೊಳ್ಳುತ್ತವೆ. ಇಡನಾಡಿ ಕೆಂಪು-ಪಿಂಗಳ ಹಳದಿ, ಶುಷುಮ್ನ ನೀಲಿ ಬಣ್ಣದ್ದು.

ಕುಂಡಲಿನಿ ಶಕ್ತಿಯು ಮೇಲ್ಕಂಡ ನಾಡಿಗಳ ಮೂಲಕ ಹತ್ತಿಕೊಂಡು ಹರಿದು ಹೋಗುವಾಗ ಎರಡು ವಿಧವಾಗಿ ವಿಶೇಷ ಬದಲಾವಣೆಗಳನ್ನು ಹೊಂದುತ್ತದೆ. ಧನ-ಋಣ ಶಕ್ತಿಗಳು ಒಂದು ವಿಧವಾಗಿ ಒಟ್ಟಿಗೆ ಸೇರುತ್ತವೆ. ಋಣಶಕ್ತಿಯೇ ಪ್ರಾಧಾನ್ಯವಾಗಿರುತ್ತದೆ. ಆದುದರಿಂದಲೇ ಬಹುಷಃ ಹೃದಯ ಮಧ್ಯದಲ್ಲಿ ವಾಸಮಾಡುವ ಜಗದಾಂಬ ವಾಸಸ್ಥಾನದಲ್ಲಿ ಕುಂಡಲಿನಿಯು ಕೆಲಯೋಗ ಸಾಧನೆ ನಿಮಿತ್ತ ಕೇಂದ್ರೀಕರಿಸಲ್ಪಟ್ಟಾಗ ಅದನ್ನು ''ಆಕೆ'' ಯೆಂದು ಕರೆಯುತ್ತಾರೆ. ಮೂಲಾಧಾರ ಚಕ್ರದಿಂದ ಹೊರಹೊಮ್ಮಿ ಮೂರು ನಾಡಿಗಳ ಮೂಲಕ ಮೇಲಕ್ಕೆ ಹತ್ತಿ ಹೋಗುವಾಗ ಪಿಂಗಳದ ಮೂಲಕ ಹರಿಯುವ ಶಕ್ತಿಯು 'ಧನ' ಸ್ವಭಾವದ್ದು (ಪುಂಶಕ್ತಿ). ಇಡದ ಮೂಲಕ ಹತ್ತಿಕೊಂಡು ಹೋಗತಕ್ಕುದ್ದು ಋಣ (ಸ್ತ್ರೀಶಕ್ತಿ). ಶುಷುಮ್ನ ನಾಡಿಯ ಮೂಲಕ ಹರಿಯುವ ಶಕ್ತಿಗೆ ಸ್ವಲ್ಪವೂ ಲೋಪವಿಲ್ಲದಂತೆ ಪೂರ್ಣಪ್ರಮಾಣದಲ್ಲಿ ಹತ್ತಿಕೊಂಡು ಹೋಗುತ್ತವೆ.

ಮೇಲ್ಕಂಡಂತೆ ಶಕ್ತಿಗಳು ಮೇಲ್ಕಂಡ ನಾಡಿಗಳ ಮೂಲಕ ಹತ್ತಿಕೊಂಡು ಹೋಗುವಾಗ ಆ ವ್ಯಕ್ತಿಯ ದೇಹಾತ್ಮದ ಲಕ್ಷಣಗಳನ್ನು ತಡೆಯುತ್ತವೆ. ಮೂಲಾಧಾರ ಚಕ್ರದಿಂದ ಹೊರ ಹೊಮ್ಮುವಾಗ ಯಾವ ಬದಲಾವಣೆಯೂ ಇಲ್ಲದ ಪರಿಶುದ್ಧ ಮಟ್ಟದಲ್ಲಿದ್ದುದು ಮೆದುಳ ಬಳ್ಳಿಯ ನಾಡಿಗಳ ಮೂಲಕ ಹತ್ತಿ ತಲೆಯ ಮೇಲೆ ಹೊರಹೊಮ್ಮಿ ಹೋಗುವಾಗ ಆ ವ್ಯಕ್ತಿಯ ದೇಹಾತ್ಮಕ್ಕೆ ಸಂಬಂಧಪಟ್ಟ ಲಕ್ಷಣಗಳನ್ನು ತಡೆಯುತ್ತವೆ.




(a) (b) (c) (d)


ಶಕ್ತಿ ವಿಶೇಷಗಳ ವಿವಾಹ

ಪ್ರತಿಯೊಂದು ಚಕ್ರವೂ ಪ್ರಾಣಮಯಕೋಶದ ಮೇಲೆ ಹೂವು ವಿಕಸಿಸಿದಂತೆ ಕಂಡುಬಂದಾಗ್ಯೂ ಅದರ ಬುಡವು ಮೆದುಳು ಬಳ್ಳಿಯಿಂದ ಹೊರ ಹೊಮ್ಮಿರುತ್ತದೆ. ಯೋಗಶಾಸ್ತ್ರದಲ್ಲಿ ಈ ಚಕ್ರಗಳ ಪ್ರಸ್ತಾಪ ಬಂದಾಗ ಬೆನ್ನುಮೂಳೆಯ ಕೇಂದ್ರಗಳೆಂದೆ ಅರ್ಥಮಾಡಿಕೊಳ್ಳಬೇಕು. ಅವುಗಳ ಅರಳಿದ ಹೂವುಗಳ ಮೇಲ್ಭಾಗವನ್ನೆಲ್ಲ ಪ್ರತಿಯೊಂದು ಚಕ್ರವನ್ನೂ ಮಾಯಾತತ್ವದಿಂದ ಮಾಡಲ್ಪಟ್ಟ ತಂತಿಯು ಬೆನ್ನುಮೂಳೆಗೆ ಜಂಟಿಸುತ್ತದೆ. ಎಲ್ಲ ಚಕ್ರಗಳ ಮೂಲಗಳೂ ಬೆನ್ನುಮೂಳೆಯಿಂದ ಹೊರ ಹೊಮ್ಮುತ್ತವೆಯಾದುದರಿಂದ ಈ ಶಕ್ತಿಯು ಅವುಗಳನ್ನು ಬೆನ್ನುಮೂಳೆಗೆ ಜಂಟಿಸಿರುವ ತಂತಿಯ ಮೂಲಕ ಹರಿದು ಚಕ್ರಗಳ ಕೇಂದ್ರಕ್ಕೆ ಹತ್ತಿ ಅಲ್ಲಿ ಮೇಲಿಂದ ಒಳಕ್ಕೆ ಧುಮುಕುವ ದೈವಿಕ ಚೈತನ್ಯವನ್ನು ಸಂಧಿಸುತ್ತದೆ. ಮೇಲ್ಕಂಡ ಎರಡು ಶಕ್ತಿಗಳಿಂದ ಉಂಟಾದ ಒತ್ತಡದಿಂದ ಎರಡೂ ಸೇರಿದ ಶಕ್ತಿ ಪ್ರವಾಹವು ಚಕ್ರಗಳ ಎಸಳುಗಳ ಮೂಲಕ ಅಡ್ಡಲಾಗಿ ಹರಿಯುತ್ತದೆ. ಕುಂಡಲಿನಿ ಶಕ್ತಿ ಮತ್ತು ಪ್ರಪ್ರಥಮ ಶಕ್ತಿಗಳ ಮೇಲ್ಭಾಗವು ಪರಸ್ಪರ ವಿರೋಧ ದಿಕ್ಕಿನಲ್ಲಿ ಸುತ್ತುವುದರಿಂದ ತುಂಬ ಒತ್ತಡವು ಉದ್ಭವವಾಗುತ್ತದೆ- ಇದನ್ನು ದೈವಿಕವಾದ ಪುಂ ಶಕ್ತಿಗೂ, ಸ್ತ್ರೀ ಶಕ್ತಿಯಾದ ಕುಂಡಲಿನಿಗೂ ಆದ ವಿವಾಹವೆಂದು ಸಾಂಕೇತಿಕವಾಗಿ ಪರಿಗಣಿಸಲಾಗಿದೆ. ಇವೆರಡರಿಂದ ಉತ್ಪತ್ತಿಯಾದ ಒಟ್ಟಿನ ಶಕ್ತಿಯನ್ನು ಮಾನವನ ದೇಹಾತ್ಮಕ್ಕೆ ಸಂಬಂಧಪಟ್ಟ ಆಕರ್ಷಣ ಶಕ್ತಿಯೆಂದು ಭಾವಿಸಲಾಗಿದೆ. ಆಗ ಚಕ್ರಗಳ ಸಮೀಪದಲ್ಲಿರುವ ನಾಳಗಳನ್ನೂ, ನರಗಳನ್ನೂ ಸಚೇತನವನ್ನಾಗಿ ಮಾಡಿ ದೇಹದ ಶಾಖವನ್ನು ಕಾಪಾಡುತ್ತದೆ-ಅದೇ ಕಾಲದಲ್ಲಿ ಗುಲ್ಮಾ ಚಕ್ರದಿಂದ ಗ್ರಹಿಸಲ್ಪಟ್ಟು ದೇಹಕ್ಕೆ ತಕ್ಕಂತೆ ಪರಿವರ್ತನೆಯಾದ ಪ್ರಾಣ ಶಕ್ತಿಯನ್ನೂ ಸಹ ದೇಹಾದ್ಯಂತ ಪ್ರಸರಿಸುವ ಹಾಗೆ ಮಾಡುತ್ತದೆ.

ಪ್ರಪ್ರಥಮ ದೈವಿಕ ಶಕ್ತಿಯು ಅನೇಕ ಅತಿ ವಾಯುತತ್ವಕ್ಕೆ ಸಂಬಂಧಪಟ್ಟ ರೂಪಗಳನ್ನು ನಿರ್ಮಿಸುತ್ತದೆ. ಹೀಗೆಯೇ ಕುಂಡಲಿನಿ ಶಕ್ತಿಯೂ ಕೂಡ ತನ್ನದೇ ಆದ ಆಕಾರಗಳನ್ನು ನಿರ್ಮಿಸುತ್ತದೆ.-ಇವೆರಡರ ಸಮ್ಮೇಳನದಿಂದ ಲಿಂಗಾಕೃತಿಯ ರೂಪವು ನಿರ್ಮಿಸಲ್ಪಡುತ್ತದೆ- ಅಲ್ಲದೆ ಅದೇ ರೂಪವು ಅದೇ ಪ್ರಮಾಣದಲ್ಲಿ ಕೆಳ ಭಾಗದಲ್ಲೂ ಕಾಣಿಸಿಕೊಳ್ಳುತ್ತದೆ- ಇದರಿಂದ ಹಿಂದೂ ದೇಶದ ಪೂರ್ವಿಕರು ಮಾನವ ಶರೀರ ಮತ್ತು ಪಶುಗಳ ಶರೀರಗಳನ್ನು ಆರೋಗ್ಯವಾಗಿ ಕಾಪಾಡುವಂತಹ ಪ್ರಕೃತಿ ಕಣದ ವಿಷಯ ತಿಳಿದಿರಬೇಕೆಂಬುದು ವ್ಯಕ್ತವಾಗುತ್ತದೆ-ಪ್ರತಿ ಶಿವ ದೇವಸ್ಥಾನದಲ್ಲೂ ಲಿಂಗಾಕೃತಿಯ ದೈವಿಕ ರೂಪವಿರುತ್ತದೆ.



ಚಿತ್ರ-6



THE CHAKRAS AND THE NERVOUS SYSTEM

ಮಾನವ ಶರೀರದಲ್ಲಿ ಎರಡು ನರವ್ಯೂಹಗಳಿವೆಯೆಂದು ಶರೀರ ಶಾಸ್ತ್ರಜ್ಞರು ವಿವರಿಸಿದ್ದಾರೆ. ಅವು ಮಸ್ತಿಷ್ಕ ಮೇರು (Cerebrospinal) ಮತ್ತು ಅನುವೇದನಾ ನರವ್ಯೂಹ (Sympathetic). ಮಸ್ತಿಷ್ಕ ಮೇರು ಮೆದುಳಿನಿಂದ ಪ್ರಾರಂಭವಾಗಿ ಮೆದುಳು ಬಳ್ಳಿಯ ಕೆಳಗಿನವರೆಗೂ ಮುಂದುವರೆದು ಅನುಕ್ರಮವಾಗಿ ಪ್ರತಿ ಎರಡು ಬೆನ್ನೆಲುಬಗಳ ನಡುವೆ ನರಗಂಟುಗಳ ಮುಖಾಂತರ ನರಗಳು ಹುಟ್ಟಿ ದೇಹದ ಎಲ್ಲಾ ಭಾಗಗಳಿಗೆ ಕವಲೊಡದಿವೆ. ಅನುವೇದನಾ ನರವ್ಯೂಹ ಎರಡು ಬಳ್ಳಿಗಳನ್ನು ಹೊಂದಿದೆ, ಇದು ಬೆನ್ನುಹುರಿಯ ಉದ್ದಕ್ಕೂ ಹರಿದು ಅದರ ಅಕ್ಷದಿಂದ ಸ್ವಲ್ಪ ಮುಂದೆ ಹೋಗಿ ಅನುಕ್ರಮವಾಗಿ ಎಡ ಮತ್ತು ಬಲಕ್ಕೆ ನೆಲೆಸಿದೆ. ಈ ಎರಡು ಬಳ್ಳಿಗಳಲ್ಲಿರುವ ನರ ಗಂಟು (Ganglion) ಗಳು, ಮೆದುಳು ಬಳ್ಳಿಯಲ್ಲಿರುವಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ, ಅನುವೇದನಾ ನರಗಳು ಮುಂದುವರೆದು ಬಲೆಯಂತಹ ವ್ಯೂಹವಾಗಿದೆ ಇದನ್ನು ನಾಳ ಜಾಲಗಳೆನ್ನುವರು (Plexuses). ಪ್ರಸಾರ ಕೇಂದ್ರಗಳಿಂದ ಬರುವಂತೆ ಇದರಿಂದ ಸಣ್ಣ ತುದಿ ನರಗಂಟು (ಉಬ್ಬು)ಗಳು ಮತ್ತು ನರಗಳು ಹೊರ ಬಂದಿವೆ. ಇವೆರಡು ನರವ್ಯೂಹಗಳು ಅನೇಕ ಸೇರಿಸುವ ನರಗಳಿಂದ ಹೆಚ್ಚಿನ ಪ್ರಮಾಣದಲ್ಲಿ ವಿವಿಧ ರೀತಿಯಲ್ಲಿ ಪರಸ್ಪರ ಸಂಬಂಧವೇರ್ಪಟ್ಟಿದೆ. ಇವೆರಡು ಪ್ರತ್ಯೇಕ ನರಗಳ ಸಂಘಟನೆಯೆಂದು ಯಾರೂ ತಿಳಿಯಬಾರದು. ಜೊತೆಗೆ ವೇಗಸ್ (Vagus) ನರಗಳು ಎಂದು ಕರೆಯುವ ಮೂರನೆಯ ಗುಂಪನ್ನು ನಾವು ಹೊಂದಿದ್ದೇವೆ, ಇದು ಕಶೇರುಕ ರಜ್ಜುವಿ (Medulla oblongata)ನಿಂದ ಹುಟ್ಟಿ ಬಹಳ ದೂರ ದೇಹದೊಳಗೆ ಸ್ವತಂತ್ರವಾಗಿ ಕೆಳಗಿಳಿದು ಬೇರೆ ವ್ಯೂಹಗಳ ನಾಳಗಳಜಾಲ ಮತ್ತು ನರಗಳೊಡನೆ ಸತತವಾಗಿ ಬೆರೆಯುತ್ತದೆ.

ಮೆದುಳು ಬಳ್ಳಿ, ಎಡ ಅನುವೇದನಾ ಬಳ್ಳಿ ಮತ್ತು ಎಡ ವೇಗಸ್ (Vagus) ನರ ಇವುಗಳನ್ನು ಫಲಕ ಆರರಲ್ಲಿ ತೋರಿಸಿವೆ. ಇದು ಬೆನ್ನು ಹುರಿ (ಮೆದುಳು ಬಳ್ಳಿ) ಮತ್ತು ಅನುವೇದನಾ ನರ ಉಬ್ಬುಗಳ ನಡುವೆ ನರಗಳ ಸಂಬಂಧವನ್ನು ವ್ಯಕ್ತಪಡಿಸುತ್ತೆ ಮತ್ತು ಕಾಲುವೆಗಳ ಮುಖಾಂತರ ಅನುವೇದನಾ ನರ ಉಬ್ಬಿನಿಂದ ನರಗಳು ಹುಟ್ಟಿ ಅನುವೇದನಾ ವ್ಯೂಹದ ಪ್ರಧಾನ ನಾಳಜಾಲಗಳಾಗಿವೆ. ನಾಳಜಾಲಗಳು ಯಾವ ನರ ಉಬ್ಬಿನಿಂದ (ಗಂಟು) ಹುಟ್ಟದೆಯೋ ಅಲ್ಲಿಂದ ಜೋತು ಬೀಳುವ ಸ್ವಭಾವವಿದೆ ಎಂಬುದನ್ನು ಗಮನಿಸೋಣ. ಉದಾಹರಣೆಗೆ - ಹೊಟ್ಟೆಯ ಕುಳಿನಾಳ ಜಾಲವು (Solar plexus) ಕರುಳಿನ ನರದಮೇಲೆ (Splanchnic nerve) ಹೆಚ್ಚಾಗಿ ಅವಲಂಬಿಸಿದೆ. 5ನೆಯ ಎದೆಯ ಅನುವೇದನಾ ನರ ಉಬ್ಬಿನಿಂದ ಹುಟ್ಟಿ ನಂತರ 4ನೆಯ ಎದೆಯ ಬೆನ್ನುಹುರಿ ನರ ಉಬ್ಬಿನೊಡನೆ (Thoracic spinal ganglion) ಸೇರಿರುವುದನ್ನು ನಮ್ಮ ಫಲಕದಲ್ಲಿ ತೋರಿಸಿದೆ. ಇದು ಹೆಚ್ಚು ಕಡಿಮೆ ಹೃದಯದ ಸಮಮಟ್ಟಕ್ಕೆ ಇದೆ, ಆದರೆ ನರ ಕೆಳಗಿಳಿದು ಸಣ್ಣ ಮತ್ತು ಅತಿ ಸಣ್ಣ ಕರುಳಿನ ನರಗಳೊಡನೆ ಸೇರಿ ಇದು ನಿಮ್ನ ಎದೆ ನರ ಉಬ್ಬಿನೊಡನೆ ಐಕ್ಯವಾಗಿ ವಪೆಯ ಮುಖಾಂತರ ಹೊಟ್ಟೆಯ ಕುಳಿ ನಾಳ ಜಾಲಗಳಿಗೆ ಹೋಗುತ್ತದೆ. ನಾಳಜಾಲಗಳ ಮತ್ತು ಬಳ್ಳಿಗಳ ನಡುವೆಯಿರುವ ಇತರೆ ಸಂಬಂಧವನ್ನು ಸ್ವಲ್ಪ ಮಟ್ಟಿಗೆ ಚಿತ್ರ ಫಲಕದಲ್ಲಿ ತೋರಿಸಿದೆ. ಆದರೆ ವಿವರಿಸಲು ತುಂಬ ಕ್ಲಿಷ್ಟವಾಗಿದೆ. ಹೃದಯ ನಾಳಜಾಲಗಳ

(Cardiac Plexus) ಕಡೆ ಮುಂದುವರೆಯುತ್ತಿರುವ ಪ್ರಮುಖ ನರಗಳು ಇದೇ ರೀತಿ ಕೆಳಮುಖವಾಗಿ ಬಾಗಿವೆ. ಕಂಠನಾಳ ಜಾಲ (Pharyngeal Plexus) ದಲ್ಲಿಯೂ ಕೂಡ ಕೊಂಚ ಜೋತುಗಳಿವೆ ಮತ್ತು ಮೆದುಳಿನ ನಾಳಜಾಲವು (Carotid Plexus) ಉನ್ನತ ಕುತ್ತಿಗೆಯ ಅನುವೇದನಾ ನರ ಉಬ್ಬಿನಿಂದ (Superior Cervical Sympathetic Ganglion)ಹೊರಬಂದಿರುವ ಆಂತರಿಕ ಮೆದುಳಿನ ನರದಿಂದ ಮೇಲಕ್ಕೆ ಎತ್ತಲ್ಪಟ್ಟಿದೆ.

ಬೆನ್ನು ಹುರಿಯಲ್ಲಿರುವ ಕೇಂದ್ರಗಳು

ಪ್ರಾಣಮಯ ಕಾಂಡದಲ್ಲಿಯೂ ಕೂಡ ಹೆಚ್ಚು ಕಡಿಮೆ ಇದೇ ರೀತಿಯ ಜೋತು (Drop) ಪ್ರಾಣಮಯ ಶರೀರದ ಮೇಲ್ಮೈಯಲ್ಲಿರುವ ಹೂವು ಅಥವಾ ಚಕ್ರಗಳು ಅವುಗಳಿಗೆ ಅನ್ವಯವಾಗುವ ಬೆನ್ನು ಹುರಿ ಕೇಂದ್ರಗಳೊಡನೆ ಸೇರಿಸುತ್ತದೆ. ಫಲಕ 4ರಲ್ಲಿ ಹೆಚ್ಚು ಕಡಿಮೆ ಅದೇ ಸ್ಥಳದಲ್ಲಿ ಇರುವುದನ್ನು ಕೆಂಪು ಗುರುತಿನಿಂದ ತೋರಿಸಿ ಪಟ್ಟಿ 2ರಲ್ಲಿ ವಿಷದ ಪಡಿಸಿದೆ.

ಚಕ್ರದ ಹೆಸರು	ಮೇಲ್ಮೈ ಸ್ಥಾನ	ಬೆನ್ನುಹುರಿ ಚಕ್ರದ ಅಂದಾಜಿನ ಸ್ಥಾನ	ಅನುವೇದವಾ ನಾಳ ಜಾಲ	ಪ್ರಮುಖ ಸಹಾಯಕ ನಾಳಜಾಲಗಳು
ಮೂಲಾಧಾರ	ಬೆನ್ನು ಹುರಿಯ ಕೆಳಗೆ	4ನೆಯ ತ್ರಿಕಾಸ್ಥಿ	ಕಾಕ್ಸಿಕ್ಸ್ ಮೂಳೆ	-
ಸ್ವಾಧಿಷ್ಠಾನ	ಪ್ಲೀಹದ ಮೇಲೆ	1ನೆಯ ಟೊಂಕದ	ಪ್ಲೀಹ (ಗುಲ್ಮ)	-
ಮಣಿಪುರ	ಹೊಕ್ಕಳಿನ ಮೇಲೆ	8ನೆಯ ಎದೆಯ ನರ ಉಬ್ಬು	ಸೋಲಾರ್ ಅಥವಾ ಹೊಟ್ಟೆಯ ಕುಳಿ	ಯಕೃತ್ತಿನ ಪೈಲೋರಿಕ್ ಜಠರದ ಮೀಸೆಂಟೆರಿಕ್
ಅನಾಹತ	ಹೃದಯದ ಮೇಲೆ	8ನೆಯ ಕುತ್ತಿಗೆಯ ನರ ಉಬ್ಬು	ಹೃದಯದ	ಪುಪ್ಪಸದ ಹೃದಯದ
ವಿಶುದ್ಧ	ಕಂಠದಲ್ಲಿ	3ನೆಯ ಕುತ್ತಿಗೆಯ	ಕಂಠನಾಳದ	-
ಆಜ್ಞೆಯಾ	ಹುಬ್ಬುಗಳ ನಡುವೆ	1ನೆಯ ಕುತ್ತಿಗೆಯ	ಮೆದುಳಿನ	ಗವಿಯಂತಹ ಮತ್ತು ತಲೆಯ ನರ ಉಬ್ಬುಗಳು

ಅವುಗಳ ಪ್ರಸಾರ ಕಾರ್ಯಕ್ಕೆ ಸಹಾಯವಾಗಲು ಚಕ್ರಗಳಿಂದ ಹೊರಡುವ ಕಿರಣೋಪಾಯದ ಕಡಿಹಲ್ಲುಗಳು ಈ ಅನುವೇದನಾ ನಾಳಜಾಲಗಳಿಗೆ ಶಕ್ತಿಯನ್ನು ಒದಗಿಸುತ್ತವೆ. ಕೆಲವು ಬರಹಗಾರರು ತೋರಿಸುವಂತೆ ಮಾಡಲು ಚಕ್ರಗಳನ್ನು ನಾಳಜಾಲಗಳೊಡನೆ ಗುರುತಿಸುವುದು ಈಗಿನ ಸ್ಥಿತಿಯಲ್ಲಿ ನಮ್ಮ ತಿಳುವಳಿಕೆ ಆತುರವೆಂದು ನನಗೆ ಕಾಣುತ್ತದೆ.

ಹೊಟ್ಟೆಯ ಕೆಳಗೆ ಅಥವಾ ಸೊಂಟದ ನಾಳ ಜಾಲಗಳು (Pelvic Plexuses) ಜನನಾಂಗಗಳ ಹತ್ತಿರ ನೆಲಸಿರುವ ಸ್ವಾಧಿಷ್ಠಾನ ಚಕ್ರದೊಡನೆ ಒಂದು ರೀತಿಯಲ್ಲಿ ಸೇರಿರುವುದರಲ್ಲಿ ಅನುಮಾನವೇ ಇಲ್ಲ. ಇದನ್ನು ಭಾರತೀಯ ಗ್ರಂಥಗಳಲ್ಲಿ ತಿಳಿಸಿದ್ದಾರೆ. ಆದರೆ ನಮ್ಮ ಪ್ರಗತಿ ಯೋಜನೆಯಲ್ಲಿ ಉಪಯೋಗಿಸಿಲ್ಲ. ಪ್ರಾಯಶಃ ಎಲ್ಲಾ ವಿಷಯದ ಪ್ರಜ್ಞಾಯುತ ಚಟುವಟಿಕೆಗಳಲ್ಲಿ ಹೊಟ್ಟೆಯಕುಳಿ ನಾಳಜಾಲಕ್ಕೆ (Solar Plexus) ಹೆಚ್ಚಾಗಿ ಸಹಾಯಕವಾಗಿರಲೆಂದು ನಾಳಜಾಲಗಳನ್ನು ಈ ಸ್ಥಳದಲ್ಲಿ ಒಟ್ಟಾಗಿ ಸೇರಿಸಲ್ಪಟ್ಟಿದೆ. ಹಾಗೆಯೇ ಇವು ಮತ್ತು ಪ್ಲೀಹ (Splenic Plexus) ನಾಳ ಜಾಲಗಳು ಅನೇಕ ನರಗಳಿಂದ ಹೆಚ್ಚು ನಿಕಟವಾಗಿ ಸೇರಿಸಲ್ಪಟ್ಟಿವೆ.

ಸಹಸ್ರಾರ ಚಕ್ರವು ಸ್ಥೂಲ ದೇಹದ ಯಾವುದೇ ಅನುವೇದನಾ ನಾಳ ಜಾಲಗಳ ಜೊತೆಗೆ ಸಂಬಂಧವುಂಟಾಗಿಲ್ಲ. ಆದರೆ ಪೀನಿಯಲ್ ಗ್ರಂಥಿ ಮತ್ತು ಪಿಟ್ಯುಟರಿ ಭಾಗದೊಡನೆ ಸೇರಿರುವುದನ್ನು ಅಧ್ಯಾಯ 4ರಲ್ಲಿ ನಾವು ನೋಡಬಹುದು. ಇದು ಮೆದುಳು ಮತ್ತು ಬೆನ್ನುಹುರಿ ನರವ್ಯೂಹದ ಬೆಳವಣಿಗೆಗೆ ಸಂಬಂಧಪಟ್ಟಿದೆ.

ಅನುವೇದನಾ ಮತ್ತು ಮಸ್ತಿಷ್ಕ ಮೇರುವಿನ ಸಂಬಂಧ ಹಾಗೂ ಹುಟ್ಟುವಿನ ಬಗ್ಗೆ ಡಾ॥ ಅನಿಬೆಸೆಂಟರು ಪ್ರಜ್ಞೆಯ ಅಧ್ಯಯನದಲ್ಲಿ ಕೆಳಕಂಡಂತೆ ಬರೆದಿದ್ದಾರೆ:

ಕಾಮತತ್ವದಿಂದ ಅಲೆಯ ರೂಪದ ಸ್ಪಂದನಗಳು ಹೇಗೆ ನರವ್ಯೂಹವನ್ನು ಕಟ್ಟುತ್ತೆಂಬದನ್ನು ನಾವು ನೋಡೋಣ. ಸಣ್ಣ ಗುಂಪಿನ ನರಕೋಶಗಳು ಮತ್ತು ಚಿಕ್ಕ ನರತಂತುಗಳಿಂದ ಸೇರಿಸಿರುವುದನ್ನು ಕಾಣಬಹುದು. ಇದು ಒಂದು ಕೇಂದ್ರದ ಚಟುವಟಿಕೆಯಿಂದ ಆಗಿದೆ. ಈ ಕೇಂದ್ರವು ಹೊರಗಿನಿಂದ ಬರುವ ಸಂವೇದನೆಗಳನ್ನು ಸ್ವೀಕರಿಸಿ ಪ್ರತಿಕ್ರಿಯಿಸುವ ಕೇಂದ್ರವು ಕಾಮತತ್ವವು ಒಟ್ಟುಗೂಡುವುದರಿಂದ ಕಾಮ ದೇಹದಲ್ಲಿ ಮೊದಲೇ ಕಾಣಿಸಿ ಕೊಂಡಿದೆ. ಆ ಕಾಮ ಶರೀರದ ಕೇಂದ್ರದಿಂದ ಸ್ಪಂದನಗಳು ಪ್ರಾಣಮಯ ಶರೀರದೊಳಕ್ಕೆ ಹಾದು ಹೋಗಿ ಅತಿವಾಯು ತತ್ವದ ಸಣ್ಣ ಸುಳಿಗಳುಂಟಾಗಿ ಅವು ಭೌತಿಕ ವಸ್ತುವಿನ ಕಣಗಳನ್ನು ತಮ್ಮೊಳಗೆ ಎಳೆದುಕೊಂಡು ಕೊನೆಗೆ ಒಂದು ನರಕೋಶ ಮತ್ತು ನರಕೋಶಗಳ ಸಮೂಹವುಂಟಾಗುತ್ತದೆ. ಈ ಸ್ಥೂಲ ಕೇಂದ್ರಗಳು ಹೊರ ಪ್ರಪಂಚದಿಂದ ಬರುವ ಸ್ಪಂದನಗಳನ್ನು ಸ್ವೀಕರಿಸಿ ಪ್ರಚೋದನೆಗಳನ್ನು ಕಾಮ ಕೇಂದ್ರಗಳಿಗೆ ಹಿಂತಿರುಗಿಸಿ ಅವುಗಳ ಸ್ಪಂದನಗಳನ್ನು ಹೆಚ್ಚು ಮಾಡುತ್ತೆ. ಈ ರೀತಿ ಸ್ಥೂಲ ಮತ್ತು ಕಾಮ

ದೇಹದ ಕೇಂದ್ರಗಳು ಪರಸ್ಪರ ಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ಉಂಟುಮಾಡುತ್ತವೆ, ಇದರಿಂದ ಪ್ರತಿಯೊಂದೂ ಹೆಚ್ಚು ಜಟಿಲವಾಗಿ ಮತ್ತು ಪರಿಣಾಮಕಾರಿಯಾಗುತ್ತದೆ. ನಾವು ಪ್ರಾಣಿ ಸಾಮ್ರಾಜ್ಯದ ಮೇಲೆ ಹೋದಹಾಗೆಲ್ಲ ಸ್ಥೂಲ ನರವ್ಯೂಹವು ಸತತವಾಗಿ ಮುಂದುವರೆಯುತ್ತಾ ದೇಹದಲ್ಲಿ ಹೆಚ್ಚು ಹೆಚ್ಚು ಪ್ರಬಲ ಅಂಶವಾಗುತ್ತಾ ಇರುವುದನ್ನು ನಾವು ಕಾಣಬಹುದು. ಕಶೇರುಕಗಳಲ್ಲಿ ಮೊಟ್ಟ ಮೊದಲಿಗೆ ಆದ ಈ ವ್ಯೂಹವೇ ಅನುವೇದನಾ ವ್ಯೂಹವಾಗಿ ಅತಿಮಹತ್ವದ ಅಂಗಗಳಾದ ಹೃದಯ ಶ್ವಾಸಕೋಶಗಳು, ಜೀರ್ಣಂಗ ನಾಳಗಳನ್ನು ನಿಯಂತ್ರಿಸುತ್ತಾ ಮತ್ತು ಶಕ್ತಿಯುತವನ್ನಾಗಿಸಿ, ಜೊತೆಗೆ ನಿಧಾನವಾಗಿ ಮಸ್ತಿಷ್ಕ ಮೇರುವ್ಯೂಹ (Cerebrospinal System) ಬೆಳೆದು, ಅನುವೇದನಾ ಜೊತೆಗೆ ಅದರ ನಿಮ್ನ ಕೆಲಸಗಳಲ್ಲಿ ನಿಕಟವಾದ ಸಂಪರ್ಕವುಂಟಾಗಿ ನಿಧಾನವಾಗಿ ಹೆಚ್ಚು ಹೆಚ್ಚು ಪ್ರಬಲವಾಗುತ್ತಾ ಇದರ ಬಹಳ ಮುಖ್ಯ ಬೆಳವಣಿಗೆಯಿಂದ ಎಚ್ಚೆತ್ತ ಪ್ರಜ್ಞೆಯ ಅಭಿವ್ಯಕ್ತತೆಯ ಸಾಧಾರಣ ಅಂಗವಾಗುತ್ತದೆ. ಮನೋಲೋಕದಲ್ಲಿ ಪ್ರಚೋದನೆಗಳು ಹುಟ್ಟುವುದರಿಂದ ಈ ಮಸ್ತಿಷ್ಕ ಮೇರುವ್ಯೂಹವು ಕಟ್ಟಿದೆ. ಕಾಮ ಲೋಕದಲ್ಲಿ ಅಲ್ಲ ಮತ್ತು ಕಾಮತತ್ವದಿಂದ ಕಟ್ಟಲ್ಪಟ್ಟಿರುವ ಅನುವೇದನಾ ವ್ಯೂಹದ ಮುಖಾಂತರ ಕಾಮದೇಹಕ್ಕೆ ಬಳಸುಮಾರ್ಗದಿಂದ ಮಾತ್ರ ಸಂಬಂಧವಿದೆ.

ಪ್ರಾಣಶಕ್ತಿ

ಸೂರ್ಯನ ಪ್ರಕಾಶವು ಹೊರಹೊಮ್ಮಿದಾಗ ನಮಗೆಲ್ಲ ಸಂತೋಷವಾಗುತ್ತದೆ- ಆದರೆ ಇದಕ್ಕೆ ಸಮಂಜಸವಾದ ಕಾರಣವು ಗುಪ್ತವಿದ್ಯಾ ಔಪಾಸಕರಿಗೆ ಮಾತ್ರ ಗೊತ್ತು. ಸೂರ್ಯನು ಬೆಳಕು ಮತ್ತು ಶಾಖವನ್ನು ತನ್ನ ಬ್ರಹ್ಮಾಂಡದಲ್ಲೆಲ್ಲ ಪ್ರಸರಿಸಿದಂತೆ ಪ್ರಾಣಶಕ್ತಿಯನ್ನೂ ಸಹ ಬಿಡುವಿಲ್ಲದಂತೆ ಪ್ರಸರಿಸುತ್ತಾನೆ. ಇದನ್ನು ಎಲ್ಲ ಪ್ರಕೃತಿಮಟ್ಟಗಳಲ್ಲೂ ಎಂದರೆ - ಸ್ಥೂಲ-ಕಾಮ- ಮತ್ತು ಮನೋ ಲೋಕಗಳಲ್ಲೆಲ್ಲ ನಿರಂತರವಾಗಿ ಪ್ರಸರಿಸುತ್ತಿರುತ್ತಾನೆ. ಆದರೆ ಈಗ ಸಧ್ಯದಲ್ಲಿ ಆತನು ಪ್ರಸರಿಸುವ ಸ್ಥೂಲಲೋಕಮಟ್ಟದ ಪ್ರಾಣಶಕ್ತಿಯ ವಿಶೇಷತೆಯು ನಮಗೆ ಬಹು ಮುಖ್ಯವಾದುದು. ಈ ಪ್ರಾಣಶಕ್ತಿಯ ಪ್ರಭಾವದಿಂದ ಕೇವಲ ಘನೀಭೂತವಾದ ಪ್ರಕೃತಿಯ ಅಣುಗಳು ಪ್ರಚೋದನೆಗೊಳ್ಳುತ್ತವೆ. ಈ ಪ್ರಾಣಶಕ್ತಿಯು ಈ ಅಣುಗಳ ಗರ್ಭದಿಂದಲೇ ಹೊರಹೊಮ್ಮುತ್ತದೆ.

ಪ್ರಾಣಶಕ್ತಿ ಗುಳ್ಳೆ

ಸ್ಥೂಲಲೋಕದ ಪ್ರಕೃತಿ ಮಟ್ಟದ ಪರಮಾಣುವು ಲೆಖ್ಖವಿಲ್ಲದಷ್ಟು (ಹದಿನಾಲ್ಕು ಸಾವಿರ ದಶಲಕ್ಷ) ಗುಳ್ಳೆಗಳ ಜೋಡಣೆಯಾಗಿರುತ್ತದೆ. ಇದನ್ನು ಶೂನ್ಯಾಕಾಶದಲ್ಲಿರುವ ಲೆಕ್ಕವಿಲ್ಲದಷ್ಟು ಗುಳ್ಳೆಗಳನ್ನೆಲ್ಲ ಒಂದು ಪರಮಾಣು ರೂಪದಲ್ಲಿ ಬಂಧಿಸಿರತಕ್ಕುದೇ ಈಶ್ವರನ ಇಚ್ಛಾಶಕ್ತಿ. ಭಗವಂತನ ಇಚ್ಛಾಶಕ್ತಿಯು ಸ್ವಲ್ಪ ಸಡಿಲವಾದರೂ ಸಾಕು, ಈ

ಸ್ಥೂಲಲೋಕವೆಲ್ಲ ಮಾಯವಾಗಿ ಹೋಗುತ್ತದೆ-ಈ ಶಕ್ತಿಯು ಆ ಪರಮಾಣುವಿನ ಹೊರಗಿನಿಂದ ಬರುವುದಿಲ್ಲ. ಅದು ಅದರೊಳಗಿನಿಂದಲೇ ಉಕ್ಕಿ ಬರುತ್ತದೆ -ಎಂದರೆ ಉನ್ನತ ಮಟ್ಟದಿಂದ ಆ ಶಕ್ತಿಯು ಅದರೊಳಕ್ಕೆ ಧುಮುಕುತ್ತದೆ. ಹೀಗೆಯೇ ಪ್ರಾಣಶಕ್ತಿಯೂ ಕೂಡ ಅದರೊಳಗಿಂದಲೇ ಉಕ್ಕಿಬರುತ್ತದೆ- ಎಂದರೆ ಉನ್ನತ ಪ್ರಜ್ಞೆ ಮಟ್ಟದಿಂದ-ಆದರೆ ಬೆಳಕು, ಶಾಖ ಮತ್ತು ವಿದ್ಯುಚ್ಛಕ್ತಿಗಳು ಹೊರಗಿನಿಂದ ಪ್ರಭಾವ ಬೀರಿ ಕೆಲಸ ಮಾಡುತ್ತವೆ.

ಪ್ರಾಣಶಕ್ತಿಯು ಪರಮಾಣುವಿನೊಳಗಿಂದಲೇ ಉಕ್ಕಿಬಂದು ಅದಕ್ಕೆ ಆಕರ್ಷಣ ಶಕ್ತಿಯನ್ನುಂಟುಮಾಡುತ್ತದೆ. ಅದು ಅಕರ್ಷಣಶಕ್ತಿಯ ಮೂಲಕ ಮತ್ತೆ ಆರು ಪರಮಾಣುಗಳನ್ನು ಸೆಳೆದುಕೊಂಡು ಒಂದು ಗೊತ್ತಾದ ಆಕಾರವುಳ್ಳ ಒಂದು ಮೂಲವಸ್ತುವನ್ನುಂಟುಮಾಡುತ್ತದೆ. (ಇದಕ್ಕೆ Sub Atomic Element ಎಂದು ಹೆಸರು). ಈ ಮೂಲ (ಧಾತು) ವಸ್ತು ಬೇರೆ ಮೂಲವಸ್ತುಗಳಿಂದ ಭಿನ್ನವಾದುದು. ಏಕೆಂದರೆ ಇದನ್ನು ಒಂದೇ ರೂಪದಲ್ಲಿ ಬಂಧಿಸಿರುವ ಶಕ್ತಿಯು ಬ್ರಹ್ಮನಿಂದ ಬರತಕ್ಕುದಲ್ಲ. ಮೊದಲನೆಯ ಮೂರ್ತಿ ಶಿವನಿಂದಲೇ ಹೊರಹೊಮ್ಮತಕ್ಕದ್ದು.

ಆಕಾಶತತ್ವದಲ್ಲಿ ಈ ಗುಳ್ಳೆಗಳು ಹಾರಾಡುತ್ತಿರುತ್ತವೆ. ಇವು ತುಂಬ ಚಟುವಟಿಕೆಯಿಂದ ಕೆಲಸ ಮಾಡುತ್ತವೆ. ಬ್ಲಾವಟ್ಸ್ಕಿ ಯವರು ಸೀಕ್ರೆಟ್ ಡಾಕ್ಟ್ರಿನ್ ಗ್ರಂಥದಲ್ಲಿ ಬರೆದಿರುವ ಅಗ್ನಿ ಜೀವಕಣಗಳು ಇವೇ ಇರಬಹುದು. ಈ ಅಗ್ನಿ ಜೀವಕಣಗಳು ಅತ್ಯಂತ ಉನ್ನತಮಟ್ಟವೆಂದರೆ ಆದಿ ತತ್ವದ ಮಟ್ಟಕ್ಕೆ ಸಂಬಂಧಪಟ್ಟವು; ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಯ ಅತ್ಯಂತ ಉನ್ನತಮಟ್ಟದ ಚೈತನ್ಯಕ್ಕೆ ಸಂಬಂಧಪಟ್ಟವು.

ಈ ಮೇಲ್ಕಂಡ ಗುಳ್ಳೆಗಳನ್ನು ಸಜೀವವತ್ತಾಗಿಟ್ಟಿರುವ ಚೈತನ್ಯವು ಬೆಳಕಿಗೆ ಸಂಬಂಧಪಟ್ಟುದಲ್ಲ- ಆದರೆ ಬೆಳಕಿನ ಸಹಾಯವು ಈ ಚೈತನ್ಯದ ಅಭಿವ್ಯಕ್ತತೆಗೆ ಅತ್ಯಾವಶ್ಯಕವಾದುದು. ಪ್ರಕಾಶಮಾನವಾದ ಸೂರ್ಯನ ಬೆಳಕಿನಲ್ಲಿ ಈ ಪ್ರಾಣಶಕ್ತಿಯ ಗುಳ್ಳೆಗಳು ಹೇರಳವಾಗಿ ಉತ್ಪತ್ತಿಯಾಗುತ್ತವೆ. ಆದರೆ ಮೋಡ ಕವಿದಿರುವಾಗ ಇವುಗಳ ಉತ್ಪತ್ತಿಯು ಕೇವಲ ಕಡಮೆಯಾಗುತ್ತದೆ. ರಾತ್ರಿ ಕಾಲದಲ್ಲಿ ಇವುಗಳ ಉತ್ಪತ್ತಿಯು ನಿಂತು ಹೋಗುತ್ತದೆ. ರಾತ್ರಿ ಕಾಲದಲ್ಲಿ ಹಿಂದಿನ ಹಗಲುಗಳಲ್ಲಿ ಉತ್ಪತ್ತಿಯಾದ ಮೊತ್ತವನ್ನೇ ಅವಲಂಬಿಸಬೇಕಾಗುತ್ತದೆ. ಈ ಪ್ರಾಣಶಕ್ತಿಯ ಗುಳ್ಳೆ ಒಂದು ಸಾರಿ ರೂಪದೇಹದಿಂದ ಮೇಲೆ ಹೋದಾಗ ಯಾವ ಬದಲಾವಣೆಗಳಿಗೂ ಒಳಗಾಗುವುದಿಲ್ಲ. ಯಾವುದಾದರೂ ಪ್ರಾಣಿಯು ಅದನ್ನು ದೇಹದೊಳಕ್ಕೆ ತೆಗೆದುಕೊಳ್ಳುವವರಿಗೆ ತನ್ನ ಸಹಜ ಸ್ಥಿತಿಯಲ್ಲಿ ಕಾದಿರುತ್ತದೆ.

ಪ್ರಾಣ ಶಕ್ತಿ ಗುಳಿಗೆಗಳ ಪೂರೈಕೆ

ಸೂರ್ಯನಿಂದ ಶಾಖ ಮತ್ತು ಬೆಳಕಿನಂತೆ ಪ್ರಾಣಶಕ್ತಿಯೂ ಕೂಡ ನಿತ್ಯವಾಗಿ ಪ್ರಸರಿಸುತ್ತಲೇ ಇರುತ್ತದೆ. ಆದರೆ ಧೀರ್ಘಕಾಲ ಮೋಡ ಕವಿದಿದ್ದ ಪಕ್ಷದಲ್ಲಿ ಪ್ರಾಣಶಕ್ತಿಯ ಮೊತ್ತವು ಒದಗಿಸಲ್ಪಡುವುದರಲ್ಲಿ ಕಡಿಮೆಯಾಗುತ್ತದೆ. (ಅಂತಹ ಕಾಲದಲ್ಲಿಯೇ ಖಾಯಿಲೆಗಳು ತಲೆಯೆತ್ತುವುದು) ಅಲ್ಲದೆ ಜೀವ ಜಂತುಗಳೆಲ್ಲವೂ ಸೂರ್ಯನ ಪ್ರಕಾಶಕ್ಕಾಗಿ ಹಾತೊರೆಯುತ್ತಿರುತ್ತವೆ. ಪ್ರಬಲವಾದ ಆರೋಗ್ಯ ಸಂಪತ್ತುಳ್ಳವರು ಸುತ್ತುಮುತ್ತಲೂ ಇರುವ ವಾತಾವರಣದಿಂದ ಪ್ರಾಣ ಶಕ್ತಿಯ ಗುಳಿಗೆಗಳನ್ನು ಆಕರ್ಷಿಸಿ ತಮ್ಮ ಶರೀರದೊಳಕ್ಕೆ ಸೇರಿಸಿಕೊಳ್ಳುತ್ತಾರೆ. ಆದರೆ ಆರೋಗ್ಯದಲ್ಲಿ ಅಷ್ಟು ಪ್ರಬಲವಾಗಿಲ್ಲದವರೂ ಮತ್ತು ರೋಗಿಗಳೂ ಸಹ ನಿಶ್ಯಕ್ತರಾಗುತ್ತಾರೆ-ಅನೇಕರಿಗೆ ಇದರ ಕಾರಣ ಗೊತ್ತಿರುವುದಿಲ್ಲ. ಹೀಗೆಯೇ ಛಳಿಗಾಲದಲ್ಲಿ ಬೇಸಿಗೆ ಕಾಲಕ್ಕಿಂತಲೂ ಆರೋಗ್ಯವು ಅಷ್ಟು ಸಮರ್ಪಕವಾಗಿರುವುದಿಲ್ಲ.

ಈ ಪ್ರಶ್ನೆಯನ್ನು ಅರ್ಥಮಾಡಿಕೊಂಡಿರತಕ್ಕ ಗುಪ್ತವಿದ್ಯಾ ಔಪಾಸಕರಿಗೆ ಸೂರ್ಯನ ಬೆಳಕು ಮತ್ತು ಶಾಖಗಳೂ ಆರೋಗ್ಯಕ್ಕೆ ತುಂಬ ಅವಶ್ಯಕವಾದುವು ಎಂಬಂಶ ಚೆನ್ನಾಗಿ ಗೊತ್ತಿರುತ್ತದೆ. ಹೀಗೆಯೇ ಸೂರ್ಯನ ಪ್ರಕಾಶವು ಒಂದೇ ಸಮನಾಗಿ ಮುಂದುವರಿಯುತ್ತಿದ್ದರೆ ಬರಿಯ ಸ್ಥೂಲದೇಹದ ಆರೋಗ್ಯವೇ ಅಲ್ಲ ಮೇಲಿನ ಲೋಕಗಳಿಗೆ ಸಂಬಂಧಪಟ್ಟ ಭಾವನೆ-ವಿಚಾರ ಶಕ್ತಿ ಮತ್ತು ಆಧ್ಯಾತ್ಮಿಕ ಜೀವಿತವೂ ಕೂಡ ಪ್ರಸನ್ನತೆಯಿಂದ ಕೂಡಿರುತ್ತದೆ.

ಮಾನಸಿಕ ಶಕ್ತಿವಿಶೇಷಗಳು

ಪ್ರಪ್ರಥಮ ದೈವಿಕಶಕ್ತಿ, ಪ್ರಾಣಶಕ್ತಿ ಮತ್ತು ಕುಂಡಲಿನಿ ಶಕ್ತಿ-ಇವುಗಳು ಸಾಕ್ಷಾತ್ತಾಗಿ ಮಾನವನ ಮಾನಸಿಕ ಮತ್ತು ಭಾವನಾ ಮಟ್ಟದ ಜೀವಿತಗಳಿಗೆ ಸಂಬಂಧಪಟ್ಟಿಲ್ಲ; ಆದರೆ ಸ್ಥೂಲ ದೇಹದ ಆರೋಗ್ಯಕ್ಕೆ ಮಾತ್ರ ಸಂಬಂಧಪಟ್ಟುದಾಗಿರುತ್ತದೆ. ಆದರೆ ಚಕ್ರಗಳೊಳಕ್ಕೆ ಪ್ರವಹಿಸುವ ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳಿರುತ್ತವೆ. ಹೊಕ್ಕಳ ಚಕ್ರಕ್ಕೆ ಕೆಳಗಿರುವ ಚಕ್ರಗಳಿಗೆ ಮೇಲ್ಕಂಡ ಶಕ್ತಿಗಳ ಸಂಬಂಧವಿರುವುದಿಲ್ಲ, ಹೊಕ್ಕಳದ ಚಕ್ರ ಮತ್ತು ಮೇಲ್ಪಟ್ಟದ ಚಕ್ರಗಳೊಳಕ್ಕೆ ಧುಮುಕುವ ಶಕ್ತಿವಿಶೇಷಗಳು ಮಾನವನ ಪ್ರಜ್ಞೆ ವಿಕಾಸಕ್ಕೆ ಸಂಬಂಧಪಟ್ಟವು.

ಅಂತರಂಗಿಕ ಜೀವಿತ (Inner life) ಎಂಬ ಗ್ರಂಥದಲ್ಲಿ ಯೋಚನೆಗಳ ಒಂದು ನಿರ್ದಿಷ್ಟ ರೂಪಗಳು ಸ್ಥಳವನ್ನು ಆಕ್ರಮಿಸುವಂತಹವು-ಅದೇ ವಿಷಯವಾದ ಸಂಕಲ್ಪ ರೂಪಗಳು ಒಂದೇ ನಿರ್ದಿಷ್ಟವಾದ ಸ್ಥಳಾವಕಾಶದಲ್ಲಿ ಸೇರುತ್ತವೆ. ಆದುದರಿಂದ ಪ್ರತಿಯೊಂದು ವಿಷಯಕ್ಕೂ ತನ್ನದೇ ಆದ ಸ್ಥಳವಿರುತ್ತದೆ. ಒಂದೇ ವಿಷಯಕ್ಕೆ ಸಂಬಂಧಪಟ್ಟ ಯೋಚನೆಗಳು ಒಂದು ಗೊತ್ತಾದ ಸ್ಥಳದಲ್ಲಿ ಸೇರಿಕೊಂಡು ಯೋಚನೆಗಳ ಮೊತ್ತವನ್ನೂ

ಪ್ರಭಾವವನ್ನೂ ಹೆಚ್ಚಿಸುತ್ತವೆ. ಸ್ವಂತವಾಗಿ ಯೋಚನೆ ಮಾಡತಕ್ಕ ಶ್ರಮವನ್ನು ತಪ್ಪಿಸಿಕೊಳ್ಳಬೇಕೆಂಬ ಸೋಮಾರಿಗೆ ಆಗಲೇ ಸಿದ್ಧಪಡಿಸಲ್ಪಟ್ಟಿರುವ ಯೋಚನೆಗಳು ಸುಲಭವಾಗಿ ಬಂದು ಸಹಾಯ ಮಾಡುತ್ತವೆ.

ಯೋಚನೆಗೆ ಸಂಬಂಧಪಟ್ಟಂತೆ ಮನೋಲೋಕವಿರುತ್ತದೆ. ಹೀಗೆಯೇ ಅಗತ್ಯವಾದ ಬದಲಾವಣೆಯೊಡನೆ ಕಾಮಲೋಕವಿರುತ್ತದೆ. ಯೋಚನೆಗಳು ಮನೋಲೋಕದಲ್ಲಿ ಮಿಂಚಿನಂತೆ ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಒಂದೇ ಕಡೆ ಸೇರಿಕೊಂಡು ಇದ್ದು ಅದೇ ವಿಷಯವನ್ನು ಯೋಚಿಸಿರತಕ್ಕವರಿಗೆ ಸುಲಭವಾಗಿ ದೊರಕುತ್ತದೆ. ಕಾಮಲೋಕದ ತತ್ವವು ಅಷ್ಟು ಸೂಕ್ಷ್ಮವಾದುದಲ್ಲ. ಆದುದರಿಂದ ಭಾವನೆಗಳ ರೂಪಗಳು ಒಂದೇ ಕಡೆ ಸೇರದೆ ಅಲ್ಲಲ್ಲಿ ಹಾರಾಡುತ್ತಿರುತ್ತವೆ. ಆದರೆ ಅದೇ ಸ್ವಭಾವದ ಬಾವನೆ ರೂಪಗಳು ನೆರೆಯಲ್ಲಿ ದೊರೆತರೆ ಅವುಗಳೊಡನೆ ಒಂದಾಗುತ್ತವೆ. ಅಂತಹ ಬಾವನಾ ರೂಪಗಳು ಹತ್ತಿರ ಬರುವ ಮಾನವರ ಮೇಲೆ ತಮ್ಮ ಪ್ರಭಾವ ಬೀರದೆ ಇರುವುದಿಲ್ಲ.

ಅಂತಹ ಪ್ರಭಾವಗಳು ಯಾವುದಾದರೂ ಒಂದು ಚಕ್ರದ ಮೂಲಕ ಮಾನವನ ಪ್ರಜ್ಞೆಯನ್ನು ಸೇರುತ್ತದೆ. ಉದಾಹರಣೆಗಾಗಿ ಭಯವನ್ನು ತೆಗೆದುಕೊಳ್ಳೋಣ. ''ದೃಶ್ಯಾದೃಶ್ಯ ಮನುಷ್ಯ'' ಎಂಬ ಗ್ರಂಥವನ್ನು ಓದಿದವರಿಗೆ ಭಯಗ್ರಸ್ಥನಾದ ಮಾನವನ ಕಾಮದೇಹದ ಪರಿಸ್ಥಿತಿಯು ಜ್ಞಾಪಕಕ್ಕೆ ಬರುತ್ತದೆ. ಅಂತಹ ಭಯಕ್ಕೆ ಒಳಗಾದ ಕಾಮದೇಹಗಳು ನೆರೆಹೊರೆಯಲ್ಲಿರಬಹುದಾದ ಭಯದ ಮೋಡಗಳನ್ನು ಆಕರ್ಷಿಸುತ್ತವೆ. ಮಾನವನು ಭಯದಿಂದ ವಿಮುಕ್ತನಾದರೆ ಕೂಡಲೇ ಭಯದ ಮೋಡಗಳು ಆತನಿಂದ ದೂರ ಸರಿಯುತ್ತವೆ. ಹಾಗಲ್ಲದೆ ಭಯವು ಮುಂದುವರಿದರೂ ಹೆಚ್ಚಾದರೂ ಕೂಡ ಆ ಸಂಬಂಧವಾದ ಪ್ರಭಾವವು ಹೊಕ್ಕಳಿನ ಚಕ್ರದ ಮೂಲಕ ಆತನನ್ನು ಇನ್ನೂ ಹೆಚ್ಚಾದ ಭಯಕ್ಕೆ ಗುರಿ ಮಾಡುತ್ತವೆ. ಹೀಗೆಯೇ ಕೋಪಕ್ಕೆ ಒಳಗಾದವನು ಹೊರಗಿನಿಂದ ಕೋಪದ ಅಲೆಗಳನ್ನು ಆಕರ್ಷಿಸುತ್ತಾನೆ-ಆಗ ಮಾನವನ ಕೋಪವು ಹದ್ದು ಮೀರುವಷ್ಟು ಪ್ರಬಲವಾಗುತ್ತದೆ. ಆಗ ಅಂತಹವನು ಎಂತಹ ಪಾಪಕಾರ್ಯವನ್ನದರೂ ಮಾಡಿ ಬಿಡಬಹುದು. ಹೀಗೆಯೇ ಖಿನ್ನತೆಗೆ ಒಳಗಾದವನು ತುಂಬ ವ್ಯಸನಾಕ್ರಾಂತ ಸ್ಥಿತಿಗೆ ಜಾರಿಬೀಳಬಹುದು. ಹೀಗೆಯೇ ಪುಂ-ಸ್ತ್ರೀ ಕಾಮಕ್ಕೊಳಗಾದವನೂ ಕೂಡ ಕೇವಲ ನಿಂದ್ಯವಾದ ನೀಚ ಸ್ಥಿತಿಗೆ ಬಿದ್ದು ಬಿಡಬಹುದು. ಆ ಮೂಲಕ ಮಾಡಬಾರದ ತಪ್ಪುಗಳನ್ನು ಮಾಡಿ ಅನಂತರ ತನ್ನ ಸಮಾಧಾನ ಸ್ಥಿತಿಗೆ ಹಿಂತಿರುಗಿದಾಗ ಭಯಂಕರವಾದ ತಪ್ಪನ್ನು ಮಾಡಿದೆನಲ್ಲ! ಎಂಬುದಾಗಿ ಆಶ್ಚರ್ಯಪಡುವಂತೆ ಆಗುತ್ತದೆ.

ಮೇಲ್ಕಂಡ ನಿಂದ್ಯವಾದ ಪ್ರೇರಣೆಗಳೆಲ್ಲವೂ ಸಂಬಂಧಪಟ್ಟ ಮಾನವನ ಹೊಕ್ಕಳು ಚಕ್ರದಿಂದ ಉಗಮವಾಗುತ್ತವೆ. ಅಲ್ಲದೆ ಮಾನವನ ಸುಯೋಗವೋ ಎಂಬಂತೆ

ಉನ್ನತಮಟ್ಟದ ಪ್ರೀತಿ ಮತ್ತು ಭಕ್ತಿ ಭಾವನೆಗಳಿರುತ್ತವೆ. ಇಂತಹ ಉನ್ನತ ಮಟ್ಟದ ಭಾವನೆಗಳು ಹೃದಯ ಚಕ್ರದ ಮೂಲಕ ಇನ್ನೂ ಉನ್ನತ ಮಟ್ಟಕ್ಕೆ ವಿಜೃಂಭಿಸಬಹುದು.

ಡಾ॥ ಅನಿಬೆಸೆಂಟರು ತಿಳಿಸುವ ಪ್ರಕಾರ ದ್ವೇಷಕ್ಕೆ ಸಂಬಂಧಪಟ್ಟ ಭಾವನೆಗಳು ಹೊಕ್ಕಳು ಚಕ್ರದ ಮೂಲಕವೂ ಪ್ರೇಮಕ್ಕೆ ಸಂಬಂಧಪಟ್ಟ ಭಾವನೆಗಳು ಹೃದಯ ಚಕ್ರದ ಮೂಲಕವೂ ಕೆಲಸ ಮಾಡುತ್ತವೆ.

ಆಕೆಯು ತನ್ನ ''ಪ್ರಜ್ಞೆಯ ಅಧ್ಯಯನ'' ಎಂಬ ಗ್ರಂಥದಲ್ಲಿ ಈ ಮುಂದಿನಂತೆ ಬರೆದಿರುತ್ತಾರೆ:-

''ನಮಗೆ ಗೊತ್ತಿರುವ ಪ್ರಕಾರ ಆಶೆಗೆ ಎರಡು ಮುಖ್ಯವಾದ ಅಭಿವ್ಯಕ್ತ ಸ್ಥಿತಿಗಳಿರುತ್ತವೆ. ಸುಖದ ಕಡೆ ಒಲವು ದುಃಖದಿಂದ ವಿಮುಕ್ತತೆ-ಬೇಕು, ಬೇಡ ಎಂಬ ಭಾವನೆಗಳು.''

ಭಾವನೆಯೂ ಕೂಡ ಆಶೆಗೆ ಸಂಬಂಧಪಟ್ಟುದೇ ಆದುದರಿಂದ ಇದಕ್ಕೂ ಕೂಡ ರಾಗ-ದ್ವೇಷಗಳೆಂಬ ಎರಡು ಪ್ರವೃತ್ತಿಗಳಿರುತ್ತವೆ. ಪ್ರೇಮ ಮತ್ತು ದ್ವೇಷ, ಸುಖದಿಂದ ಒಂದು ಮಾಡುತ್ತದೆ; ದ್ವೇಷವು ತನಗೆ ಆಗದೆ ಇರುವವರಿಂದ ಪ್ರತ್ಯೇಕಗೊಳಿಸುತ್ತದೆ.

ಪ್ರೇಮವು ಕೆಳಮುಖವಾಗಿ ಕೆಲಸ ಮಾಡಿದರೆ ಅದಕ್ಕೆ ಉಪಕಾರ ಬುದ್ಧಿಯೆನ್ನಿಸಿಕೊಳ್ಳುತ್ತದೆ. ಪ್ರೇಮವು ಮೇಲಕ್ಕೆ ತಿರಗುವುದಾದರೆ ಆ ಭಾವನೆಯು ಭಕ್ತಿ ಅಥವಾ ಗೌರವವೆನ್ನಿಸಿಕೊಳ್ಳುತ್ತದೆ. ಹಾಗಲ್ಲದೆ ಪರಸ್ಪರ ಪ್ರೀತಿ-ವಿಶ್ವಾಸಗಳುಳ್ಳವರು, ಸಮಾನಸ್ಕಂದರಾದರೆ-ಪ್ರೇಮವು ಪರಸ್ಪರ ಪ್ರೀತಿ - ವಿಶ್ವಾಸ, ಒಬ್ಬರು ಮತ್ತೊಬ್ಬರನ್ನು ತೃಪ್ತಿಪಡಿಸತಕ್ಕ ಮನೋಭಾವನೆ, ಪರಸ್ಪರ ಕಷ್ಟಗಳನ್ನು ಸಹಿಸಿಕೊಳ್ಳತಕ್ಕ ಮನೋಭಾವನೆ, ಸಮಾನರಾದವರಲ್ಲಿ ಪರಸ್ಪರ ಸಂತೋಷಪಡಿಸತಕ್ಕ ಮನೋಭಾವನೆ-ಸಹಾಯ ಮಾಡತಕ್ಕ ಭಾವನೆ. ಹೀಗೆ ಪ್ರೇಮವು ವ್ಯಕ್ತಿಯಲ್ಲಿ ತನಗಿಂತ ಉತ್ತಮದವರಾದರೆ ಗೌರವ-ಭಕ್ತಿಯಾಗಿಯೂ, ತನಗಿಂತ ಕೆಳಮಟ್ಟದವರಾದರೆ ಕರುಣೆ ಸಹಾನು-ಭೂತಿಯಾಗಿಯೂ ಪರಿಣಮಿಸುತ್ತದೆ.

ಹೀಗೆ ದ್ವೇಷವು ಕೆಳಮುಖವಾದರೆ ತಾತ್ಸಾರ ಭಾವನೆ-ಮೇಲ್ಮುಖವಾದರೆ ಭಯ, ಸಮಾನಸ್ಕಂದರಲ್ಲಿ ಕೋಪ-ಅಗೌರವ-ಹೊಟ್ಟೆಕಿಚ್ಚು ಮೊದಲಾದ ರೂಪಗಳನ್ನು ತಾಳುತ್ತದೆ.

ಪ್ರೇಮವು ಅಭಿವ್ಯಕ್ತವಾದಾಗಲೆಲ್ಲಾ-ಸಹಾನುಭೂತಿ-ಆತ್ಮತ್ಯಾಗ - ತ್ಯಾಗ ಮನೋಭಾವನೆ-ಇಂತಹ ಲಕ್ಷಣಗಳನ್ನು ಹೊಂದಿರುತ್ತದೆ. ಅದು ಕೆಳಮಟ್ಟದಲ್ಲಿ

ಪರೋಪಕಾರ ಬುದ್ಧಿ-ಸಮಾನಸ್ಕಂದರಲ್ಲಿ ಪರಸ್ಪರ ಸಹಾಯ ಮಾಡತಕ್ಕ ಮನೋಭಾವನೆ, ಮೇಲ್ಪಟ್ಟವರಲ್ಲಿ ಭಕ್ತಿ ರೂಪವನ್ನು ತಾಳುತ್ತದೆ. ಪ್ರೇಮವು ಆತ್ಮ ಸ್ವರೂಪದ್ದು. ಸಹಾನುಭೂತಿ ಎಂದರೆ ತನ್ನಂತೆ ಇತರರನ್ನು ಭಾವಿಸುವುದು. ಆತ್ಮ ತ್ಯಾಗವು ಯಾರಿಗೆ ಮಾಡಲ್ಪಡುತ್ತದೆಯೋ ಅಂತಹವರನ್ನು ತನ್ನಂತೆಯೆ ಭಾವಿಸಲ್ಪಟ್ಟರೆ ಮಾತ್ರ ಸಾಧ್ಯ-ಪ್ರೇಮವು ಆತ್ಮ ಸ್ವಭಾವದ ಲಕ್ಷಣ.

ದ್ವೇಷ:-ಇತರರನ್ನು ದ್ವೇಷ ಬುದ್ಧಿಯಿಂದ ನೋಡುವುದೂ, ಇತರರ ಮೇಲೆ ದಬ್ಬಾಳಿಕೆ ನಡೆಸುವುದೂ, ಸ್ವಾರ್ಥಬುದ್ಧಿಯಿಂದ ಇತರರಿಂದ ಪ್ರಯೋಜನವನ್ನು ಪಡೆಯುವುದೂ ಇವು ಪ್ರತ್ಯೇಕ ಬಾವನೆಯಿಂದ ಮೂಡುತ್ತವೆ. ಇದು ದೇಹವೇನಾನೆಂಬ ಅಜ್ಞಾನದಿಂದ ಹೊರಹೊಮ್ಮುತ್ತದೆ.

ಅಧ್ಯಾಯ ೩

ಪ್ರಾಣಶಕ್ತಿಯನ್ನು ಮೈಗೂಡಿಸಿಕೊಳ್ಳುವುದು

ಪ್ರಾಣಶಕ್ತಿಯ ಗುಳ್ಳೆ

ಪ್ರಾಣಶಕ್ತಿಯ ಗುಳ್ಳೆಯು ಬಹು ಸೂಕ್ಷ್ಮವಾದುದು. ಆದಾಗ್ಗೂ ದಿವ್ಯ ದೃಷ್ಟಿಯನ್ನು ಬೆಳೆಸಿಕೊಳ್ಳದೇ ಇರುವವರೂ ಕೂಡ ಪ್ರಕಾಶಮಾನವಾದ ಪ್ರಾಣಶಕ್ತಿಯ ಗುಳ್ಳೆಗಳನ್ನು ಕೆಲವು ಸಂದರ್ಭಗಳಲ್ಲಿ ನೋಡಬಲ್ಲರು. ಕೆಲವರು ಸಮುದ್ರದ ಆಚೆ ಪಕ್ಕದಲ್ಲಿರುವ ದಿಗಂತವನ್ನು ನೋಡುತ್ತಿರುವಾಗ ಕೆಲವು ಪ್ರಕಾಶ ಮಾನವಾದ ಗುಳ್ಳೆಗಳು, ತಾಂಡವವಾಡುತ್ತಿರುವುದನ್ನ ನೊಡಬಹುದು. ಇವು ಪ್ರಾಣಶಕ್ತಿಯ ಗುಳ್ಳೆಗಳು ಅಗ್ನಿಯಂತೆ ಹೊಳೆಯುತ್ತಿರುತ್ತವೆ. ವಾತಾವರಣದಲ್ಲಿ ಪ್ರಾಣದ ಗುಳ್ಳೆಯು ತಾಂಡವಾಡುತ್ತಿರುವಾಗ ಅದು ಪ್ರಕಾಶಮಾನವಾದ ಸೂರ್ಯನ ಬೆಳಕಿನಂತೆಯೂ ಅದರ ಸ್ವರ್ಣವರ್ಣದಲ್ಲೂ ಹೊಳೆಯುತ್ತಿರುತ್ತದೆ. ಅದು ನಮ್ಮ ಹೊಕ್ಕಳು ಚಕ್ರದ ಪ್ರಭಾವಕ್ಕೆ ಒಳಪಟ್ಟು ಆಕರ್ಷಿತವಾದಾಗ ಅದು ವಿಧ ವಿಧವಾದ ಬಣ್ಣಗಳನ್ನು ಪಡೆಯುತ್ತದೆ. ಈ ವಿಧ ವಿಧವಾದ ಕಿರಣಗಳು ಬೇರೆ ಬೇರೆ ದಿಕ್ಕಿನಲ್ಲಿ ಪ್ರಸರಿಸಿ ಇಡೀ ದೇಹವನ್ನೆಲ್ಲ ಚೈತನ್ಯಯುಕ್ತವಾದುದನ್ನಾಗಿ ಮಾಡುತ್ತವೆ. ಇವುಗಳ ಬಣ್ಣಗಳು ನೇರಳೆಬಣ್ಣ-ನೀಲಿ-ಹಸಿರು-ಹಳದಿ-ಕಿತ್ತಲೆಬಣ್ಣ ಮತ್ತು ಕಪ್ಪು ಮಿಶ್ರವಾದ ಕೆಂಪು. ಎಳನೆಯದಾದ ಗುಲಾಬಿ ಬಣ್ಣವು ಚಕ್ರದ ಬಾಯಿಯೊಳಕ್ಕೆ ಇಳಿಯುತ್ತದೆ. ಪ್ರಾಣಶಕ್ತಿಯು ಹೀಗೆ ಸಪ್ತ ಕಿರಣಗಳುಳ್ಳದ್ದು. ಇದು ಶರೀರದ ಮೂಲಕ ಐದು ಪ್ರವಾಹಗಳಲ್ಲಿ ಹರಿಯುತ್ತದೆ.-ಹಿಂದೂ ಸಂಸ್ಕೃತಿಯ ಪ್ರಕಾರ ಪಂಚಪ್ರಾಣಗಳೆಂದು ಇದನ್ನು ಕರೆದಿದೆ, ಏಕೆಂದರೆ ಹೊಕ್ಕಳು ಚಕ್ರದಿಂದ ಹೊರ ಹೊಮ್ಮಿದ ಪ್ರಾಣಶಕ್ತಿಯು ನೀಲಿ ಮತ್ತು ನೇರಳೆ ಒಂದಾಗುತ್ತವೆ.-ಮತ್ತು ಕಿತ್ತಲೆ ಮತ್ತು ಕಪ್ಪುಮಿಶ್ರ ಕೆಂಪು ಸಹ ಅದೇ ರೀತಿ ಒಂದುಗೂಡುತ್ತವೆ.

ನೇರಳೆ-ನೀಲಿ ಬಣ್ಣದ ಕಿರಣ

1) ನೇರಳೆ-ನೀಲಿ ಬಣ್ಣದ ಕಿರಣವು ಮೇಲಕ್ಕೆ ನೆಗೆದು ಕಂಠದ ಹತ್ತಿರ ಎರಡು ವಿಭಾಗಗಳಾಗಿ, ತೆಳುವಾದ ನೀಲಿ ಕಿರಣವು ಕತ್ತಿನ ಚಕ್ರವನ್ನು ಚುರುಕುಗೊಳಿಸುತ್ತದೆ.

ಸಾಂದ್ರವಾದ ನೀಲಿ ಕಿರಣವೂ ಮತ್ತು ನೇರಳೆ ಬಣ್ಣದ್ದೂ ಮೆದಳಿನೊಳಕ್ಕೆ ಹಾದುಹೋಗುತ್ತವೆ. ಸಾಂದ್ರವಾದ ನೀಲಿಬಣ್ಣದ ಕಿರಣವು ಮೆದಳಿನ ಕೇಂದ್ರ ಮತ್ತು ಕೆಳಭಾಗಗಳಲ್ಲಿ ಪ್ರಸರಿಸುತ್ತದೆ. ನೇರಳೆ ಬಣ್ಣದ ಕಿರಣವು ಮೆದುಳಿನ ಮೇಲ್ಭಾಗವನ್ನು ಪ್ರಚೋದನೆ ಮಾಡಿ ತಲೆಯ ಮೇಲ್ಭಾಗದಲ್ಲಿರುವ ಸಹಸ್ರಾರ ಚಕ್ರದ ದಳಗಳಲ್ಲೆಲ್ಲ ಪ್ರಸರಿಸುತ್ತದೆ.

ಹಳದಿ ಕಿರಣ

2) ಹಳದಿ ಬಣ್ಣದ ಕಿರಣವು ಹೃದಯ ಚಕ್ರಕ್ಕೆ ಹರಿದು ಹೊಗುತ್ತದೆ. ಅಲ್ಲಿ ತನ್ನ ಪ್ರಚೋದನೆ ಕೆಲಸವನ್ನು ಮಾಡಿದ ನಂತರ ಮೆದುಳಿಗೆ ಹತ್ತಿ ಹೋಗುತ್ತದೆ. ಅಲ್ಲಿ ಸಹಾಸ್ರಾರ ಚಕ್ರದ ಕೇಂದ್ರ ಹನ್ನೆರಡು ದಳಗಳನ್ನು ಪ್ರಚೋದನೆ ಮಾಡುತ್ತದೆ.

ಹಸಿರು ಕಿರಣ

3) ಹಸಿರು ಕಿರಣವು ಕಿಬ್ಬೊಟ್ಟೆಯನ್ನೆಲ್ಲಾ ತುಂಬಿ ಹೊಕ್ಕಳ ಚಕ್ರದಲ್ಲಿ ಕೇಂದ್ರ ಮಾಡಿಕೊಂಡು ಪಿತ್ತಕೋಶ, ಮೂತ್ರಜನಕಾಂಗಗಳು, ಕರುಳುಗಳು - ಮತ್ತು ಜೀರ್ಣಾಂಗಗಳನ್ನು ಚೇತನಗೊಳಿಸುತ್ತದೆ.

ಗುಲಾಬಿ ಬಣ್ಣದ ಕಿರಣ

4) ಈ ಗುಲಾಬಿ ಬಣ್ಣದ ಕಿರಣವು ಶರೀರಾದ್ಯಂತವೂ ಪ್ರಸರಿಸಿರುವ ನರಮಂಡಲದ ಮೂಲಕ ಪ್ರಸರಿಸಿ, ನರಗಳನ್ನು ಚೇತನದಿಂದ ಕೆಲಸ ಮಾಡುವಂತೆ ಮಾಡುತ್ತದೆ. ಇದು ಪ್ರತಿ ದೇಹಕ್ಕೂ ತಕ್ಕಂತೆ ವಿಶೇಷ ಲಕ್ಷಣವುಳ್ಳ ಪ್ರಾಣಶಕ್ತಿ. ಬಲಿಷ್ಠರೂ ಆರೋಗ್ಯ ದೃಢಕಾಯರೂ ಆದವರು ನಿಶ್ಶಕ್ತರಾದ ತಮ್ಮ ನೆರೆಯವರಿಗೆ ಇದನ್ನು ಅವರ ದೇಹದೊಳಕ್ಕೆ ಪ್ರಸರಿಸುವಂತೆ ಮಾಡಿ, ಅವರನ್ನು ಬಲಿಷ್ಠರನ್ನಾಗಿ ಮಾಡುತ್ತಾರೆ. ಏಕೆಂದರೆ ಅಂತಹವರು ತಮ್ಮ ದೇಹಕ್ಕೆ ಅಗತ್ಯವಾದಷ್ಟು ಪ್ರಮಾಣಕ್ಕಿಂತ ತುಂಬ ಹೆಚ್ಚಾಗಿ ಪ್ರಾಣಶಕ್ತಿಯನ್ನು ಮೈಗೂಡಿಸಿ-ಕೊಂಡಿರುತ್ತಾರೆ. ಅಂತಹವರ ದೇಹವು ಗುಲಾಬಿ ಬಣ್ಣದ ಅಣುಗಳನ್ನು ಸದಾ ಹೊರಸೂಸುತ್ತಲೇ ಇರುತ್ತದೆ.

ಸ್ಥೂಲದೇಹವು ತನ್ನದೇ ಆದ ಪ್ರಜ್ಞೆಯನ್ನು ಹೊಂದಿರುತ್ತದೆ. ಇದಕ್ಕೆ ಸ್ಥೂಲದೇಹದ ಮೂಲಧಾತುವೆಂದು ಕರೆಯುತ್ತೇವೆ. ಹೀಗೆಯೇ ಕಾಮದೇಹಕ್ಕೂ ತನ್ನದೇ ಆದ ಮೂಲಧಾತುವಿರುತ್ತದೆ. ಈ ಸ್ಥೂಲದೇಹದ ಪ್ರಜ್ಞೆಯು ಸ್ಥೂಲ ದೇಹಕ್ಕೆ ಅಪಾಯ

ಸಂಭವಿಸದಂತೆ ನೋಡಿಕೊಳ್ಳುತ್ತದೆ. ಅಲ್ಲದೆ ಅದಕ್ಕೆ ಅತ್ಯಗತ್ಯವಾದ ಸೌಲಭ್ಯವನ್ನು ಒದಗಿಸುತ್ತದೆ. ಈ ಪ್ರಜ್ಞೆಯು ಮಾನವನ ಪ್ರಜ್ಞೆಗೆ ಭಿನ್ನವಾದುದು-ಇದು ಸ್ಥೂಲದೇಹದ ನಿದ್ರಾವಸ್ಥೆಯಲ್ಲಿ ಇದಕ್ಕೆ ಅಪಾಯವಾಗದಂತೆ ನೋಡಿಕೊಳ್ಳುತ್ತದೆ. ನಮ್ಮ ಸಹಜ ಚರ್ಯೆಗಳೆಲ್ಲ ಅದಕ್ಕೆ ಸಂಬಂಧಪಟ್ಟವು. ನಮ್ಮ ಸಹಾನುಭೂತಿ ನರಮಂಡಲವು ಬಿಡುವಿಲ್ಲದೆ ನಮಗೆ ಗೊತ್ತಿಲ್ಲದಂತೆಯೇ ಶರೀರದ ರಕ್ಷಣೆಯನ್ನು ಕಾದು ನೋಡುತ್ತದೆ.

ನಾವು ಎಚ್ಚೆತ್ತು ಇರುವಾಗ ಈ ಸ್ಥೂಲದೇಹದ ಮೂಲಧಾತುವು ಆತ್ಮ ರಕ್ಷಣೆಯನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತದೆ. ಈ ಬಗ್ಗೆ ಸ್ಥೂಲ ದೇಹದ ನರಮಂಡಲ ಮತ್ತು ಮಾಂಸಖಂಡಗಳನ್ನು ಸದಾ ಜಾಗರೂಕತೆಯಿಂದ ನೋಡಿಕೊಳ್ಳುವಂತೆ ಮಾಡುತ್ತದೆ. ನಿದ್ರೆ ಕಾಲದಲ್ಲಿ ಈ ಮಾಂಸಖಂಡಗಳೂ ನರಮಂಡಲವೂ ಸಡಿಲ ಬಿಡುತ್ತವೆ. ಆಗಲಿದು ಪ್ರಾಣಶಕ್ತಿಯನ್ನು ಆಕರ್ಷಿಸಿ ಸ್ಥೂಲದೇಹವನ್ನು ಪುನಃ ಶಕ್ತಿಯುತವಾಗಿ ಚೇತರಿಸಿಕೊಳ್ಳುವಂತೆ ಮಾಡುತ್ತದೆ. ರಾತ್ರಿಕಾಲದ ಆದಿಯಲ್ಲಿ ಇದು ತುಂಬ ಚಟುವಟಿಕೆಯಿಂದ ಕೆಲಸ ಮಾಡಿ ಪ್ರಾಣಶಕ್ತಿಯನ್ನು ಸಂಗ್ರಹಿಸುತ್ತದೆ-ಏಕೆಂದರೆ ಹಿಂದಿನ ಹಗಲಿನಲ್ಲಿ ಸಂಗ್ರಹಿಸಲ್ಪಟ್ಟ ಪ್ರಾಣಶಕ್ತಿಯ ಮೊತ್ತವು ಆ ಕಾಲದಲ್ಲಿ ಸಾಕಾದಷ್ಟು ಇರುತ್ತದೆ. ಅದು ಬರ ಬರುತ್ತಾ ಮುಂದಿನ ಸೂರ್ಯೋದಯವು ಸಮೀಪಿಸುತ್ತ ಬಂದಂತೆಲ್ಲ ಖರ್ಚಾಗಿ ಹೋಗಿರುತ್ತದೆ. ಆದುದರಿಂದಲೇ ನಾವು ನಿದ್ರೆಯಿಂದ ಎಚ್ಚರಗೊಳ್ಳತಕ್ಕ ಕಾಲದಲ್ಲಿ ಒಂದು ಬಗೆಯ ನಿಶ್ಶಕ್ತಿಯು ಗೋಚರವಾಗುವುದು. ಆದುದರಿಂದ ಮಧ್ಯರಾತ್ರಿಗೆ ಮುಂಚೆ ಮಾಡುವ ಒಂದು ಘಂಟೆ ಕಾಲದ ನಿದ್ರೆಯು ಅದು ಕಳೆದ ಮೇಲೆ ಮಾಡತಕ್ಕ ಎರಡು ಘಂಟೆ ನಿದ್ರೆಗೆ ಸಮ-ಎಂಬ ಗಾದೆಯಿರುವುದು. ನಿದ್ರೆಯ ನಂತರ ನಮಗೆ ದಣಿವು ಕಳೆದುಕೊಂಡು ಚೇತನಗೊಂಡಂತೆ ಭಾಸವಾಗುತ್ತದೆ. ಇದಕ್ಕೆ ಸ್ಥೂಲದೇಹದ ಮೂಲಧಾತು ಚೇತನಗೊಳಿಸತಕ್ಕ ಕೆಲಸವೇ ಕಾರಣ.

ಸ್ಥೂಲದೇಹಕ್ಕೆ ಹೇಗೆ ಆಹಾರವು ಅವಶ್ಯಕವೋ ಹಾಗೆ ಪ್ರಾಣಮಯ ಕೋಶಕ್ಕೆ ಪ್ರಾಣ ಶಕ್ತಿಯೇ ಆಹಾರ. ಅನಾರೋಗ್ಯ ದಣಿವು-ಅಥವ (ಮುಪ್ಪಿನ) ದೌರ್ಬಲ್ಯ ಈ ಮೊದಲಾದ ಕಾರಣಗಳಿಂದ ಗುಲ್ಮಾ ಚಕ್ರವು ಸಾಕಾದಷ್ಟು ಪ್ರಾಣ ಶಕ್ತಿಯನ್ನು ದೇಹಕ್ಕೆ ಒದಗಿಸುವುದಕ್ಕೆ ಆಗದೇ ಇದ್ದಾಗ ಈ ಸ್ಥೂಲದೇಹದ ಮೂಲಧಾತುವು ಪಕ್ಕದಲ್ಲಿರುವ ಆರೋಗ್ಯವಾದ ಶರೀರಗಳಿಂದ ಪ್ರಾಣಶಕ್ತಿಯನ್ನು ಆಕರ್ಷಿಸುತ್ತದೆ. ಹೀಗೆಯೇ ಯಾರಾದರೂ ಒಬ್ಬ ನಿಶ್ಶಕ್ತನು ದೌರ್ಬಲ್ಯ ಸ್ಥಿತಿಯಲ್ಲಿರುವಾಗ ಆತನ ಪಕ್ಕದಲ್ಲಿ ನಾವು ಸ್ವಲ್ಪ ಹೊತ್ತು ಕುಳಿತುಕೊಂಡರೆ ನಮ್ಮ ಪ್ರಾಣಶಕ್ತಿಯು ಅಂತಹ ಮನುಷ್ಯನ ಸ್ಥೂಲದೇಹದ ಮೂಲಧಾತುಗಳಿಂದ ಹೀರಲ್ಪಡುತ್ತದೆ. ಆಗ ನಮಗೆ ಸುಸ್ತಾದಂತೆ ಭಾಸವಾಗುತ್ತದೆ.

ಸಸ್ಯಗಳಿಗೂ ಪ್ರಾಣಶಕ್ತಿಯು ಅವಶ್ಯಕ-ಆದರೆ ಅವು ಅದರ ಸ್ವಲ್ಪ ಭಾಗವನ್ನು ಮಾತ್ರ ವಿನಿಯೋಗ ಮಾಡುತ್ತವೆ. ಕೆಲವು ವೃಕ್ಷಗಳು ಮಾನವನಷ್ಟೇ ಪ್ರಾಣ ಶಕ್ತಿಯನ್ನು ಹೀರುತ್ತವೆ. ಆದರೆ ಅವು ತಮಗೆ ಅವಶ್ಯಕವಾದಷ್ಟು ಪ್ರಾಣಶಕ್ತಿಯನ್ನು ಮೈಗೂಡಿಸಿಕೊಂಡ ನಂತರ ಹೆಚ್ಚಾದ ಗುಲಾಬಿ ಬಣ್ಣದ ಕಣಗಳನ್ನು ಹೊರಕ್ಕೆ ಪ್ರಸರಿಸುತ್ತವೆ. ಆದುದರಿಂದಲೆ ಆಲದ ಮರ, ಅಶ್ವತ್ಥ ವೃಕ್ಷಗಳ ಸಾನ್ನಿಧ್ಯದಲ್ಲಿ ಮಾನವರ ಆರೋಗ್ಯ ಸುಧಾರಣೆ ಹೊಂದುವುದಕ್ಕೆ ಕಾರಣ.

ಕಿತ್ತಲೆ ಬಣ್ಣದ ಕಿರಣ

5) ಈ ಕಿರಣವು ಮೂಲಾಧಾರ ಚಕ್ರಕ್ಕೆ ಹರಿದು ಆ ಮೂಲಕ ಜನನೇಂದ್ರಿಯಗಳಿಗೆ ಪ್ರವಹಿಸುತ್ತದೆ. ಈ ಕಿರಣವು ಕಿತ್ತಲೆ ಬಣ್ಣವನ್ನೇ ಅಲ್ಲದೆ ಸಾಂದ್ರವಾದ ಕೆಂಪು ಬಣ್ಣಗಳನ್ನು ಹೊಂದಿರುತ್ತದೆ.

ಸಾಧಾರಣ ಮನುಷ್ಯನಲ್ಲಿ ಈ ಕಿರಣವು ಕಾಮೋದ್ರೇಕವನ್ನು ಮಾಡುತ್ತದೆ. ಆದರೆ ಅಂತಹವನು ನೀಚ ಸ್ವಾಭಾವಕ್ಕೆ ಒಳಗಾಗದೇ ಇದ್ದರೆ ಈ ಕಿರಣವು ಮೆದುಳಿಗೆ ಹತ್ತಿ ಅದರ ಮೂರು ಭಾಗಗಳೂ ಉನ್ನತ ಮಟ್ಟದಲ್ಲಿ ಪರಿವರ್ತನೆ ಹೊಂದುತ್ತವೆ. ಕಿತ್ತಲೆ ಬಣ್ಣವು ಪರಿಶುದ್ಧವಾದ ಸ್ವರ್ಣವರ್ಣಕ್ಕೆ ಪರಿವರ್ತನೆಗೊಂಡು ವಿಚಾರ ಶಕ್ತಿಯನ್ನು ಬೆಳೆಸುತ್ತದೆ. ಕಪ್ಪು ಮಿಶ್ರ ಕೆಂಪು ಬಣ್ಣವು ಗುಲಾಬಿ ಬಣ್ಣಕ್ಕೆ ತಿರುಗಿ ನಿಸ್ವಾರ್ಥ ಪ್ರೇಮವನ್ನು ಬೆಳೆಸುತ್ತದೆ. ಊದಾ ಕಪ್ಪು ಮಿಶ್ರ ಬಣ್ಣ ದಿವ್ಯವಾದ ತಿಳುವಾದ ನೇರಳೆ ಬಣ್ಣವಾಗಿ ಪರಿವರ್ತನೆ ಹೊಂದಿ ಮಾನವನ ಆಧ್ಯಾತ್ಮಿಕ ಸ್ವಭಾವವನ್ನು ಬೆಳೆಸುತ್ತದೆ. ಯಾರು ಇಂತಹ ಉನ್ನತಮಟ್ಟದ ಪರಿವರ್ತನೆಯನ್ನು ಸಾಧಿಸಬಲ್ಲರೋ ಅಂತಹವರಿಗೆ ನೀಚ ಸ್ವಭಾವದ ಕಾಟ ತಪ್ಪಿ ಹೋಗಿ ಅಂತಹವರು ಆರೋಗ್ಯಾಭ್ಯಾಸದಲ್ಲಿ ಕುಂಡಲಿನಿ ಶಕ್ತಿಯನ್ನು ಉದ್ಬೋಧ ಮಾಡಿಕೊಳ್ಳುವುದಕ್ಕೆ ಸುಲಭ ಸಾಧ್ಯವಾಗುತ್ತದೆ. ಸಾಧಕನು ಮೇಲ್ಕಂಡ ಪರಿವರ್ತನೆಯಲ್ಲಿ ಜಯಪ್ರದವಾದರೆ ಕಿತ್ತಲೆ-ಕೆಂಪು ಬಣ್ಣಗಳ ಕಿರಣವು ಮೂಲಾಧಾರ ಚಕ್ರಕ್ಕೆ ನೇರವಾಗಿ ಇಳಿದು, ಅಲ್ಲಿಂದ ಸುಷುಮ್ನ ನಾಡಿಯ ಮೂಲಕ ಮೆದುಳಿಗೆ ಹತ್ತಿ ಹೋಗುತ್ತದೆ.

ಚಕ್ರದೊಳಕ್ಕೆ ಧುಮುಕುವ ಪ್ರಾಣಶಕ್ತಿಯ ಪ್ರವಾಹಗಳಿಗೂ ಮತ್ತು ಬ್ಲಾವಟ್ಸ್ಕಿಯವರು ಮಾನವನ ಸ್ವರೂಪಕ್ಕೆ ಸಂಬಂಧಪಟ್ಟ ತತ್ವಗಳಿಗೆ ಕೊಟ್ಟಿರುವ ಬಣ್ಣಗಳಿಗೂ ಹೋಲಿಕೆಯಿರುತ್ತದೆ.

Secret Docrtrine Vol V 454 V Adyar Edition

ಪ್ರಾಣ ಶಕ್ತಿಗಳ ಬಣ್ಣಗಳು	ಚಕ್ರಗಳ ಪ್ರವೇಶ	S.D. ಬಣ್ಣ	ಪ್ರತಿನಿಧಿಸುವ ತತ್ವಗಳು
ತೆಳುವಾದ ನೀಲಿ	ಕತ್ತು	ನೀಲಿ	ಆತ್ಮದ ತೇಜಸ್ಸು
ಹಳದಿ	ಹೃದಯ	ಹಳದಿ	ಬುದ್ಧಿ ತತ್ವ
ಕಪ್ಪಾದ ನೀಲಿ	ಭ್ರೂಚಕ್ರ	ಕಪ್ಪಾದ ನೀಲಿ	ಉನ್ನತ ಮನಸ್ಸು
ಹಸುರು	ಹೊಕ್ಕಳು	ಹಸಿರು	ರೂಪ ಮನಸ್ಸು
ಗುಲಾಬಿ	ಗುಲ್ಮ	ಕೆಂಪು	ಕಾಮರೂಪ
ನೇರಳೆ	ತಲೆ	ನೇರಳೆ	ಪ್ರಾಣಮಯ ಕೋಶ
ಕಿತ್ತಲೆ-ಕೆಂಪು (ನೇರಳೆ)	ಮೂಲಾಧಾರ (ನಂತರ ಸಹಸ್ರಾರ)		

ಪಂಚಪ್ರಾಣಗಳು

ಘೇರಂದ ಸಂಹಿತೆಯಲ್ಲಿ ಅವುಗಳ ಸ್ಥಾನಗಳನ್ನು ಈ ಮುಂದೆ ಹೇಳುವಂತೆ ಹಿಂದೂ ಸಂಸ್ಕೃತಿಯಲ್ಲಿ ವಿವರಿಸಿರುತ್ತದೆ;

ಹೃದೇ ಪ್ರಾಣಃ, ಗುಧೇ ಪಾನಂ, ಸಮಾನ ಹೊಕ್ಕುಳದ ಹತ್ತಿರ, **ಉದಾನೇ ಕಂಠ ದೇಶಸ್ಥೋ,** ವ್ಯಾನವು ಶರೀರವನ್ನೆಲ್ಲ ವ್ಯಾಪಿಸಿದೆ.

ವ್ಯಾನವೆಂಬ ಪ್ರಾಣವಾಯು ಎಲ್ಲ ನರಗಳಿಗೂ ಸಾರಭೂತವಾದಂಶವನ್ನು ಪ್ರಸಾರ ಮಾಡುತ್ತದೆ. ಆಹಾರವು ಭುಂಜಿಸಲ್ಪಟ್ಟ ಕೂಡಲೇ ಅದನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸುತ್ತದೆ. ಆಹಾರವು ಗುಧದ ಹತ್ತಿರ ಹೋದ ಕೂಡಲೇ ಘನೀಭೂತವಾದುದು ಮತ್ತು ದ್ರವರೂಪ-ಅಗ್ನಿಯ ಮೇಲೆ ನೀರನ್ನೂ ಘನೀಭೂತವಾದುದನ್ನು ನೀರಿನ ಮೇಲೆ ಪ್ರಾಣವು ಅಗ್ನಿಯ ಕೆಳಕ್ಕೆ ನಿಂತಿರುತ್ತದೆ. ಅದನ್ನು ಉರಿಯುವಂತೆ ಮಾಡುತ್ತದೆ. ಗಾಳಿಯಿಂದ ಉರಿಯಲ್ಪಟ್ಟ ಅಗ್ನಿಯು ತಂದ ಆಹಾರದಲ್ಲಿ ಸಾರಭೂತವಾದ ಅಂಶವನ್ನು ಬಿಸಾಡತಕ್ಕ ನಿಸ್ಸಾರವಾದ ಭಾಗದಿಂದ ಪ್ರತ್ಯೇಕಿಸುತ್ತದೆ. ಆ ನಿಸ್ಸಾರವಾದ ಪದಾರ್ಥಗಳು ಹನ್ನೆರಡು ದ್ವಾರಗಳ ಮೂಲಕ ಹೊರದೂಡಲ್ಪಡುತ್ತದೆ.

ಪಂಚಪ್ರಾಣ ವಾಯುಗಳು

ಪ್ರಾಣವಾಯು ಅದರ ಸ್ಥಾನ	ಪ್ರಾಣಶಕ್ತಿ ಕಿರಣ	ಮುಖ್ಯವಾಗಿ ಪರಿಣಾಮ ಹೊಂದುವ ಚಕ್ರ
ಪ್ರಾಣ-ಹೃದಯ	ಹಳದಿ	ಹೃದಯಚಕ್ರ
ಅಪಾನ-ಗುಧ	ಕಿತ್ತಲೆ-ಕೆಂಪು	ಮೂಲಾಧಾರ
ಸಮಾನ-ಹೊಕ್ಕಳು	ಹಸಿರು	. ಹೊಕ್ಕಳು ಚಕ್ರ
ಉದಾನ-ಕಂಠ	ನೇರಳೆ-ನೀಲಿ	ಕಂಠಚಕ್ರ
ವ್ಯಾನ-ಶರೀರಾದ್ಯಂತ	ಗುಲಾಬಿ	ಗುಲ್ಮಾಚಕ್ರ

ಪ್ರಾಣಶಕ್ತಿ ಮತ್ತು ಆರೋಗ್ಯ

ಪ್ರಾಣಶಕ್ತಿಯು ಈ ವಿವಿಧ ಪ್ರವಾಹಗಳ ಮೂಲಕ ಆರೋಗ್ಯ ಸ್ಥಿತಿಯನ್ನು ರಕ್ಷಿಸುತ್ತದೆ. ಯಾರಾದರೂ ಜೀರ್ಣ ಶಕ್ತಿ ಸರಿಯಾಗಿಲ್ಲದೆ ತೊಂದರೆ ಪಡುತ್ತಿದ್ದರೆ, ಹೊಕ್ಕಳು ಚಕ್ರದಲ್ಲಿ ತಾಂಡವಾಡುವ ಪ್ರಾಣಶಕ್ತಿಯು ಕೆಲಸ ಮಾಡುವುದು ನಿಧಾನ-ಅದರ ಪ್ರಮಾಣ ಕಡಿಮೆ ದರ್ಜೆಯದು ಎಂಬಂಶ ವ್ಯಕ್ತಪಡುತ್ತದೆ. ಹಳದಿ ಶಕ್ತಿಯು ಪೂರ್ಣವಾಗಿದ್ದು ಪ್ರಬಲವಾಗಿ ಕೆಲಸ ಮಾಡುತ್ತಿದ್ದರೆ, ಹೃದಯವು ಪ್ರಬಲವಾಗಿದ್ದು ಸಕ್ರಮವಾಗಿ ಕೆಲಸ ಮಾಡುತ್ತಿರುತ್ತದೆಯೆಂದು ಹೇಳಬೇಕಾಗುತ್ತದೆ. ಆ ಚಕ್ರದ ಮೂಲಕ ಪರಿದಾಡುತ್ತಾ ರಕ್ತದೊಡನೆ ಸೇರಿಕೊಂಡು ದೇಹಾದ್ಯಂತ ಹರಿದಾಡುತ್ತದೆ, ಅಲ್ಲದೆ ಈ ಹಳದಿ ಪ್ರವಾಹವು ಮೆದುಳಿಗೂ ಹತ್ತಿ, ತತ್ವ ಶಾಸ್ತ್ರ ಮತ್ತು ಉನ್ನತಮಟ್ಟದ ವಿಚಾರ ತರಂಗಗಳನ್ನು ಪ್ರಚೋದನೆ ಮಾಡುತ್ತದೆ. ಅಲ್ಲದೆ ತಲೆಯ ಮೇಲಿರುವ ಸಹಸ್ರಾರ ಚಕ್ರದ ಕೇಂದ್ರವಾದ ಹನ್ನೆರಡು ದಳಗಳನ್ನು ಪ್ರಚೋದನೆ ಗೊಳಿಸುತ್ತದೆ.

ಉನ್ನತ ಮಟ್ಟದ ಆಧ್ಯಾತ್ಮಿಕ ವಿಮರ್ಶೆ ಮತ್ತು ಭಾವನೆಗಳು ನೇರಳೆ ಕಿರಣಕ್ಕೆ ಸಂಬಂಧ ಪಟ್ಟವು. ಆದರೆ ಸಾಧಾರಣ ಯೋಚನೆಗಳು ನೀಲಿ ಮತ್ತು ಸ್ವಲ್ಪ ಹಳದಿ ಬಣ್ಣದಿಂದ ಕೂಡಿದ ಕಿರಣಗಳಿಂದ ಪ್ರಚೋದನೆಗೊಳ್ಳುತ್ತವೆ. ಹುಚ್ಚು ಹಿಡಿದವರಿಗೆ ಹಳದಿ ಮತ್ತು ನೀಲಿ ಬಣ್ಣದ ಕಿರಣಗಳ ಪ್ರಭಾವ ಸುತರಾಂ ಇರುವುದಿಲ್ಲ. ಕಂಠಚಕ್ರಕ್ಕೆ ಸಂಬಂಧ ಪಟ್ಟಂತೆ ತೆಳುವಾದ ನೀಲಿ ಬಣ್ಣದ ಕಿರಣದ ಚಟುವಟಿಕೆಯಿದ್ದರೆ, ಅಂತಹವರ ಕಂಠವು ಸ್ಫೂರ್ತಿದಾಯಕವಾದ ಭಾಷಣವನ್ನು ಕೊಡಬಲ್ಲದು. ಶರೀರದ ಯಾವುದಾದರೂ ಭಾಗಕ್ಕೆ ಪ್ರಾಣಶಕ್ತಿಯು ತಗ್ಗಿದರೆ ಆ ಭಾಗವು ದುರ್ಬಲವಾಗುತ್ತದೆ ಅಥವಾ ರೋಗದಿಂದ ನರಳುತ್ತದೆ.

ಯೋಚನೆಗಳೂ ಭಾವನೆಗಳೂ ಪರಿಶುದ್ಧವಾಗಿದ್ದ ಪಕ್ಷದಲ್ಲಿ ಸ್ಥೂಲ ಶರೀರವು ಆ ಪ್ರಭಾವಕ್ಕೆ ಒಳಗಾಗಿ ಪ್ರಾಣಶಕ್ತಿಯನ್ನು ಹೆಚ್ಚಾಗಿ ಅರಗಿಸಿಕೊಳ್ಳುವಂತೆ ಆಗುತ್ತದೆ. ಭಗವಾನ್ ಬುದ್ಧರ ಆದೇಶದಂತೆ ನಿರ್ವಾಣ ಪಡೆಯಬೇಕೆಂಬ ಮಾರ್ಗದಲ್ಲಿ ಪ್ರಪ್ರಥಮ ಹೆಜ್ಜೆಯೇ ಶರೀರದ ದೃಢವಾದ ಆರೋಗ್ಯ ಸ್ಥಿತಿ.

ಪ್ರಾಣಶಕ್ತಿ ಮತ್ತು ಆಕರ್ಷಣಶಕ್ತಿ

ಪ್ರಾಣಶಕ್ತಿಗೂ ಆಕರ್ಷಣ ಶಕ್ತಿಗೂ ಭಿನ್ನತೆಯಿರುತ್ತದೆ. ಆಕರ್ಷಣ (Magnetic) ಶಕ್ತಿಯಿಂದ ನರಮಂಡಲಕ್ಕೆ ಸಂಬಂಧಪಟ್ಟ ದ್ರವವಸ್ತು ಶುಷುಮ್ನ ನಾಡಿಯಲ್ಲಿ ವಿಶೇಷ ಪರಿವರ್ತನೆ ಹೊಂದಿ, ಪ್ರಪ್ರಥಮ ಚೈತನ್ಯ ಶಕ್ತಿಯೊಡನೆಯೂ ಕುಂಡಲಿನಿ ಶಕ್ತಿಯೊಡನೆಯೂ ಮಿಶ್ರವಾಗಿರತಕ್ಕ ರಕ್ತವು ನಾಡಿಗಳಲ್ಲಿ ಹರಿಯುತ್ತಿರುವಂತೆ ನರಮಂಡಲದ ದ್ವಾರ ಮೇಲ್ಕಂಡ ಆಕರ್ಷಣ ಶಕ್ತಿಯು ಅತಿವಾಯು ತತ್ವಕ್ಕೆ ಸಂಬಂಧಪಟ್ಟ ಪ್ರಕೃತಿಯನ್ನು ನರಗಳ ದ್ವಾರ ಪ್ರವಹಿಸುವಂತೆ ಮಾಡುತ್ತದೆ. ಮಾನವನ ಅತಿವಾಯು ತತ್ವದಿಂದ ಮಾಡಲ್ಪಟ್ಟ ಪ್ರಾಣಮಯಕೋಶದ ಪ್ರಕೃತಿ ಭಾಗಗಳು ಬದಲಾವಣೆ ಹೊಂದುತ್ತಲೇ ಇರುತ್ತವೆ. ನಾವು ಹೊರಗಿನಿಂದ ಗಾಳಿ ಆಹಾರಗಳನ್ನು ತೆಗೆದುಕೊಳ್ಳುವಂತೆ, ಅತಿವಾಯು ತತ್ವ ಮಟ್ಟದ ಪ್ರಕೃತಿಯನ್ನೂ ಸಹ ತೆಗೆದುಕೊಳ್ಳುತ್ತೇವೆ. ಈ ಪ್ರಕೃತಿ ತತ್ವವನ್ನು ಪ್ರಾಣಮಯಕೋಶವು ಜೀರ್ಣಿಸಿ ಕೊಳ್ಳುತ್ತದೆ. ಅತಿವಾಯು ಪ್ರಕೃತಿ ತತ್ವವನ್ನು ನಮ್ಮ ಚರ್ಮದ ರಂಧ್ರಗಳ ಮೂಲಕ ಹೊರಕ್ಕೆ ಚಿಮ್ಮುತ್ತಲೇ ಇರುತ್ತೇವೆ. ಇಬ್ಬರು ಸ್ನೇಹಿತರು ಪರಸ್ಪರ ಹತ್ತಿರ ಕುಳಿತಿದ್ದರೆ ಒಬ್ಬನು ಮತ್ತೊಬ್ಬನ ಭೌತಿಕ ಕಣಗಳನ್ನು ತನ್ನ ದೇಹದೊಳಕ್ಕೆ ತೆಗದು ಕೊಳ್ಳುತ್ತಾನೆ.

ಒಬ್ಬನು ಮತ್ತೊಬ್ಬನನ್ನು ವಶೀಕರಣಕ್ಕೆ ತೆಗೆದುಕೊಂಡಾಗ, ವಶೀಕರಣ ಮಾಡಿ ಕೊಳ್ಳುವವನು ತನ್ನ ಆಕರ್ಷಣ ಶಕ್ತಿಯನ್ನು ಆತನೊಳಕ್ಕೆ ತುಂಬುತ್ತಾನೆ. ಆಗ ವಶವಾದ ವ್ಯಕ್ತಿಯ ನರಮಂಡಲದಲ್ಲಿ ವಶೀಕರಣ ಮಾಡತಕ್ಕವನ ಅಕರ್ಷಣ ಶಕ್ತಿಯೇ ಕೆಲಸ ಮಾಡುತ್ತಿರುತ್ತದೆ. ಆಗ ವಶೀಕರಣಕ್ಕೆ ಒಳಗಾದವನ ಮೆದುಳು ವಶೀಕರಣ ಮಾಡಿಕೊಳ್ಳುವವನ ಮೆದುಳು ಶಕ್ತಿಗೆ ಸ್ವಾಧೀನವಾಗುತ್ತದೆ. ಆದುದರಿಂದ ವಶೀಕರಣ ಮಾಡುವವನ ಯೋಚನೆಗಳನ್ನು, ಭಾವನೆಗಳನ್ನು, ವಶವಾದವನ ಮೆದುಳು ಪುನರಾವರ್ತನೆ ಮಾಡುತ್ತದೆ.

ಆರೀತಿ ವಶ ಮಾಡಿಕೊಳ್ಳಲ್ಪಟ್ಟ ಮನುಷ್ಯನ ರೋಗವನ್ನು ವಾಸಿ ಮಾಡುವುದಕ್ಕಾಗಿ ತನ್ನ ಶಕ್ತಿಯನ್ನು ಆತನೊಳಕ್ಕೆ ಸುರಿದಾಗ ತನ್ನ ಪ್ರಾಣಶಕ್ತಿಯೊಡನೆ ತನ್ನ ವ್ಯಕ್ತಿತ್ವಕ್ಕೆ ಸಂಬಂಧ

ಪಟ್ಟ ಶಕ್ತಿ ವಿಶೇಷಗಳನ್ನು ಆತನೊಳಕ್ಕೆ ಕಳುಹಿಸುತ್ತಾನೆ. ಆಗ ವಶೀಕರಣ ಕರ್ತನ ಆರೋಗ್ಯ ಚೆನ್ನಾಗಿದ್ದಾಗ್ಯೂ ಆತನ ನೀತಿ, ಮನಸ್ಸು ಮತ್ತು ಕಾಮದೇಹಕ್ಕೆ ಸಂಬಂಧಪಟ್ಟ ನ್ಯೂನತೆಗಳನ್ನೂ ಸಹ ಆತನೊಳಕ್ಕೆ ಸೇರಿಸುತ್ತಾನೆ.

ಚಕ್ರಗಳ ಮೂಲಕ ಹರಿಯತಕ್ಕ ಶಕ್ತಿ ವಿಶೇಷಗಳನ್ನು ಅರ್ಥಮಾಡಿಕೊಂಡಿರತಕ್ಕವನು ತನ್ನ ಮನಸ್ಸು ಭಾವನೆಗಳು ಪರಿಶುದ್ಧವಾಗಿದ್ದ ಪಕ್ಷದಲ್ಲಿ ಅಂತಹವನು ವಶೀಕರಣದ ಮೂಲಕ ಜನರ ಕಷ್ಟಗಳನ್ನು ಎಷ್ಟೋ ಕಡಿಮೆ ಮಾಡಬಲ್ಲನು. ಅಂತಹವನು ತನ್ನ ವಶವರ್ತಿಯೊಳಕ್ಕೆ ಏನನ್ನು ಕಳುಹಿಸಬಲ್ಲನು? ನರಮಂಡಲದ ಆಕರ್ಷಣ ಶಕ್ತಿ ಮತ್ತು ಪ್ರಾಣಶಕ್ತಿ ಇವುಗಳನ್ನು ಕಳುಹಿಸುತ್ತಾನೆ. ಒಬ್ಬನು ಕೇವಲ ನಿಶ್ಯಕ್ತನಾದವನು ಇರುತ್ತಾನೆ-ಎಂದುಕೊಳ್ಳೋಣ. ಅಂತಹವನು ತನ್ನ ಪ್ರಾಣಶಕ್ತಿಯನ್ನು ತನ್ನದನ್ನಾಗಿ ಮಾಡಿಕೊಳ್ಳಲು ಅಸಮರ್ಥನಾಗಿರುತ್ತಾನೆ. ಆಗ ಮೆಸ್ಮರಿಷ್ಟ್ ತನ್ನ ಶಕ್ತಿ ವಿಶೇಷವನ್ನು ಅತನ ನರಗಳ ಮೇಲೆ ಸುರಿಯುವುದರ ಮೂಲಕ ಆತನಿಗೆ ಶಕ್ತಿ ಬರುವಂತೆ ಮಾಡಬಹುದು. ಜೀರ್ಣಶಕ್ತಿಯನ್ನು ಕಳೆದುಕೊಂಡಿರುವಂತಹವರು ತಾವೇ ಆಹಾರವನ್ನು ಜೀರ್ಣಿಸಿಕೊಂಡು ಶಕ್ತಿ ಪಡೆಯುವುದಕ್ಕೆ ಸಾಧ್ಯವಿಲ್ಲದವರು ಇರುತ್ತಾರೆ-ಅಂತಹವರಿಗೆ ಅರ್ಧಂಬರ್ಧ ಜೀರ್ಣಿಸಲ್ಪಟ್ಟ ಆಹಾರವನ್ನು ಪೆಪ್ಸಿನ್ ಮೂಲಕ ಕೊಟ್ಟರೆ ಅಂತಹರಿಗೆ ಆ ಆಹಾರವು ಜೀರ್ಣಿಸಲ್ಪಟ್ಟು, ಶಕ್ತಿಯೂ ಬರುತ್ತದೆ.

ಅಧ್ಯಾಯ ೪

ಚಕ್ರಗಳ ಬೆಳವಣಿಗೆ

ಎಚ್ಚರಗೊಳ್ಳಲ್ಪಟ್ಟ ಚಕ್ರಗಳ ಕಾರ್ಯಗಳು

ಸ್ಥೂಲದೇಹವನ್ನು ಸಜೀವವಾಗಿಟ್ಟಿರುವುದೇ ಅಲ್ಲದೆ ಈ ಚಕ್ರಗಳಿಗೆ ಮತ್ತೊಂದು ಕೆಲಸವಿದೆ. ಪ್ರಾಣಮಯ ಕೋಶದ ಪ್ರತಿಯೊಂದು ಚಕ್ರಕ್ಕೂ ಕಾಮದೇಹದ ಚಕ್ರಕ್ಕೂ ಸಂಬಂಧವಿರುತ್ತದೆ. ಕಾಮದೇಹದ ಚಕ್ರಕ್ಕೆ ನಾಲಕ್ಕು ಪ್ರಮಾಣಗಳಿರುತ್ತವೆ. ಕಾಮದೇಹದ ಚಕ್ರವು ಅದರೊಳಭಾಗದಲ್ಲಿರುತ್ತದೆ.

ಪ್ರಾಣಮಯಕೋಶದ ಪ್ರತಿಯೊಂದು ಚಕ್ರಕ್ಕೂ ಅದು ಎಚ್ಚರಗೊಂಡ ಮೇಲೆ ಅದಕ್ಕೆ ಸಂಬಂಧಪಟ್ಟ ಕಾಮದೇಹದ ಚಕ್ರದ ಗುಣವನ್ನು ಸ್ಥೂಲ ಪ್ರಜ್ಞೆಗೆ ತರುವುದೇ ಆಗಿದೆ. ಕಾಮದೇಹದ ಚಕ್ರಗಳು ಎಲ್ಲ ಸುಸಂಸ್ಕೃತ ಜನರಲ್ಲೂ ಎಚ್ಚೆತ್ತು ಕೆಲಸ ಮಾಡುವ ಸ್ಥಿತಿಯಲ್ಲಿರುತ್ತವೆ-ಈ ರೀತಿ ಎಚ್ಚರಗೊಂಡಿರತಕ್ಕ ಕಾಮದೇಹದ ಚಕ್ರಗಳು ಕಾಮದೇಹದ ಪ್ರಜ್ಞೆಗೆ ಯಾವ ರೀತಿ ಸಹಾಯ ಮಾಡಿರುತ್ತವೆ?

ಕಾಮದೇಹದ ಚಕ್ರಗಳು

ಮೂಲಧಾರ ಚಕ್ರ ಮೊದಲನೆಯದು. ಕುಂಡಲಿನಿ ಶಕ್ತಿಯು ವಾಸ ಮಾಡತಕ್ಕ ಸ್ಥಾನ. ಈ ಕುಂಡಲಿನಿ ಶಕ್ತಿಯು ಎಲ್ಲ ಪ್ರಜ್ಞೆ ಮಟ್ಟಗಳಲ್ಲೂ ಇರುತ್ತದೆ. ಇದು ಎಚ್ಚೆತ್ತಿದ್ದರೆ, ಆ ಮಟ್ಟದ ಶರೀರದ ಚಕ್ರಗಳನ್ನೆಲ್ಲ ಎಚ್ಚರಗೊಳಿಸಿರುತ್ತದೆ. ಕೇವಲ ಬೆಳೆಯದೆ ಇರುವ ಮಾನವನಲ್ಲಿ ಕಾಮದೇಹವು ಸುಪ್ತಾವಸ್ಥೆಯಲ್ಲಿರುತ್ತದೆ. ಅದಕ್ಕೆ ಸಂಬಂಧಪಟ್ಟ ಕಾಮಲೋಕದ ಪರಿಜ್ಞಾನವು ಸುತರಾಂ ಇರುವುದಿಲ್ಲ. ಕಾಮದೇಹದ ಮೂಲಾಧಾರ ಚಕ್ರವು ಎಚ್ಚರಗೊಂಡ ಕೂಡಲೇ ಅದರಲ್ಲಿ ಅಡಗಿರುವ ಕುಂಡಲಿನಿ ಶಕ್ತಿಯು ಮೇಲಕ್ಕೆದ್ದು ಎರಡನೆಯ ಚಕ್ರವನ್ನು ಎಚ್ಚರಗೊಳ್ಳುವಂತೆ ಮಾಡಿ ಆ ಮೂಲಕ ಮನುಷ್ಯನಿಗೆ ಪ್ರಜ್ಞಾಪೂರ್ವಕವಾಗಿ ಕಾಮದೇಹದಲ್ಲಿ ಕೆಲಸ ಮಾಡುವಂತೆ ಪರಿವರ್ತನೆಗೊಳಿಸುತ್ತದೆ.


ಅನಂತರ ಅದು ಮೂರನೆಯ ಚಕ್ರಕ್ಕೆ ಹತ್ತಿ ಅದನ್ನು ವಿಕಾಸಗೊಳಿಸಿದಾಗ ಪ್ರಜ್ಞೆಯಲ್ಲಿ ವೇದನೆಯನ್ನು ಅರಿತುಕೊಳ್ಳುವಂತೆ ಮಾಡುತ್ತದೆ-ಆದರೆ ಸ್ಪಷ್ಟವಾಗಿ ಇನ್ನೂ ನೋಡತಕ್ಕ ಮತ್ತು ಕೇಳತಕ್ಕ ಶಕ್ತಿಗಳು ಬೆಳೆದಿರುವುದಿಲ್ಲ. ನಾಲಕ್ಕನೆ ಚಕ್ರಕ್ಕೆ ಅದು ಹತ್ತಿ ಅದನ್ನು ವಿಕಾಸಗೊಳಿಸಿದಾಗ ಅಂತಹವನಿಗೆ ಆ ಮಟ್ಟದ ಇತರೆ ಜನರ ಕಷ್ಟ ಸುಖಗಳನ್ನು ತಿಳಿದುಕೊಳ್ಳುವ ಶಕ್ತಿ ಬರುತ್ತದೆ.

ಐದನೆಯ ಚಕ್ರವು ಎಚ್ಚೆತ್ತಾಗ ಸ್ಥೂಲದೇಹದ ಮೂಲಕ ಕೇಳಿ ಬರುವ ಶಬ್ದದಂತೆ ಕಾಮಲೋಕದಲ್ಲಿ ಕಾಮದೇಹದ ಶ್ರವಣೇಂದ್ರಿಯವು ಎಚ್ಚರಗೊಳ್ಳುತ್ತದೆ.

ಆರನೆಯ ಚಕ್ರವು ಎಚ್ಚೆತ್ತಾಗ ಕಾಮಲೋಕದಲ್ಲಿನ ಬಾಹ್ಯ ವಸ್ತುಗಳ ಸ್ವರೂಪವನ್ನು ನೋಡಿ ಅರ್ಥಮಾಡಿಕೊಳ್ಳುವ ತಿಳಿವಳಿಕೆ ಬೆಳೆಯುತ್ತದೆ.

ಕಾಮದೇಹದ ತಲೆಯ ಮೇಲಿರುವ ಸಹಸ್ರಾರ ಚಕ್ರವು ಎಚ್ಚೆತ್ತಾಗ ಕಾಮದೇಹವು ಆ ಲೋಕದಲ್ಲಿ ಪ್ರಜ್ಞಾವತ್ತಾಗಿ ಕೆಲಸ ಮಾಡತಕ್ಕ ಉಪಕರಣವಾಗುತ್ತದೆ.

ಈ ಸಹಸ್ರಾರ ಚಕ್ರವು ಎಚ್ಚರಗೊಂಡರೆ ಆ ವ್ಯಕ್ತಿಯ ಸ್ವಭಾವಕ್ಕನುಗುಣವಾಗಿ ಸ್ವಲ್ಪ ಭಿನ್ನತೆ ಏರ್ಪಡುತ್ತದೆ. ನಮ್ಮಲ್ಲನೇಕರಿಗೆ ಭ್ರೂಮಧ್ಯ ಚಕ್ರ ಮತ್ತು ಸಹಸ್ರಾರ ಚಕ್ರಗಳು ತಲೆಯಲ್ಲಿರುವ ಪಿಟ್ಯುಟರಿ ಅಂಗಕ್ಕೆ ಸಂಬಂಧಪಟ್ಟವಾಗಿರುತ್ತವೆ. ಅಂತಹವರಿಗೆ ಆ ಅಂಗ ಮಾತ್ರ ಎಚ್ಚೆತ್ತು ಸ್ಥೂಲ ಪ್ರಜ್ಞೆಗೂ ಮೇಲಿನ ಲೋಕಗಳ ಪ್ರಜ್ಞೆ ಅಂತಸ್ತುಗಳಿಗೂ ಸಂಬಂಧ ಪಟ್ಟ ಉಪಕರಣವಾಗಿರುತ್ತದೆ. ಮತ್ತೊಂದು ಪ್ರಕೃತಿ ಸ್ವಭಾವದ ಜನರು ತಮ್ಮ ಭ್ರೂಮಧ್ಯ ಚಕ್ರವನ್ನು ಪಿಟ್ಯುಟರಿ ಅಂಗಕ್ಕೆ ಸಂಬಂಧಪಟ್ಟಂತೆ ಜಂಟಿಸಿದ್ದಾಗ್ಯೂ ಅದರ ಏಳನೆಯ ಚಕ್ರವನ್ನು ಪೀನಿಯಲ್ ಗ್ರಂಥಿಗೆ ಜಂಟಿಸಿರುತ್ತದೆ. ಇಂತಹವರಲ್ಲಿ ಪೀನಿಯಲ್ ಗ್ಲಾಂಡಿಗೂ ಅವರ ರೂಪ ಮನಸ್ಸಿಗೂ ನೇರವಾದ ಸಂಬಂಧವಿರುತ್ತದೆ. ಕಾಮದೇಹದ ಮೂಲಕ ಆ ಸಂಬಂಧವನ್ನು ಪಡೆಯಲೇ ಬೇಕಾದ್ದಿರುವುದಿಲ್ಲ. ಅನಿಬೆಸೆಂಟರು ಪ್ರಜ್ಞೆಯ ಅಧ್ಯಯನ ಗ್ರಂಥದಲ್ಲಿ ಮಾನವರ ಪ್ರಕೃತಿ ಸ್ವಭಾವಗಳು ಭಿನ್ನವಾಗಿರುತ್ತವೆ. ಆಯಾ ಪ್ರಕೃತಿ ಸ್ವಭಾವಕ್ಕನುಗುಣವಾಗಿ ಯಾವ ದೇಹದಿಂದಾದಾಗ್ಯೂ ಚಕ್ರಗಳನ್ನು ಉದ್ಬೋಧಗೊಳಿಸತಕ್ಕ ಪ್ರಯತ್ನ ನಡೆಯಬಹುದು. ಈ ಚಟುವಟಿಕೆ ಕೇಂದ್ರವು ಸ್ಥೂಲ-ಕಾಮ-ರೂಪದೇಹ, ಕಾರಣ ದೇಹವಾಗಿರಬಹುದು. ಈ ಕೇಂದ್ರವು ಯಾವ ದೇಹದಲ್ಲಿರುತ್ತದೆಯೋ ಅದು ಆತನ ಪ್ರಕೃತಿ ಸ್ವಭಾವಕ್ಕೆ ಹೊಂದಿಕೊಳ್ಳುವಂಥದು. ಅಲ್ಲಿಂದ ಮೇಲಕ್ಕಾಗಲೀ ಕೆಳಕ್ಕಾಗಲೀ ಚಟುವಟಿಕೆ ಪ್ರಾರಂಭವಾಗಿ ಆಯಾ ಶರೀರಗಳನ್ನು ಪ್ರಜ್ಞೆಗೆ ಸಾಧನಗಳನ್ನಾಗಿ ಮಾಡಿಕೊಳ್ಳಬಹುದು.


ಪಿಟ್ಯುಟರಿ ಗ್ರಂಥಿ
ಮಹಾ ಶಿರ
ಬೆನ್ನುಮೂಳೆ
ಪೀನಿಯಲ್ ಗ್ರಂಥಿ
ಬೆನ್ನುಮೂಳೆ

ಕಾಮದೇಹದ ಇಂದ್ರಿಯಗಳು

ಈ ಕೇಂದ್ರಗಳು ಕಾಮದೇಹದಲ್ಲಿ ಆ ಮಟ್ಟದ ಇಂದ್ರಿಯಗಳಂತೆ ಕೆಲಸ ಮಾಡುತ್ತವೆ. ಸ್ಥೂಲದೇಹದ ಕಣ್ಣು ಮತ್ತು ಕಿವಿಗಳಿಂದ ಸ್ಥೂಲಲೋಕದ ವಸ್ತುಗಳನ್ನು ನೋಡುವಂತೆ ಸ್ಥೂಲ ಶಬ್ದಗಳನ್ನು ಕೇಳುವಂತೆ ಕಾಮಲೋಕದಲ್ಲಿ ಕೆಲಸ ಮಾಡುವಾಗ ಆ ಲೋಕದ ವಸ್ತುಗಳನ್ನು ನೋಡಬೇಕು ಆ ಲೋಕದ ಶಬ್ದಗಳನ್ನು ಕೇಳುವಂತೆ ಆಗಬೇಕು. ಆದರೆ ಕಾಮದೇಹದಲ್ಲಿ ಸ್ಥೂಲದೇಹದಲ್ಲಿರುವಂತೆ ಕಣ್ಣು ಮತ್ತು ಕಿವಿಗಳು ಪ್ರತ್ಯೇಕವಾಗಿಲ್ಲ. ಕಾಮದೇಹದಲ್ಲಿ ಸ್ಥೂಲದೇಹದಲ್ಲಿರುವಂತೆ ವಿಶೇಷ ಜ್ಞಾನೇಂದ್ರಿಯಗಳಿರುವುದಿಲ್ಲ. ಕಾಮದೇಹದ ಮೇಲೆಲ್ಲ ಜ್ಞಾನೇಂದ್ರಿಯಗಳ ಅರಿವು ಪ್ರಸರಿಸಿರುತ್ತದೆ. ಆದುದರಿಂದ ಕಾಮದೇಹದಲ್ಲಿ ಕೆಲಸ ಮಾಡುತ್ತಿರುವವನ ಹಿಂದೆಯೂ ಮುಂದೆಯೂ ಮೇಲೆಯೂ ಎಲ್ಲ ಕಡೆಯಿಂದಲೂ ನೋಡಬಹುದು, ಕೇಳಬಹುದು. ಆತನ ತಲೆಯನ್ನು ತಿರುಗಿಸಬೇಕಾಗಿಲ್ಲ. ಆದರೆ ಕಾಮದೇಹದ ಚಕ್ರಗಳು ಚುರುಕಾಗಿ ಕೆಲಸ ಮಾಡುವ ಸ್ಥಿತಿಯಲ್ಲಿದ್ದ ಪಕ್ಷದಲ್ಲಿ ಅಂತಹವನಿಗೆ ಕಾಮದೇಹದಲ್ಲಿ ಪ್ರಜ್ಞಾವತ್ತಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಕಾಮದೇಹಕ್ಕೆ ಸಂಬಂಧಪಟ್ಟ ಕಣಗಳು ಸತತವಾಗಿ ಚಲಿಸುತ್ತಿರುತ್ತವೆ. ನೀರು ಕುದಿಯುತ್ತಿರುವಾಗ ಚಲಿಸುತ್ತಿರುತ್ತದೆ. ನೀರು ಕುದಿಯುತ್ತಿರುವಾಗ ಪ್ರತಿಯೊಂದು ಹನಿಯೂ ಸರ್ವ ವ್ಯಾಪಕವಾಗಿ ಚಲಿಸುವಂತೆ ಕಾಮದೇಹದ ಎಚ್ಚೆತ್ತ ಚಕ್ರಗಳ ಮೂಲಕ ಕಾಮದೇಹ ಕಣಗಳು ಹಾದು ಹೋಗುತ್ತವೆ. ಆಗ ಕಾಮದೇಹಕ್ಕೆ ಸಂಬಂಧಪಟ್ಟ ಪ್ರತಿಯೊಂದು ಕಣಕ್ಕೂ ಇಂದ್ರಿಯ ಜ್ಞಾನ ಲಭ್ಯವಾಗುತ್ತದೆ. ಈ ರೀತಿ ಕಾಮದೇಹದ ಜ್ಞಾನೇಂದ್ರಿಯಗಳು ಪೂರ್ತಿ ಎಚ್ಚೆತ್ತು ಕೆಲಸ ಮಾಡುತ್ತಿದ್ದಾಗ್ಗೂ ಅಂತಹ ಮನುಷ್ಯನಿಗೆ ಆ ಮಟ್ಟದ ಪ್ರಜ್ಞೆಯನ್ನು ಸ್ಥೂಲ ಮೆದುಳಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ.

ಕುಂಡಲಿನಿಯನ್ನು ಎಬ್ಬಿಸುವುದು

ಮಾನವನಿಗೆ ತನ್ನ ಕಾಮಲೋಕದ ಮಟ್ಟದಲ್ಲಿ ಪ್ರಜ್ಞೆ ವಿಕಾಸವಾದಾಗ್ಗೂ ಸ್ಥೂಲ ಪ್ರಜ್ಞೆ ಮಟ್ಟದಲ್ಲಿ ಅದರ ವಿಷಯವು ಸುತರಾಂ ಗೊತ್ತಿರುವುದಿಲ್ಲ. ಆ ರೀತಿ ಮೇಲ್ಮಟ್ಟದ ಪ್ರಜ್ಞೆ ಮೆದುಳಿಗೆ ಇಳಿಯಬೇಕಾಗಿದ್ದ ಪಕ್ಷದಲ್ಲಿ ಪ್ರಾಣಮಯ ಕೋಶದ ಚಕ್ರಗಳೂ ಸಹ ಎಚ್ಚೆತ್ತು ಕೆಲಸ ಮಾಡುವಂತೆ ಆಗಬೇಕು. ಆ ರೀತಿ ಚಕ್ರಗಳು ಉದ್ಬೋಧವಾಗಬೇಕಾದರೆ ಸಂಬಂಧ ಪಟ್ಟವನು ಅನುಷ್ಠಾನ ಮಾಡತಕ್ಕ ಯೋಗಭ್ಯಾಸ ಕ್ರಮವನ್ನು ಅವಲಂಬಿಸುತ್ತದೆ.

ಹಿಂದೂ ದೇಶದಲ್ಲಿ ಏಳು ಯೋಗ ಪಂಥಗಳಿರುತ್ತವೆ. 1) ರಾಜಯೋಗ 2)ಕರ್ಮಯೋಗ 3) ಜ್ಞಾನಯೋಗ 4) ಹಠಯೋಗ 5) ಲಯಯೋಗ 6) ಭಕ್ತಿಯೋಗ 7) ಮಂತ್ರಯೋಗ - ಇವೆಲ್ಲ ಯೋಗಗಳೂ ಚಕ್ರಗಳ ಬೆಳವಣಿಗೆ ಮುಖ್ಯಾಂಶವನ್ನು ಮನ

ಗೊಂಡಿರುತ್ತದೆ. ರಾಜಯೋಗವು ಧ್ಯಾನ ಕ್ರಮವನ್ನು ಅನುಸರಿಸುತ್ತದೆ. ಅವುಗಳಿಗೆ ಮುಖ್ಯ ಗಮನವನ್ನು ಕೊಡತಕ್ಕದ್ದು ಲಯಯೋಗ. ಅದರ ಕ್ರಮವು ಕುಂಡಲಿನಿ ಶಕ್ತಿಯ ಉನ್ನತ ಮಟ್ಟದ ಶಕ್ತಿಗಳನ್ನು ಉದ್ಬೋಧ ಮಾಡಿ, ಚಕ್ರಗಳನ್ನು ಕ್ರಮವಾಗಿ ಹತ್ತುವಂತೆ ಮಾಡುವುದೇ ಆಗಿದೆ.

ಈ ರೀತಿ ಕುಂಡಲಿನಿ ಶಕ್ತಿಯನ್ನು ಎಬ್ಬಿಸುವುದಕ್ಕೆ ಬಹುಕಾಲ ಮುಂದುವರಿಯತಕ್ಕ ಇಚ್ಛಾಶಕ್ತಿಯ ದೃಢ ಪ್ರಯತ್ನ ಅಗತ್ಯವಾಗುತ್ತದೆ. ಪ್ರಪ್ರಥಮ ಚಕ್ರವನ್ನು ಪೂರ್ತಿ ಎಚ್ಚರಗೊಳಿಸಬೇಕಾದರೆ ಅದರಲ್ಲಿ ಪದರ ಪದರವಾಗಿ ಮಲಗಿರುವ ಕುಂಡಲಿನಿ ಶಕ್ತಿಯನ್ನು ಉದ್ಬೋಧ ಮಾಡಬೇಕಾಗುತ್ತದೆ. ಅದನ್ನು ಎಚ್ಚರಗೊಳಿಸಿದರೆ ಅದರ ಅದ್ಭುತವಾದ ಶಕ್ತಿ ವಿಶೇಷದಿಂದ ಇತರೆ ಚಕ್ರಗಳೂ ಸಹ ಎಚ್ಚರಗೊಳ್ಳುತ್ತವೆ. ಕಾಮದೇಹದ ಚಕ್ರಗಳು ಉದ್ಬೋಧವಾಗಿ ಪಡೆದಿರುವ ಶಕ್ತಿ ವಿಶೇಷಗಳನ್ನು ಸ್ಥೂಲ ಪ್ರಜ್ಞೆಗೆ ತರುವದೇ ಪ್ರಾಣಮಯ ಕೋಶದ ಚಕ್ರಗಳನ್ನು ಎಚ್ಚರಗೊಳಿಸುವ ಮುಖ್ಯೋದ್ದೇಶವು.

ಪ್ರಾಣಮಯ ಕೋಶದ ಚಕ್ರಗಳನ್ನು ಎಬ್ಬಿಸುವಿಕೆ.

ಗುಲ್ಮ ಚಕ್ರವನ್ನು ಎಚ್ಚರಗೊಳಿಸಿದಾಗ ಸಾಧಕನಿಗೆ ಕಾಮದೇಹದಲ್ಲಿ ಮಾಡಿದ ಪ್ರಯಾಣಗಳನ್ನು ಮಸಕು ಮಸಕಾಗಿ ಸ್ಥೂಲ ಪ್ರಜ್ಞೆಯಲ್ಲಿ ಜ್ಞಾಪಿಸಿಕೊಳ್ಳಬಲ್ಲನು. ಈ ಚಕ್ರವು ಅರ್ಧಂಬರ್ಧ ಎಚ್ಚೆತ್ತಿದ್ದರೆ ಅಕಾಶದಲ್ಲಿ ಹಾರಿ ಹೋದಂತೆ ಮಾತ್ರ ನೆನಸಿಕೊಳ್ಳಬಲ್ಲನು.

ಮೂರನೆಯ ಚಕ್ರ ಹೊಕ್ಕುಳದ್ದು. ಇದು ಎಚ್ಚೆತ್ತಾಗ ಸಾಧಕನು ತನ್ನ ಸ್ಥೂಲ ಪ್ರಜ್ಞೆ ಮಟ್ಟದಲ್ಲಿ ಕಾಮಲೋಕದ ಪ್ರಯಾಣಗಳನ್ನೆಲ್ಲ ಮಸಕು ಮಸಕಾಗಿ ಜ್ಞಾಪಿಸಿಕೊಳ್ಳುಬಲ್ಲನು. ಅವುಗಳು ಹೇಗೆ ಕೆಲವು ಪ್ರಿಯವಾಗಿದ್ದವು ಮತ್ತೆ ಕೆಲವು ಅಪ್ರಿಯವಾಗಿದ್ದುವು ಎಂಬ ನೆನಪು ಸ್ಥೂಲ ಮೆದುಳಿಗೆ ಬಂದಾಗ್ಯೂ ಅವುಗಳಿಗೆ ಕಾರಣಗಳನ್ನು ಪತ್ತೆ ಹಚ್ಚಲಾರದ ಸ್ಥಿತಿಯಲ್ಲಿರುತ್ತಾನೆ.

ನಾಲಕ್ಕನೆಯದಾದ ಹೃದಯ ಚಕ್ರವನ್ನು ಎಚ್ಚರಗೊಳಿಸಿದಾಗ ಅಂತಹ ಸಾಧಕನಿಗೆ ಇತರರ ದುಃಖಗಳನ್ನು ತಿಳಿಯುವಂತೆ ಆಗುತ್ತಾನೆ. ಆತನ ಸಹಾನುಭೂತಿಯು ಎಷ್ಟರಮಟ್ಟಿಗೆ ಒತ್ತಾದುದು ಎಂದರೆ ನೋವು ಬೇನೆಗಳನ್ನು ತಾನೂ ಸಹ ಅನುಭವಿಸುವಷ್ಟರಮಟ್ಟಿಗೆ ಆಗುತ್ತಾನೆ.

ಐದನೆಯ ಚಕ್ರ ಕತ್ತಿನ ಮಟ್ಟದಲ್ಲಿರುವುದು. ಇದು ಎಚ್ಚರಗೊಂಡರೆ ಇತರರ ಧ್ವನಿಗಳು ಕೇಳಿ ಬರುತ್ತವೆ- ಅಲ್ಲದೆ ಸಂಗೀತವನ್ನು ಕೇಳಬಲ್ಲನು. ಕೆಲವು ಸಂದರ್ಭಗಳಲ್ಲಿ ಅಪ್ರಿಯವಾದ ಶಬ್ದಗಳನ್ನು ಕೇಳಬಲ್ಲವನಾಗುತ್ತಾನೆ.

ಭ್ರೂಮಧ್ಯೆ ಚಕ್ರವು ಎಚ್ಚರಗೊಂಡರೆ ಅನೇಕ ವಿಧ ವಿಧವಾದ ನೋಟಗಳು ಜನರನ್ನೂ ಸ್ಥಳಗಳನ್ನೂ ನೋಡಿದಂತೆ ಜ್ಞಾಪಿಸಿಕೊಳ್ಳುತ್ತಾನೆ. ಈ ಚಕ್ರವು ಪೂರ್ತ ಎಚ್ಚೆತ್ತು ಕೆಲಸ ಮಾಡುವ ಸ್ಥಿತಿಗೆ ಬಂದರೆ ದಿವ್ಯ ದೃಷ್ಟಿಯು ಲಭ್ಯವಾಗುತ್ತದೆ.

ಭ್ರೂಮದ್ಯ ಚಕ್ರವು ದೃಷ್ಟಿಗೆ ಸಂಬಂಧಪಟ್ಟಂತೆ ಮತ್ತೊಂದು ಸೌಲಭ್ಯವನ್ನು ಒದಗಿಸುತ್ತದೆ. ಸ್ಥೂಲ ವಸ್ತುಗಳು ಕೇವಲ ಸಣ್ಣವು ಆಗಿರುವಂತಹವು. ದೃಷ್ಟಿಗೆ ಗೋಚರವಾಗತಕ್ಕಷ್ಟು ಬೆಳೆಯುವಂತೆ ಮಾಡುತ್ತದೆ. ಈ ದಿವ್ಯ ದೃಷ್ಟಿಗೆ ಸಂಬಂಧಪಟ್ಟ ಕಣ್ಣು ಸಂದರ್ಭಕ್ಕನುಗುಣವಾಗಿ ದೊಡ್ಡದೂ ಚಿಕ್ಕದೂ ಆಗುವ ಸೌಲಭ್ಯವನ್ನು ಪಡೆಯುತ್ತದೆ. ಇದನ್ನು ಹಿಂದೂ ಪುರಾತನ ಗ್ರಂಥಗಳಲ್ಲಿ ಸಾಧಕರು ಸಂದರ್ಭಕ್ಕನುಗುಣವಾಗಿ ದೊಡ್ಡದಾಗಿ ಬೆಳೆಯಬಲ್ಲರು ಅಥವಾ ಚಿಕ್ಕದಾಗಿ ಸಂಕುಚಿಸಬಲ್ಲರು ಎಂದು ಹೇಳಿರುತ್ತಾರೆ. ಒಂದು ಅಣುವನ್ನು ನೋಡಬೇಕಾದ ಸಂದರ್ಭದಲ್ಲಿ ತನ್ನ ದಿವ್ಯ ದೃಷ್ಟಿಯನ್ನು ಅದರಷ್ಟೇ ಸೂಕ್ಷ್ಮ ಸ್ಥಿತಿಗೆ ತರಬಲ್ಲನು. ಅಂತಹ ದಿವ್ಯ ದೃಷ್ಟಿಯನ್ನು ಪಡೆದವನಿಗೆ ಭ್ರೂಮಧ್ಯ ಚಕ್ರದಿಂದ ಒಂದು ಸಣ್ಣ ಹಾವಿನಂತಹ ರೂಪವು ಅತಿವಾಯು ತತ್ವದಿಂದ ಮಾಡಲ್ಪಟ್ಟು, ಅದರ ಕೊನೆಯಲ್ಲಿ ಒಂದು ಕಣ್ಣಿದ್ದಂತೆ ಇರುವ ಅಂಗವು ಹೊರ ಹೊಮ್ಮಿರುತ್ತದೆ. ಈಜಿಪ್ಟ್ ದೇಶದ ರಾಜನ ಕೀರಿಟದಲ್ಲಿ ಅಂತಹ ಸಂಕೇತವು ಇರುತ್ತಿದ್ದ ಪದ್ಧತಿಯಿತ್ತು. ಏಕೆಂದರೆ ಈಜಿಪ್ಟ್ ದೇಶದ ರಾಜನೇ ಮುಖ್ಯ ಪುರೋಹಿತನಾಗಿ ಕೆಲಸ ಮಾಡುತ್ತಿದ್ದನು.

ಏಳನೆಯ ಚಕ್ರವು ಎಚ್ಚರಗೊಂಡರೆ ಸಾಧಕನು ಪ್ರಜ್ಞಾವತ್ತಾಗಿ ಸ್ಥೂಲದೇಹವನ್ನು ವಿಸರ್ಜಿಸಿ, ಮೇಲಿನ ಲೋಕದಲ್ಲಿ ಕೆಲಸ ಮಾಡಿದ ನಂತರ ಪುನಃ ಸ್ಥೂಲದೇಹಕ್ಕೆ ಹಿಂತಿರುಗಿದ ಮೇಲೂ ಕೂಡ ಮೇಲಿನ ಲೋಕದಲ್ಲಿನ ಅನುಭವಗಳನ್ನೆಲ್ಲ ಸ್ಥೂಲ ಪ್ರಜ್ಞೆಗೆ ತರಬಲ್ಲ ನೈಪುಣ್ಯತೆಯನ್ನು ಪಡೆಯುತ್ತಾನೆ. ಅಂತಹ ಅಂತಸ್ತಿನಲ್ಲಿ ನಿದ್ರೆ-ಸಾವು ಇವುಗಳಿಗೆ ಸಂಬಂಧಪಟ್ಟ ಮರೆವು ಪೂರ್ತ ಕಳಚಿ ಬೀಳುತ್ತದೆ. ಪ್ರಜ್ಞೆಯು ಒಂದೇ ಸಮಾನಾಗಿ ಮುಂದುವರಿದುಕೊಂಡು ಹೋಗುತ್ತದೆ.

ಆಗಂತುಕ ದಿವ್ಯದೃಷ್ಟಿ

ಮೇಲ್ಕಂಡಂತೆ ಪರಿಪಕ್ವ ಸ್ಥಿತಿಯು ಪ್ರಾಪ್ತವಾಗುವ ಮುನ್ನ ಸಾಧಕರಿಗೆ ಆಗಾಗ್ಗೆ ಕಾಮಲೋಕಕ್ಕೆ ಸಂಬಂಧಪಟ್ಟ ದೃಶ್ಯಗಳು ಗೋಚರವಾಗಬಹುದು. ಆ ಸ್ಥಿತಿಯಲ್ಲಿ ಕುಂಡಲಿನಿ ಶಕ್ತಿಯು ಅನೇಕ ಪದರಗಳಲ್ಲಿ ಮಂಡಿಸಿರುತ್ತದೆ- ಆದು ಎಚ್ಚರವಾಗಿರುವುದಿಲ್ಲ.

ಅದು ಸ್ವಲ್ಪ ಮಟ್ಟಿಗೆ ಎಚ್ಚೆತ್ತಿದರೆ ಆಗಿಂದಾಗ್ಗೆ ದಿವ್ಯದೃಷ್ಟಿ ಹೊಳಪು ಸಂಭವಿಸಬಹುದು. ಕುಂಡಲಿನಿ ಶಕ್ತಿಯು ಏಳು ಪದರಗಳಲ್ಲಿ ಮಂಡಿಸಿರುತ್ತದೆ. ಪ್ರಪ್ರಥಮ ಪ್ರಯತ್ನಗಳಲ್ಲಿ ಅದರ ಒಂದು ಪದರ ಮಾತ್ರ ಎಚ್ಚರಗೊಂಡಿರಲು ಸಾಧ್ಯ. ಆತನು ಪದೇ ಪದೇ ಪ್ರಯತ್ನಪಟ್ಟು, ಅದರ ಆಳವಾದ ಪದರಗಳನ್ನೆಲ್ಲ ಎಚ್ಚರಗೊಳ್ಳುವಂತೆ ಮಾಡಬೇಕಾಗುತ್ತದೆ.

ಕಾಲಕ್ಕೆ ಮುಂಚೆ ಎಚ್ಚರಗೊಂಡರೆ ಅಪಾಯದ ಸಂಭವ

ಬೆಂಕಿಯಂತೆ ಉರಿಯುವ ಶಕ್ತಿಯು ದ್ರವರೂಪದಲ್ಲಿರುತ್ತದೆ. ಇಚ್ಛಾಶಕ್ತಿಯಿಂದ ಅದನ್ನು ಎಚ್ಚರಗೊಳಿಸಿದಾಗ ಅದು ಮೆಲ್ಕಂಡ ದ್ರವರೂಪದ ಅಗ್ನಿಯಂತೆ ಮೈಯನ್ನೆಲ್ಲ ವ್ಯಾಪಿಸಿ ಹರಿಯುತ್ತದೆ. ಅದು ಹಾವಿನಂತೆ ಸುತ್ತು ಸುತ್ತಿ ಕೊಂಡು ಮೇಲಕ್ಕೆ ಹರಿಯುತ್ತದೆ. ಅದು ಎಚ್ಚೆತ್ತ ಸ್ಥಿತಿಯಲ್ಲಿ ಜಗದಾಂಬ ಎಂದು ಕರೆಯಲ್ಪಡುತ್ತದೆ. ಅದರ ಪ್ರಭಾವದಿಂದ ನಮ್ಮ ಉನ್ನತ ಮಟ್ಟದ ಕೋಶಗಳಲ್ಲಿ ಎಚ್ಚೆತ್ತು ಪ್ರಜ್ಞಾವತ್ತಾಗಿ ಕೆಲಸ ಮಾಡತಕ್ಕ ಸ್ಥಿತಿಗೆ ಬರುತ್ತೇವೆ.

ಸಾಧಾರಣ ಮಾನವರಲ್ಲಿ ಅದು ಮೂಲಧಾರ ಚಕ್ರದಲ್ಲಿ ಸುಪ್ತಾವಸ್ಥೆಯಲ್ಲಿ ಮಲಗಿರುತ್ತದೆ. ಅಂತಹ ಶಕ್ತಿ ಅಲ್ಲಿದೆಯೆಂಬಂಶವೂ ಆತನಿಗೆ ತಿಳಿಯದು. ಆ ರೀತಿ ಅದು ಸುಪ್ತಾವಸ್ಥೆಯಲ್ಲಿರುವುದೇ ಕ್ಷೇಮಕರ. ಮಾನವನು ಉನ್ನತ ಮಟ್ಟದ ನೀತಿ ಸಂಪನ್ನನಾಗಿ ಆತನ ಇಚ್ಛಾಶಕ್ತಿಯು ತುಂಬ ದೃಢವಾಗಿ ಬೆಳೆದು ಎಂತಹ ಕಷ್ಟಗಳನ್ನಾದರೂ ಸಹಿಸುವಷ್ಟರ ಮಟ್ಟಿಗೆ ಪ್ರಬಲವಾದ್ದಾಗಿರಬೇಕು. ಆತನ ಮನಸ್ಸು ತುಂಬ ಪರಿಶುದ್ಧವಾಗಿರಬೇಕು. ಯಾರೂ ಕೂಡ ಒಬ್ಬ ಜೀವನ್ಮುಕ್ತ ಮಹಾತ್ಮನ ಮಾರ್ಗದರ್ಶನವಿಲ್ಲದೆ ಅದನ್ನು ಉತ್ಥಾಪನೆ ಮಾಡುವುದಕ್ಕೆ ಪ್ರಯತ್ನಿಸಕೂಡದು. ಏಕೆಂದರೆ ಅದರ ಉತ್ಥಾಪನೆಯು ತುಂಬ ಅಪಾಯದಿಂದ ಕೂಡಿರುತ್ತದೆ. ಅನೇಕ ಬೇನೆಗಳಿಗೆ ಗುರಿ ಮಾಡುವುದಲ್ಲದೆ ಕೆಲವು ಸಂದರ್ಭಗಳಲ್ಲಿ ಪ್ರಾಣಾಪಾಯವೇ ಸಂಭವಿಸಬಹುದು. ಸ್ಥೂಲದೇಹವು ಸತ್ತು ಹೋದಾಗ್ಗೂ ಅಷ್ಟೇನೂ ನಷ್ಟವಿಲ್ಲ. ಉನ್ನತಮಟ್ಟದ ಲೋಕಗಳಿಗೆ ಸಂಬಂಧಪಟ್ಟ ಕೋಶಗಳಿಗೂ ಕೂಡ ಸತತವಾಗಿ ಅಪಾಯ ಸಂಭವಿಸುವುದೂ ಉಂಟು.

ಅದನ್ನು ಕಾಲಕ್ಕೆ ಮುಂಚೆ ಎಚ್ಚರಗೊಳಿಸಿದರೆ ಅದು ಕೆಳಮುಖವಾಗಿ ಪ್ರವಹಿಸಿ ಕಾಮೋದ್ವೇಗವನ್ನುಂಟುಮಾಡುತ್ತದೆ. ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದಷ್ಟು ಮಾನವನು ದುರ್ಬಲನಾಗಿ ಅಪಾಯಕ್ಕೆ ಸಿಕ್ಕಿ ಕೊಳ್ಳುತ್ತಾನೆ. ಅಲ್ಲದೆ ಕೆಲವು ಕೆಳಮಟ್ಟದ ವಾಯುಮಾರ್ಗದ ಶಕ್ತಿ ವಿಶೇಷಗಳಿಗೆ ಪಕ್ಕಾಗಿ ಅನೇಕ ಜನ್ಮಗಳು ಹೋರಾಡಿ, ಅಂತಹ ನೀಚ ಸಂಬಂಧಗಳಿಂದ ಪಾರಾಗಬೇಕಾಗುತ್ತದೆ.

ನಾನು (C.W.L.) ಈ ತಪ್ಪು ಮಾರ್ಗದ ಭಯಂಕರ ಸ್ಥಿತಿಯನ್ನು ಉತ್ಪ್ರೇಕ್ಷೆ ಮಾಡುತ್ತಿಲ್ಲ. ಇಂತಹ ಭಯಂಕರ ದುಃಸ್ಥಿತಿಗೆ ಸಿಕ್ಕಿಕೊಂಡಿರುವಂತಹವರು ನನ್ನ ಹತ್ತಿರ ಬಂದು ತಮ್ಮ ಕಷ್ಟಗಳನ್ನು ಹೇಳಿಕೊಂಡಿರುತ್ತಾರೆ. ವಾಮಮಾರ್ಗದ ಒಂದು ಪಂಥವಿರುತ್ತದೆ. ಅದರಲ್ಲಿ ಈ ಕೆಳಮಟ್ಟದ ಯೋಗಶಕ್ತಿಯನ್ನು ಉದ್ಬೋಧ ಮಾಡತಕ್ಕ ಪದ್ಧತಿಯಿರುತ್ತದೆ. ದಕ್ಷಿಣ ಮಾರ್ಗಕ್ಕೆ ಸಂಬಂಧಪಟ್ಟ ಸಾಧಕರು ಅಂತಹದರಿಂದ ದೂರ ಸರಿಯುತ್ತಾರೆ. ಏಕೆಂದರೆ ಅಪಾಯವು ತುಂಬ ಕಠಿಣವಾದುದು. ಅಂತಹ ಉನ್ನತ ಮಟ್ಟದ ಶಕ್ತಿ ವಿಶೇಷಗಳನ್ನು ಬೆಳೆಸಿಕೊಳ್ಳತಕ್ಕ ಕ್ಷೇಮಕರವಾದ ಮಾರ್ಗ ಬೇರೆ ಇರುವಾಗ ಈ ವಾಮಮಾರ್ಗಕ್ಕೆ ಯಾರೂ ಕೈ ಹಾಕಲು ಇಷ್ಟಪಡುವುದಿಲ್ಲ.

ಸಾಕಾದಷ್ಟು ಪರಿಶುದ್ಧತೆ ಮೈಗೂಡುವುದಕ್ಕೆ ಮುಂಚೆ ಕುಂಡಲಿನಿ ಶಕ್ತಿಯು ಎಚ್ಚರಗೊಂಡರೆ ಕೆಳಮಟ್ಟದ ದುಷ್ಟ ಶಕ್ತಿಗಳು ಉದ್ಬೋಧವಾಗುತ್ತವೆ. ಮನಸ್ಸಿನಲ್ಲಿ ಮಹತ್ವಾಕಾಂಕ್ಷೆಯು ಅತಿಯಾಗಿ ಹೊರ ಹೊಮ್ಮುತ್ತದೆ. ವಿಚಾರ ಶಕ್ತಿಯನ್ನು ಉನ್ನತ ಪಡಿಸುವುದರ ಜೊತೆಗೆ ಅಹಂಕಾರವನ್ನು ಬೆಳೆಸುತ್ತದೆ.

ಕೆಲವು ವಿಶೇಷ ಸಂದರ್ಭಗಳಲ್ಲಿ ಅದು ಎಚ್ಚರಗೊಳ್ಳುವುದೂ ಉಂಟು. ಆಗ ಸಂಬಂಧಪಟ್ಟ ಮನುಷ್ಯನು ತಿಳಿದವರ ಸಲಹೆ ಪಡೆಯುವುದು ಅತ್ಯಗತ್ಯ. ಗುರುಗಳ (ಜೀವನ್ಮುಕ್ತ) ಅನುಮತಿಯಿಲ್ಲದೆ ಕುಂಡಲಿನಿ ಶಕ್ತಿಯನ್ನು ಎಚ್ಚರಗೊಳಿಸುವ ಪ್ರಯತ್ನಕ್ಕೆ ಕೈ ಹಾಕಕೂಡದು. ಏಕೆಂದರೆ ಈ ದಿವ್ಯಶಕ್ತಿಯು ಯೋಗಿಗಳಿಗೆ ವಿಮೋಚನೆಯನ್ನು, ಅವಿವೇಕಿಗಳಿಗೆ ಬಂಧನವನ್ನೂ ಕಲ್ಪಿಸಿಕೊಡುತ್ತದೆ. ಹಠಯೋಗ ಪ್ರದೀಪಿಕೆಯಲ್ಲಿ ಹೇಳಿರುವಂತೆ ಗುಪ್ತವಿದ್ಯೆಗೆ ಸಂಬಂಧಪಟ್ಟ ಕಟ್ಟಳೆಗಳು ತುಂಬ ಕಠಿಣವಾದವು. ಯಾರೂ ಕೂಡ ಅನುಭವ ಜ್ಞಾನವಿಲ್ಲದೆ ಶಕ್ತಿಗೆ ಮೀರಿದ ಪ್ರಸಂಗಕ್ಕೆ ಕೈ ಹಾಕಿದರೆ ಆ ಮೂಲಕ ಕಠಿಣವಾದ ಅಪಾಯಕ್ಕೆ ಸಿಕ್ಕಿಕೊಳ್ಳುವುದು ಖಚಿತ.

ವಿವೇಕಿಯು ತಾಳ್ಮೆಯಿಂದ ತನ್ನ ಶೀಲ ಸ್ವಭಾವವನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಅಲ್ಲದೆ ಕೈಯ್ಯಲ್ಲಾದಷ್ಟು ಸೇವೆ ಸಲ್ಲಿಸಲು ಪ್ರಯತ್ನಪಡುತ್ತಿರಬೇಕು. ಅಂತಹವನು ಉನ್ನತ ಮಟ್ಟದ ಆಧ್ಯಾತ್ಮಿಕ ಪ್ರಗತಿಗೆ ಅರ್ಹತೆಯನ್ನು ಕೂಡಲೇ ಪಡೆದು, ಜೀವನ್ಮುಕ್ತ ಮಹಾತ್ಮರಾದ ಗುರುವು ಆತನಿಗೆ ಮಾರ್ಗದರ್ಶನ ಕೊಡದೆ ಇರುವುದಿಲ್ಲ. ಪ್ರಪ್ರಥಮದಲ್ಲಿ ಭಗವಂತನ ರಾಜ್ಯವನ್ನೂ ಹುಡುಕು ಮತ್ತು ಧರ್ಮನಿಷ್ಠೆಯನ್ನು ಮೈಗೂಡಿಸಿಕೋ, ಅನಂತರ ನಿನಗೆ ಸಲ್ಲಿಸತಕ್ಕದ್ದು ದೊರೆಯುತ್ತದೆ.

ಕುಂಡಲಿನಿ ಶಕ್ತಿ ತಾನಾಗಿಯೇ ಎಚ್ಚರಗೊಳ್ಳುವುದು

ಕೆಲವು ವಿಶೇಷ ಸಂದರ್ಭಗಳಲ್ಲಿ ಈ ಅಗ್ನಿ ಶಕ್ತಿಯ ಒಳ ಪದರಗಳು ತೆರೆಯುವುದುಂಟು. ಇಂಥದ್ದು ಸಂಭವಿಸಿದಾಗ ಪ್ರಬಲವಾದ ಬೇನೆಯನ್ನು ಅನುಭವಿಸಬೇಕಾಗುತ್ತದೆ. ಅದು ಹಾದು ಹೋಗುವ ನಾಡಿಯು ಸಿದ್ಧವಾಗಿಲ್ಲದಿರುವುದರಿಂದ ಅದು ಅತಿವಾಯು ತತ್ವದ ಪ್ರಕೃತಿ ತತ್ವವನ್ನು ಸುಟ್ಟು ಹಾಕಬೇಕಾಗುತ್ತದೆ. ಆಗ ತುಂಬ ವೇದನೆಯನ್ನು ಅನುಭವಿಸಬೇಕಾಗುತ್ತದೆ. ಅದು, ತಾನಾಗಿಯೇ ಎಚ್ಚರಗೊಂಡಾಗ ಅದು ಶುಷುಮ್ನ ದ್ವಾರದ ಮೂಲಕ ಹತ್ತಿ ಹೋಗಿ, ತಲೆಯ ಮೂಲಕ ಹೊರಗಿನ ವಾತಾವರಣದೊಳಕ್ಕೆ ಸೇರಿಕೊಳ್ಳುತ್ತದೆ. ಆ ರೀತಿಯಾಗುವಾಗ ತಾತ್ಕಾಲಿಕವಾಗಿ ಪ್ರಜ್ಞೆ ತಪ್ಪಬಹುದು. ಅಷ್ಟೇ ವಾಸ್ತವವಾದ ಅಪಾಯವು ಅದು ಆ ರೀತಿ ಹಾದು ಹೋಗುವುದರಲ್ಲಿ ಇರುವುದಿಲ್ಲ. ಅದನ್ನು, ಕೆಳಮುಖವಾಗಿಯಾಗಲೀ ಅಂತರ್ಮುಖವಾಗಿಯಾಗಲೀ ತಿರಗಿಸುವುದಕ್ಕೆ ಪ್ರಯತ್ನ ಪಡುವುದರಲ್ಲಿ ಅಪಾಯವಿರುತ್ತದೆ.

ಗುಪ್ತ ವಿದ್ಯೆಗೆ ಸಂಬಂಧಪಟ್ಟಂತೆ ಪ್ರಗತಿ ಸಾಧಿಸಬೇಕಾದ ದೃಷ್ಟಿಯಿಂದ ಈ ಕುಂಡಲಿನಿ ಶಕ್ತಿಯನ್ನು ಉದ್ಬೋಧ ಮಾಡುವ ಉದ್ದೇಶವು ಚಕ್ರಗಳನ್ನೆಲ್ಲ ಚೈತನ್ಯಯುಕ್ತವಾದುವನ್ನಾಗಿ ಮಾಡಿ, ಆ ಮೂಲಕ ಕಾಮಲೋಕವನ್ನು ಪ್ರಜ್ಞಾವತ್ತಾಗಿ ಪ್ರವೇಶಿಸುವುದೇ ಆಗಿದೆ. ಮೌನವಾಣಿಯಲ್ಲಿ ಹೇಳಿರುವಂತೆ ಕುಂಡಲಿನಿ ಶಕ್ತಿಯು ಭ್ರೂಮಧ್ಯಚಕ್ರವನ್ನು ಪ್ರವೇಶಿಸಿ ಅದನ್ನು ಅನಂತರ ಎಚ್ಚರಗೊಳ್ಳುವಂತೆ ಮಾಡಿದಾಗ ಸಂಬಂಧಪಟ್ಟ ಸಾಧಕನಿಗೆ ಗುರುವಿನ ಧ್ವನಿಯನ್ನು ಕೇಳುವ ಸುಯೋಗ ಒದಗುತ್ತದೆಯಂತೆ. ಇಲ್ಲಿ ಗುರುವೆಂದರೆ ತನ್ನ ಉನ್ನತ ಮಟ್ಟದ ಅಂತರಾತ್ಮನೇ ಆಗಿರುತ್ತದೆ. ಪಿಟ್ಯುಟರಿ ಅಂಗವು ಕೆಲಸ ಮಾಡುವಂತೆ ಆದಾಗ ಅದು ಕಾಮಲೋಕದ ಪ್ರಜ್ಞೆಯೊಡನೆ ಸಂಬಂಧವನ್ನು ಕಲ್ಪಿಸಿಕೊಡುತ್ತದೆ. ಆಗ ಆ ಮೂಲಕ ಸಾಧಕನಿಗೆ ಅಂತರಂಗದಿಂದ ಬರುವ ಎಲ್ಲಾ ಸಲಹೆಗಳನ್ನು ಕೇಳಲು ಅನುಕೂಲವಾಗುತ್ತದೆ.

ಈ ಭ್ರೂಮಧ್ಯ ಚಕ್ರವೊಂದೇ ಸಾಲದು. ಎಲ್ಲ ಉನ್ನತಮಟ್ಟದ ಚಕ್ರಗಳನ್ನು ಎಚ್ಚರಗೊಳಿಸಬೇಕು ಮತ್ತು ಕಾಮಲೋಕದ ಉಪತತ್ವಗಳಿಂದ ಬರುವ ಪ್ರಭಾವಗಳಿಗೆ ಅವು ಒಗ್ಗೊಡುವಂತೆ ಆಗಬೇಕು. ಈ ಬೆಳವಣಿಗೆಯು ಎಲ್ಲರಿಗೂ ಕಾದಿದೆ. ಆದರೆ ಈ ಜನ್ಮದಲ್ಲೇ ಗುಪ್ತವಿದ್ಯೆಯನ್ನು ಅನುಷ್ಠಾನ ಮಾಡಲು ಪ್ರಾರಂಭಿಸಿದವರಿಗೆ ಅದು ಸಾಧ್ಯವಿಲ್ಲ. ಅನೇಕರು ಮುಂದಿನ ಪ್ರದಕ್ಷಿಣೆ ಕಾಲ ಬರುವವರೆಗೂ ಕಾಯಬೇಕಾಗುತ್ತದೆ. ಕುಂಡಲಿನಿ ಶಕ್ತಿಯನ್ನು ಎಚ್ಚರಗೊಳಿಸುವುದನ್ನು ಪ್ರತಿಯೊಂದು ಜನ್ಮದಲ್ಲೂ ಪ್ರಯತ್ನಪಟ್ಟು ಮಾಡಬೇಕಾಗುತ್ತದೆ-ಏಕೆಂದರೆ ದೇಹಗಳು ಹೊಸದಾಗುತ್ತವೆ. ಆದರೆ ಒಂದು ಸಾರಿ ಎಚ್ಚರಿಸಿ ಕೆಲಸ ಮಾಡುವಂತೆ ಆದ ಮೇಲೆ ಮುಂದಿನ ಜನ್ಮಗಳಲ್ಲಿ ಅದನ್ನು ಎಚ್ಚರಗೊಳಿಸುವುದು ಸುಲಭವಾಗುತ್ತದೆ. ಪ್ರತಿಯೊಬ್ಬರಿಗೂ ಉನ್ನತಾತ್ಮದ ಸಂಬಂಧವು ಅನೇಕ ಅಂತಸ್ತುಗಳಲ್ಲಿರುತ್ತದೆ. ದೇಹಾತ್ಮಕ್ಕೆ

ಅಂತರಾತ್ಮದ ಪ್ರಭಾವ-ಅಂತರಾತ್ಮಕ್ಕೆ ಪುರುಷಾತ್ಮನ ಪ್ರಭಾವ-ಪುರುಷಾತ್ಮನಿಗೆ ಬ್ರಹ್ಮಾಂಡಾಧಿಪತಿಯ ಪ್ರಜ್ಞಾ ಪೂರ್ವಕವಾದ ಸಂಬಂಧ ಇರುತ್ತದೆ.

ನನ್ನ ಸ್ವಂತ ಅನುಭವ

ನನ್ನ ಸ್ವಂತ ಅನುಭವವನ್ನು ಇಲ್ಲಿ ಉಲ್ಲೇಖಿಸಿದರೆ ಪ್ರಯೋಜನವಾಗಬಹುದು. ನಾನು ಭಾರತದಲ್ಲಿ ಮೊದಲ 42 ವರ್ಷಗಳ ಕಾಲದಲ್ಲಿ ಕೆಲಸ ಮಾಡುತ್ತಿದ್ದಾಗ ಕುಂಡಲಿನಿ ಅಗ್ನಿಯನ್ನು ಉತ್ಪಾದನೆ ಮಾಡುವುದಕ್ಕೆ ಪ್ರಯತ್ನಿಸಲಿಲ್ಲ. ಅಲ್ಲದೆ ಅದರ ವಿಷಯವಾಗಿ ನನಗೆ ಏನೂ ಗೊತ್ತೂ ಇರಲಿಲ್ಲ. ಅದನ್ನು ಉತ್ಪಾದನೆ ಮಾಡಬೇಕಾದರೆ ಅದರ ಸಂಸ್ಕಾರಕ್ಕೆ ಒಳಪಟ್ಟ ಭಾರತ ದೇಶದ ದೇಹವೇ ಆಗಬೇಕೇನೋ ಎಂಬದಾಗಿ ತಿಳಿದಿದ್ದೆ. ಆದರೆ ಒಂದು ದಿನ ಜೀವನ್ಮುಕ್ತ ಮಹಾತ್ಮರಲ್ಲಿ ಒಬ್ಬರು ಅದನ್ನು ಎಚ್ಚರಗೊಳಿಸುವಂತಹ ಧ್ಯಾನ ಮಾಡುವಂತೆ ಸೂಚಿಸಿದರು. ಆ ಪ್ರಯತ್ನದಲ್ಲಿದ್ದಾಗ ಆ ಮಹಾತ್ಮರು ನನ್ನನ್ನು ಕಾದು ನೋಡುತ್ತಿದ್ದರು. ನನಗೆ ಅಪಾಯ ಸಂಭವಿಸುವ ಸಂದರ್ಭದಲ್ಲಿ ನನಗೆ ಎಚ್ಚರಿಕೆ ಕೊಡುತ್ತಿದ್ದರು ಎಂಬಂಶ ನನಗೆ ಚೆನ್ನಾಗಿ ಗೊತ್ತಿತ್ತು. ಹಿಂದೂ ದೇಶದ ಯೋಗಿಗಳು ಈ ಯೋಗವನ್ನು ತಮ್ಮ ಶಿಷ್ಯರಿಗೆ ಬೋಧಿಸಿ ಅವರು ಅದನ್ನು ಸಾಧಿಸುವಾಗ ಅದನ್ನು ಎಚ್ಚರಿಕೆಯಿಂದ ಕಾದು ನೋಡುತ್ತಾರೆಂಬಂಶ ನನಗೆ ಗೊತ್ತು. ಆದರೆ ನನಗೆ ಅಂತಹವರ ಪರಿಚಯವಿರಲಿಲ್ಲ. ಅಲ್ಲದೆ ನನಗೆ ಪರಿಚಯವಿದ್ದಂತಹ ಮಹಾತ್ಮರೊಬ್ಬರು ಅಂತಹವರ ಪರಿಚಯ ಮಾಡಿಕೊಡುವವರೆಗೆ ನಾನು ಅಂತಹವರನ್ನು ನಂಬುತ್ತಿರಲಿಲ್ಲ.

ಸಾಧಕರು ಕೆಲವರು ಈ ಕುಂಡಲಿನಿ ಶಕ್ತಿ ಉದ್ಬೋಧ ಮಾಡಲು ಮಾರ್ಗದರ್ಶನ ಕೇಳುತ್ತಾರೆ. ನಾನು ಸಾಧಿಸಿದಂತಹ ಮಾರ್ಗವನ್ನೇ ಅವರಿಗೂ ತಿಳಿಸುತ್ತೇನೆ, ಏನೆಂದರೆ ಥಿಯಾಸಫಿ ಸಮಾಜದ ಸೇವೆಸಲ್ಲಿಸುತ್ತಾ ಅವರಿಗೂ ಅಂತಹ ಸಲಹೆಗಳನ್ನು ಗುರುಗಳು ಕೊಡುವವರೆಗೂ ಕಾದಿರಬೇಕೆಂದು ಸಲಹೆ ಕೊಡುತ್ತೇನೆ. ಅಲ್ಲದೆ ಅಂತಹ ಗುರುಗಳ ಸಲಹೆ ಬರುವವರೆಗೂ ಅವರು ತಿಳಿದಿರತಕ್ಕ ಎಲ್ಲ ವಿಧವಾದ ಧ್ಯಾನಕ್ರಮಗಳನ್ನು ಅನಾಷ್ಠಾನ ಮಾಡುವಂತೆ ಸಲಹೆ ಕೊಡುತ್ತೇನೆ. ಅಂತಹ ಪ್ರಗತಿಯು ಈ ಜನ್ಮದಲ್ಲಿ ಬರದೇ ಇರಬಹುದು; ಆದರೆ ಜೀವನ್ಮುಕ್ತ ಮಹಾತ್ಮರು ಯಾರನ್ನೂ ಬಿಡದೆ ಸದಾ ನೋಡುತ್ತಿರುತ್ತಾರೆ. ಈ ಅಧ್ಯಾತ್ಮ ಪ್ರಗತಿಯು ಅಂತರಾತ್ಮನಿಗೆ ಸಂಬಂಧಪಟ್ಟುದೇ ವಿನಹ ದೇಹಾತ್ಮಕ್ಕಲ್ಲ. ಆದುದರಿಂದ ಸಾಧಕರು ಅರ್ಹತೆಯನ್ನು ಪಡೆದ ಕೂಡಲೇ ಜೀವನ್ಮುಕ್ತ ಮಹಾತ್ಮರು ಮುಂದೆ ಬಂದು ಸಲಹೆಯನ್ನು ಕೊಡುವುದು ಖಚಿತ ಎಂಬಂಶವನ್ನು ಮರೆಯದೆ ಇರಲಿ.

ಈ ಅರ್ಹತೆಗೆ ವಯಸ್ಸು ಮುಖ್ಯವಾದುದಲ್ಲ. ಆರೋಗ್ಯ ಮತ್ತು ಪರಿಶುದ್ಧ ಜೀವಿತ ಬಹು ಮುಖ್ಯವಾದವು. ಏಕೆಂದರೆ ದೃಢವಾದ ಶರೀರ ಮಾತ್ರವೇ ಆ ಸಾಧನೆಗೆ

ಸಂಬಂಧಪಟ್ಟ ಕಷ್ಟಗಳನ್ನೆಲ್ಲ ಸಹಿಸಿಕೊಳ್ಳಬಲ್ಲುದು. ಅಂತಹ ಕಷ್ಟಗಳು ಎಂಥವು ಎಂಬಂಶವನ್ನು ಮೊದಲೇ ಊಹಿಸಿ ತಿಳಿದು ಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಆ ಶಕ್ತಿಯನ್ನು ಎಚ್ಚರಗೊಳಿಸಿದ ನಂತರ ಅದನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕು; ಅಲ್ಲದೆ ಅದು ಯಾವ ಕ್ರಮದಲ್ಲಿ ಚಕ್ರದಿಂದ ಚಕ್ರಕ್ಕೆ ಹತ್ತಬೇಕು ಎಂಬುದು ಜನರ ಪ್ರಕೃತಿ ಸ್ವಭಾವಕ್ಕೊಳಪಟ್ಟು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ. ಅಲ್ಲದೆ ಅದು ಚಕ್ರದಿಂದ ಚಕ್ರಕ್ಕೆ ಹತ್ತುವ ಕ್ರಮವು ಒಂದು ನಿರ್ದಿಷ್ಟ ರೀತಿಯಲ್ಲಿರುತ್ತದೆ. ಅದನ್ನು ಗುರುಗಳು ಸಮಯ ಬಂದಾಗ ತಿಳಿಸುತ್ತಾರೆ.

ಪ್ರಾಣಬಲೆ

ಪ್ರಾಣಮಯ ಕೋಶ ಮತ್ತು ಕಾಮದೇಹಕ್ಕೆ ಸಂಬಂಧಪಟ್ಟ ಚಕ್ರಗಳು ಪರಸ್ಪರ ಒತ್ತಾದ ಸಂಬಂಧವುಳ್ಳವು. ಇವುಗಳನ್ನು ಭೌತಿಕ ಪರಮಾಣುಗಳನ್ನು ಪ್ರಾಣಶಕ್ತಿಯಿಂದ ಎಣೆದಿರುವ ಒಂದು ಬಲೆಯು ಒತ್ತಾಗಿ ಸೇರಿಸಿದೆ. ದೈವಿಕ ಚೈತನ್ಯವು ಕಾಮದೇಹದಿಂದ ಸ್ಥೂಲದೇಹಕ್ಕೆ ಇಳಿದು ಬರುವಂಥದು. ಇವೆರಡಕ್ಕೂ ಹೊಂದಿಕೊಂಡಿರುತ್ತದೆ, ಆದರೆ ಮತ್ತಾವ ಬೇರೆ ಶಕ್ತಿಯು ಇದರ ಮೂಲಕ ಇಳಿದು ಬರಲು ಸಾಧ್ಯವಿರುವುದಿಲ್ಲ. ಏಕೆಂದರೆ ಅಂತಹ ಶಕ್ತಿ ವಿಶೇಷಗಳು ಎರಡೂ ಲೋಕಗಳ ಪರಮಾಣು ಅಂತಸ್ತುಗಳ ಉಪಲೋಕ ಪ್ರಕೃತಿಯನ್ನು ಭೇದಿಸಿಕೊಂಡು ಬರಲಾರವು. ಈ ಬಲೆಯು ಪ್ರಕೃತಿಯಿಂದ ಏರ್ಪಟ್ಟ ಮುಂಜಾಗ್ರತೆ ಕ್ರಮ; ಏಕೆಂದರೆ ಸಾಧಕನು ಯೋಗ್ಯನಾಗುವುದಕ್ಕೆ ಮುಂಚೆ ಈ ಎರಡು ಲೋಕಗಳಿಗೂ ಮಧ್ಯೆ ಇರುವ ಪ್ರಜ್ಞೆಯಲ್ಲಿ ಸಂಬಂಧ ಏರ್ಪಡಕೂಡದು.

ಈ ಬಲೆಯೇ ಸಾಧಾರಣ ಮನುಷ್ಯನಿಗೆ ತನ್ನ ನಿದ್ರೆಯಲ್ಲಿ ಮೇಲಿನ ಲೋಕದ ಅನುಭವಗಳನ್ನು ನೆನೆಸಿಕೊಳ್ಳುವುದಕ್ಕೆ ಅಡಚಣೆಯನ್ನುಂಟು ಮಾಡತಕ್ಕದ್ದು. ಅಲ್ಲದೆ ಈ ಬಲೆಯೇ ಸಾವಿಗೆ ಮುಂಚಿತವಾದ ತಾತ್ಕಾಲಿಕ ಅಪ್ರಜ್ಞೆಯ ಸ್ಥಿತಿಗೆ ಕಾರಣವಾಗಿರುವಂಥದು. ಅಲ್ಲದೆ ಸಾಧಾರಣ ಮನುಷ್ಯನಿಗೆ ಇದೊಂದೂ ಗೊತ್ತಿರುವುದಿಲ್ಲ. ಕಾಮಲೋಕದ ವ್ಯಕ್ತಿಯು ಒಂದು ವೇಳೆ ಆ ಲೋಕಕ್ಕೆ ಸಂಬಂಧಪಟ್ಟ ಪ್ರಭಾವಕ್ಕೆ ಆತನನ್ನು ಒಳಪಡಿಸಿದರೆ ಆತನು ಅಂತಹ ಪ್ರಭಾವವನ್ನು ಎದುರಿಸಲು ಅಸಮರ್ಥನಾಗುತ್ತಾನೆ. ಅಂತಹ ಅನಿರೀಕ್ಷಿತವಾದ ಅಪಾಯದಿಂದ ಕಾಪಾಡತಕ್ಕ ಉದ್ದೇಶವೇ ಈ ಮೇಲ್ಕಂಡ ಪ್ರಾಣಬಲೆಗೆ ಸಂಬಂಧಪಟ್ಟುದಾಗಿರುತ್ತದೆ. ಅಲ್ಲಿಗೆ ಅಂತಹವನನ್ನು ಕಾಮಲೋಕದ ವ್ಯಕ್ತಿಯು ತನ್ನ ಪ್ರಭಾವಕ್ಕೆ ವಶಪಡಿಸಿಕೊಳ್ಳಲು ಸಾಧ್ಯತೆಯಿರುತ್ತದೆ.

ಆದುದರಿಂದ ಈ ಪ್ರಾಣಬಲೆಗೆ ಒದಗಿಸತಕ್ಕ ಅಪಾಯವು ತುಂಬ ಭಯಂಕರವಾದುದು ಎಂಬಂಶವು ಎದ್ದು ಕಾಣುತ್ತದೆ. ಅಂತಹ ಅಪಾಯಗಳು ಸಂಭವಿಸತಕ್ಕ ಅವಕಾಶಗಳು ಅನೇಕವಿರುತ್ತವೆ. ಆದುದರಿಂದ ಈ ಬಲೆಯ ರಕ್ಷಣೆಯ ವಿಷಯವಾಗಿ ಎಷ್ಟು ಜಾಗರೂಕತೆಯಿಂದ ಇದ್ದರೂ ಸಾಲದು; ಆಕಸ್ಮಿಕವಾಗಿ ಅಂತಹ

ಅಪಾಯ ಸಂಭವಿಸಬಹುದು ಅಥವಾ ಒಂದೇ ಸಮನೆ ಮುಂದುವರಿಸಿದ ದುರಭ್ಯಾಸದಿಂದ ಸಂಭವಿಸಬಹುದು. ಯಾವುದಾದರೂ ಆಕಸ್ಮಿಕವಾಗಿ ಸಂಭವಿಸುವ ಅಪ್ರಿಯ ಘಟನೆಯಿಂದಲಾಗಲೀ ತುಂಬ ಪ್ರಬಲವಾದ ಭಯದಿಂದಾಗಲೀ ಆ ಪ್ರಾಣ ಬಲೆಗೆ ಧಕ್ಕೆಯುಂಟಾಗಬಹುದು. ಒಂದು ಅಭೂತಪೂರ್ವವಾದ ಭಯಂಕರ ಕೋಪೋದ್ವೇಗವು ಅಂತಹ ಧಕ್ಕೆಯನ್ನುಂಟುಮಾಡಬಹುದು. ಅಥವಾ ಯಾವುದಾದರೂ ಕೆಳಮಟ್ಟದ ಉದ್ವೇಗವು ಕಾಮದೇಹದಲ್ಲಿ ಅಂತಹ ಸ್ಫೋಟವನ್ನುಂಟುಮಾಡಬಹುದು.

ಮಧ್ಯ ಪಾನ ಮತ್ತು ಅಫೀಮು ಮುಂತಾದುವುಗಳ ದುಷ್ಪರಿಣಾಮ

ಈ ಪ್ರಾಣಬಲೆಯನ್ನು ಸುರಕ್ಷಿತವಾಗಿರುವ ಸ್ಥಿತಿಯಿಂದ ಅಪಾಯ ಸ್ಥಿತಿಗೆ ತರುವಂತಹ ದುರಭ್ಯಾಸಗಳು, ಎಂದರೆ ಮಧ್ಯಪಾನ ಮತ್ತು ಮತ್ತನ್ನುಂಟು ಮಾಡುವ ಅಫೀಮು ಮುಂತಾದ ವಸ್ತುಗಳ ಸೇವನೆ ಟೀ ಮತ್ತು ಕಾಫೀ ಪಾನಗಳೂ ಸಹ ಇಂತಹ ದುಷ್ಟ ಪರಿಣಾಮವನ್ನುಂಟು ಮಾಡತಕ್ಕ ಪದಾರ್ಥಗಳನ್ನು ಪಡೆದಿವೆ. ಆದರೆ ಕೇವಲ ಅಲ್ಪ ಪ್ರಮಾಣದಲ್ಲಿ ಇವುಗಳ ಪಾನವನ್ನು ಅತಿ ಮಾಡಿದರೆ ಕೆಡುಕುಂಟಾಗುವುದು ಖಂಡಿತ ಅಂತಹ ಪಾನೀಯಗಳು ಪ್ರಾಣಬಲೆಯ ಪ್ರಕೃತಿ ಅಂಶವನ್ನು ಛಿದ್ರಿಸಿ ಕಾಮಲೋಕಕ್ಕೆ ಹೋಗುವಂತೆ ಮಾಡುತ್ತವೆ.

ಆ ರೀತಿ ಆದಾಗ ಮೇಲ್ಕಂಡ ಪಾನೀಯಗಳ ಸಾರ ಭೂತವಾದ ಅಂಶವು ಚಕ್ರಗಳ ಮೂಲಕ ವಿರೋಧ ದಿಕ್ಕಿನಲ್ಲಿ ನುಗ್ಗಿ ಹೋಗುವಂತೆ ಮಾಡುತ್ತದೆ. ಆ ಮೂಲಕ ಪ್ರಾಣಬಲೆಗೆ ಧಕ್ಕೆಯನ್ನುಂಟುಮಾಡುತ್ತದೆ. ಸೂಕ್ಷ್ಮ ಸ್ಥಿತಿಗೆ ಪರಿವರ್ತಿತವಾಗಿ ಹತ್ತಿ ಹೋಗುವ ಶಕ್ತಿಯು ಪ್ರಾಣಬಲೆಯನ್ನು ಸುಟ್ಟು ಹಾಕುತ್ತದೆ- ಆ ಮೂಲಕ ಮೇಲಿನಿಂದ ಬರುವ ಎಲ್ಲ ವಿಧವಾದ ದುಷ್ಟ ಪರಿಣಮಗಳಿಗೂ ಬಾಗಿಲು ತೆರೆದಂತೆ ಆಗುತ್ತದೆ.

ಮತ್ತೊಂದು ಕೆಟ್ಟ ಪರಿಣಾಮವೇನೆಂದರೆ ಪ್ರಾಣಶಕ್ತಿಯ ಬಲೆಯಲ್ಲಿರುವ ಪರಮಾಣುಗಳನ್ನು ಘನೀಭೂತವಾಗುವಂತೆ ಮಾಡಿ ಪ್ರಾಣಶಕ್ತಿಯು ಅದರೊಳಕ್ಕೆ ಸುಲಭವಾಗಿ ಹರಿದು ಹೋಗದಂತೆ ಅಡಚಣೆಯನ್ನು ಏರ್ಪಡಿಸುತ್ತದೆ. ಆಗ ಪ್ರಾಣಬಲೆಯು ನಾಲೆಯಾಗಿರುವುದಕ್ಕೆ ಬದಲು ಮೇಲಿನಿಂದ ಬರುವ ಶಕ್ತಿ ವಿಶೇಷಗಳಿಗೆ ಅಡ್ಡಿ ಆತಂಕಗಳನ್ನು ಕಲ್ಪಿಸಿದಂತೆ ಆಗುತ್ತದೆ.

ಮದ್ಯಪಾನಕ್ಕೆ ಒಳಗಾಗತಕ್ಕವರ ಶರೀರಗಳಲ್ಲಿ ಮೇಲ್ಕಂಡ ಎರಡು ವಿಧವಾದ ಕೆಟ್ಟ ಪರಿಣಾಮಗಳೂ ಸಂಭವಿಸುತ್ತವೆ.

ಮೇಲ್ಕಂಡ ಎರಡು ವಿಧವಾದ ದುಷ್ಪರಿಣಾಮಗಳು ಮದ್ಯಪಾನಕ್ಕೆ ಒಳಗಾಗಿರತಕ್ಕವರ ಶರೀರಗಳಲ್ಲಿ ಎದ್ದು ಕಾಣುತ್ತದೆ. ಪ್ರಪ್ರಥಮ ದುಷ್ಟ ಪರಿಣಾಮದ ಫಲಿತಾಂಶವಾಗಿ ಸಂಬಂಧಪಟ್ಟ ವ್ಯಕ್ತಿಗಳಿಗೆ ಪ್ರಜ್ಞೆ ತಪ್ಪಿ-ಕೆಲವು ವೇಳೆ ಹುಚ್ಚು ಹಿಡಿಯುವ ಸಂಭವವೂ

ಇರುತ್ತದೆ. ಇದಕ್ಕಿಂತ ಹೆಚ್ಚಾಗಿ ಅಂತಹವನು ತನ್ನ ಉನ್ನತ ಮಟ್ಟದ ಸ್ವಭಾವವನ್ನು ಕಳೆದುಕೊಂಡು ಕೇವಲ ಇಂದ್ರಿಯ ಸುಖ ಲೋಲುಪತೆಗೆ ಬಿದ್ದು ತನ್ನ ಉನ್ನತ ಸ್ವಭಾವವನ್ನು ಕಳೆದುಕೊಂಡು ಪಶುಸ್ವಭಾವಕ್ಕೆ ಬಿದ್ದು ಹೋಗುತ್ತಾನೆ. ಅಂತಹವರಿಗೆ ಜವಾಬ್ದಾರಿ ಭಾವನೆಯೇ ಸುತರಾಂ ಇಲ್ಲದಂತೆ ಆಗಿ ಹೆಂಡತಿ ಮಕ್ಕಳಿಗೂ ಸಹ ಕೇಡುಂಟಮಾಡುವಂತಹ ಅತಿಯಾದ ದುರಭ್ಯಾಸಕ್ಕೆ ಬಿದ್ದು ತಮ್ಮ ಪ್ರೀತಿಪಾತ್ರರಿಗೆ ಪೋಷಣ ದ್ರವ್ಯಗಳನ್ನು ಒದಗಿಸಲು ನಿರಾಕರಿಸುವಷ್ಟರಮಟ್ಟಿಗೆ ಪತಿತರಾಗತಕ್ಕ ಸಂಭವವಿರುತ್ತದೆ.

ಹೊಗೆ ಸೊಪ್ಪಿನ ಪರಿಣಾಮ

ಹೊಗೆಸೊಪ್ಪನ್ನು ಅತಿಯಾಗಿ ಸೇವಿಸತಕ್ಕವರ ಮನೋದೇಹ-ಕಾಮದೇಹ ಮತ್ತು ಸ್ಥೂಲದೇಹಗಳ ಮೇಲೆ ಸಂಭವಿಸುವ ಕೆಟ್ಟ ಪರಿಣಾಮಗಳು ಎದ್ದು ಕಾಣುವಂತೆ ಆಗುತ್ತದೆ.

ಹೊಗೆಸೊಪ್ಪಿಗೆ ಸಂಬಂಧಪಟ್ಟ ಪರಿಣಾಮವು, ಎಂದರೆ ಸ್ಥೂಲ ದೇಹವು ಅಪರಿಶುದ್ಧ ಕಣಗಳಿಂದ ತುಂಬಿ ಹೋಗುತ್ತದೆ. ಮತ್ತು ಅಂತಹವರ ದೇಹಗಳಿಂದ ಹೊರಹೊಮ್ಮುವಂತಹ ವಾಸನೆಯು ಅಸಹ್ಯಕರವಾದುದಾಗುತ್ತದೆ. ಕಾಮದೇಹದ ಪ್ರಕೃತಿಯಲ್ಲಿ ಪರಿಶುದ್ಧತೆಯು ಕೆಟ್ಟು, ಅಲ್ಲಿಂದ ಬರತಕ್ಕ ಉತ್ತಮ ಸ್ಪಂದಗಳಿಗೆ ಅಡ್ಡಿ ಆತಂಕಗಳನ್ನುಂಟುಮಾಡುತ್ತದೆ. ಇದರ ಫಲಿತಾಂಶವೇ ಧೂಮ ಪಾನ ಮಾಡತಕ್ಕವರಿಗೆ ಒಂದು ವಿಧವಾದ ಅಪ್ಯಾಯಮಾನವಾದ ಭಾವನೆಯನ್ನು ತರತಕ್ಕದು. ಆಧ್ಯಾತ್ಮಿಕ ದೃಷ್ಟಿಯಿಂದ ಇವೆರಡು ಕೆಟ್ಟ ಪರಿಣಾಮಗಳೂ ನಿಂದ್ಯವಾದುವು. ನಮ್ಮ ಇಂದ್ರಿಯಗಳು ನಮ್ಮ ಪೂರ್ತ ಸ್ವಾಧೀನದಲ್ಲಿದ್ದು ನಮ್ಮ ಆಶೆಗಳು ನಮ್ಮನ್ನು ಸಿಕ್ಕಿದ ಕಡೆಗೆ ಕರೆದೊಯ್ಯಕೂಡದು. ಅಲ್ಲದೆ ಮರಣಾನಂತರ ಅಂತಹ ದುರಭ್ಯಾಸದ ಪರಿಣಾಮವು ತುಂಬ ಶೋಚನೀಯವಾದುದಾಗಿ ಪರಿಣಮಿಸುತ್ತದೆ-ಏಕೆಂದರೆ ಅಂತಹವನು ಸಾವಿನ ನಂತರ ಸುಪ್ತಾವಸ್ಥೆಯಲ್ಲಿ ವಾರಗಟ್ಟಲೆ, ಕೆಲವು ಸಂದರ್ಭಗಳಲ್ಲಿ ತಿಂಗಳುಗಟ್ಟಲೆ ಅಪ್ರಜ್ಞೆ ಸ್ಥಿತಿಯಲ್ಲಿ ಬಿದ್ದುಕೊಂಡಿರಬೇಕಾಗತ್ತದೆ. ಆ ಮೂಲಕ ಸ್ನೇಹಿತರ ಸ್ಫೂರ್ತಿದಾಯಕವಾದ ಸಹವಾಸವನ್ನು ಕಳೆದುಕೊಳ್ಳುವುದೇ ಅಲ್ಲದೆ ಉನ್ನತ ಮಟ್ಟದ ಭಾವನೆಗಳಿಗೂ ಆ ಮೂಲಕ ಒಗ್ಗೊಡುವುದಕ್ಕೆ ಸಾದ್ಯವಿಲ್ಲದಂತೆ ಆಗುತ್ತದೆ. ಕೇವಲ ಕ್ಷುದ್ರವಾದ ದುರಭ್ಯಾಸಕ್ಕಾಗಿ ಮೇಲ್ಕಂಡ ಸೌಲಭ್ಯಗಳನ್ನು ಕಳೆದುಕೊಳ್ಳುವುದು ಉಚಿತವೇ? ಯಾರು ತನ್ನ ಉನ್ನತಮಟ್ಟದ ಕೋಶಗಳನ್ನು ಬೆಳೆಸಿಕೊಂಡು, ಚಕ್ರಗಳನ್ನು ಎಚ್ಚರಗೊಳಿಸಿ, ಗುಪ್ತವಿದ್ಯಾ ಮಾರ್ಗದಲ್ಲಿ ಮುಂದುವರಿಯಬೇಕೆಂದು ಬಯಸುತ್ತಾರೆಯೋ ಅಂತಹವರಿಗೆ ಧೂಮಪಾನ ಹೊಗೆಸೊಪ್ಪಿನ ಸೇವನೆ ತುಂಬ ದೊಡ್ಡ ಅಡಚಣೆಗಳು.

ಉನ್ನತ ಮಟ್ಟದ ಲೋಕಗಳಿಂದ ಕೆಳಕ್ಕೆ ಇಳಿದು ಪ್ರಭಾವ ಬೀರುವಂತಹ ಎಲ್ಲ ಸದ್ಭಾವನೆಗಳೂ ಪರಮಾಣು ಮಟ್ಟದ ಉಪಲೋಕದಿಂದ ಕೆಳಕ್ಕೆ ಹರಿದು ಬರಬೇಕಾಗುತ್ತದೆ. ಆದರೆ ಮೇಲ್ಕಂಡ ದುರಭ್ಯಾಸದಿಂದ ಮೇಲ್ಕಂಡ ಪರಮಾಣುಗಳು

ನಿಶ್ಚೇತನವಾಗುವುದಲ್ಲದೇ ಎರಡನೆಯ ಮತ್ತು ಮೂರನೆಯ ಉಪಲೋಕಗಳ ಮಟ್ಟಗಳ ಪ್ರಕೃತಿ ತತ್ವಗಳೂ ಕೂಡ ತಮ್ಮ ಸೂಕ್ಷ್ಮ ಸ್ವಭಾವವನ್ನು ಕಳೆದುಕೊಂಡು ಉನ್ನತ ಮಟ್ಟದ ಭಾವನೆಗಳಿಗೆ ಒಗೊಡುವಿಕೆಯನ್ನು ಕಳೆದುಕೊಳ್ಳುತ್ತವೆ. ಆಗ ಮೇಲ್ಮಟ್ಟದಿಂದ ಹೊರಹೊಮ್ಮುವಂತಹ ಉನ್ನತ ಭಾವನೆಗಳು ಹರಿದು ಬರುವುದಕ್ಕೆ ಅಡ್ಡಿ ಆತಂಕಗಳು ಉಂಟಾಗುತ್ತವೆ. ಕೇವಲ ಕೆಳಮಟ್ಟದ ಅಪ್ರಿಯವಾದ ದುಷ್ಟ ಪ್ರಭಾವಗಳಿಗೆ ಮಾತ್ರ ಅವಕಾಶ ಸಿಕ್ಕುತ್ತದೆ.

ಬಾಗಿಲುಗಳನ್ನು ತೆರೆಯುವುದು

ಪ್ರಕೃತಿ ಕಟ್ಟಳೆಯು ಈ ಚಕ್ರಗಳನ್ನು ದುರಪಯೋಗವಾಗದಂತೆ ರಕ್ಷಿಸುತ್ತಿದ್ದಾಗ್ಗೂ ಸದುಪಯೋಗದ ಕಾಲ ಬಂದಾಗ ಅವುಗಳನ್ನು ಎಚ್ಚರಗೊಳಿಸಲು ಸಾಧ್ಯ. ಅವುಗಳನ್ನು ಸರಿಯಾದ ಮಾರ್ಗದಲ್ಲಿ ಎಚ್ಚರಗೊಳಿಸಲು ಸಾಧ್ಯ, ಅಲ್ಲದೆ ಮಾನವನು ಸಾಕಾದಷ್ಟು ಬೆಳವಣಿಗೆ ಮಟ್ಟವನ್ನು ತಲುಪಿ ಅವುಗಳ ಮೂಲಕ ಪೂರ್ತ ಪ್ರಯೋಜನವನ್ನು ಪಡೆಯಲು ಅವಕಾಶವಿರುತ್ತದೆ.

ಸಾದಾರಣ ಮನುಷ್ಯನಿಗೆ ತನ್ನ ಪರಮಾಣು ಮಟ್ಟದ ಅತ್ಯಂತ ಸೂಕ್ಷ್ಮತಮ ಪ್ರಕೃತಿಯನ್ನು ಉಪಯೋಗ ಮಾಡಲು ಸಾಧ್ಯವಿಲ್ಲ. ಆದುದರಿಂದ ಎರಡು ಪ್ರಜ್ಞೆ ಮಟ್ಟಗಳಿಗೂ ಸಂಬಂಧವಿರಲು ಸಾಧ್ಯವಿಲ್ಲ. ಆದರೆ ಮಾನವನು ಸಾಕಾದಷ್ಟು ಬೆಳೆದು ತನ್ನ ಸ್ಥೂಲ ಮತ್ತು ಕಾಮದೇಹಗಳನ್ನು ಪರಿಶುದ್ಧ ಮಾಡಿಕೊಂಡು ಎರಡು ಲೋಕಗಳ ಪರಮಾಣು ಮಟ್ಟದ ಪ್ರಕೃತಿಯನ್ನು ವಿನಿಯೋಗ ಮಾಡುವಂತೆ, ಆದರೆ ಆಗ ಕಾಮಲೋಕದ ಮಟ್ಟದ ಬಾವನೆಗಳು ಸ್ಥೂಲ ಲೋಕದ ಪ್ರಜ್ಞೆಗೂ, ಸ್ಥೂಲ ಲೋಕಮಟ್ಟದ ಭಾವನೆಗಳು ಕಾಮಲೋಕಕ್ಕೂ ಬರುವುದಕ್ಕೆ ಅನುಕೂಲ ಪರಿಸ್ಥಿತಿಯುಂಟಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಪ್ರಾಣಬಲೆಯು ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತಿದ್ದಾಗ್ಗೂ ಪರಸ್ಪರ ವಿನಿಮಯಕ್ಕೆ ಅಡ್ಡಿ ಆತಂಕಗಳನ್ನು ಕಲ್ಪಿಸುವುದಿಲ್ಲ.

ಆದುದರಿಂದಲೇ ಸಿದ್ಧಿಗಳು ಎಂದರೆ ದಿವ್ಯದೃಷ್ಟಿಯ ಬೆಳವಣಿಗೆ ತಾನಾಗಿಯೇ ಲಭಿಸುವ ಕಾಲ ಬಂದೇ ಬರುತ್ತದೆ. ಅವುಗಳನ್ನು ನಮ್ಮ ಬೆಳವಣಿಗೆ ಮತ್ತು ಪರಿಶುದ್ಧತೆ ಪರಿಪಕ್ವವಾಗುವವರೆಗೆ ಎಚ್ಚರಗೊಳಿಸಲು ಪ್ರಯತ್ನಿಸಬಾರದು. ಏಕಂದರೆ ಸಂಸರಣವು ಸ್ವಾಭಾವಿಕವಾಗಿ ಮುಂದುವರಿದು ತಕ್ಕ ಯೋಗ್ಯತೆಯು ಮೈಗೂಡಿದಾಗ ಅವುಗಳನ್ನು ಎಚ್ಚರಗೊಳಿಸುವ ಮೂಲಕ ಸಾಧಕನು ಸೌಲಭ್ಯಗಳನ್ನೆಲ್ಲ ಪಡೆಯುತ್ತಾನೆ-ಎಲ್ಲ ವಿಧವಾದ ಅಪಾಯಗಳು ಸಂಭವಿಸದಂತೆ ನೋಡಿಕೊಳ್ಳುತ್ತಾನೆ. ನಮ್ಮ ಜೀವನ್ಮುಕ್ತ ಮಹಾತ್ಮರುಗಳು ಅನುಸರಿಸಿರುವ ಮಾರ್ಗವೇ ಇದು. ಆದುದರಿಂದ ಅಂತಹದು ನಮಗೂ ಕೂಡ ಶ್ರೇಯಸ್ಕರವಾದುದು.

ಅಧ್ಯಾಯ ೫

ಲಯ ಯೋಗ

ಹಿಂದೂ ಪುಸ್ತಕಗಳು

ಈಗ್ಗೆ 20 ವರ್ಷಗಳಂದೀಚೆಗೆ ಚಕ್ರಗಳ ವಿಷಯವಾಗಿ ಹೇರಳವಾದ ವಿವರಣೆಯನ್ನು ಒದಗಿಸುವ ಗ್ರಂಥಗಳು ಆಂಗ್ಲೇಯ ಭಾಷೆಯಲ್ಲಿ ಪ್ರಕಟಿಸಟ್ಟಿಲ್ಲವೆ. ಆರ್ಥರ್ ಅವಲಾನ್ ಎಂಬುವವರು ''Serpent Power'' ಎಂಬ ಗ್ರಂಥವನ್ನೂ (Thirty Minor Upanishads) ಮುವತ್ತು ಗೌಣ ಉಪನಿಷತ್‌ಗಳು ಎಂಬ ಗ್ರಂಥವನ್ನೂ ಶ್ರೀ ಕೆ. ನಾರಾಯಣಸ್ವಾಮಿ ಐಯ್ಯರ್‌ರವರು The Shiva Samhita ಶ್ರೀ ಚಂದ್ರ ವಿದ್ಯಾರ್ಣವ ಎಂಬ ಗ್ರಂಥವನ್ನು ಸಂಸ್ಕೃತ ಗ್ರಂಥಗಳಿಂದ ತರ್ಜುಮೆ ಮಾಡಿದ್ದಾರೆ. ಈ ಗ್ರಂಥಗಳೆಲ್ಲವೂ ಚಕ್ರಗಳ ವಿಷಯವಾಗಿ ವಿಪುಲವಾದ ವರ್ಣನೆಯನ್ನು ಒದಗಿಸುತ್ತವೆ. ಅವಲಾನ್‌ರವರು ತಮ್ಮ ಪುಸ್ತಕದಲ್ಲಿ ಅತ್ಯುತ್ತಮ ರೀತಿಯಲ್ಲಿ ಚಕ್ರಗಳ ಬಣ್ಣಗಳ ಚಿತ್ರಗಳನ್ನು ಪ್ರಕಟಿಸಿರುತ್ತಾರೆ. ಓದುಗರಿಗೆ ಪ್ರಯೋಜನವಾಗಲಿ ಎಂಬ ದೃಷ್ಟಿಯಿಂದ ಮೇಲ್ಕಂಡ ಗ್ರಂಥಗಳ ವಿಷಯವನ್ನು ಸಂಗ್ರಹವಾಗಿ ಬರೆದಿರುತ್ತೇನೆ.

ಹಿಂದೂ ಸಂಸ್ಕೃತಿ ಪ್ರಕಾರ ಚಕ್ರಗಳು

ಸಂಸ್ಕೃತ ಗ್ರಂಥಗಳಲ್ಲಿ ನಮೂದಿಸಿರುವ ಚಕ್ರಗಳು ನಾನು ಈ ಗ್ರಂಥದಲ್ಲಿ ನಮೂದಿಸಿರುವಂತೆಯೇ ಇರುತ್ತವೆ. ಸ್ವಾಧಿಷ್ಠಾನ ಚಕ್ರವನ್ನು ಗುಲ್ಮಕ್ಕೆ ಸಂಬಂಧಪಟ್ಟಂತೆ ಬರೆದಿರುತ್ತೇನೆ- ಹಿಂದೂ ಗ್ರಂಥಗಳಲ್ಲಿ ಚಕ್ರಗಳ ಎಸಳುಗಳ ವಿಷಯವಾಗಿ ವ್ಯತ್ಯಾಸ ಕಂಡು ಬರುತ್ತದೆ. ಅಲ್ಲದೆ ತಲೆಯ ಮೇಲಿರುವ ಚಕ್ರವನ್ನು ಸಹಸ್ರಾರ ಪದ್ಮ ಎಂದು ಕರೆದಿದ್ದಾಗ್ಲೂ ಚಕ್ರಗಳ ಪಟ್ಟಿಗೆ ಸೇರಿಸಿರುವುದಿಲ್ಲ. ಆದರೆ ಅದರ ಮಧ್ಯೆ ಎದ್ದು ಕಾಣುವ ದ್ವಾದಶ ದಳವನ್ನು ಒಪ್ಪಿಕೊಳ್ಳುತ್ತಾರೆ. ಹುಬ್ಬು ಮಧ್ಯೆ ಇರುವ ಚಕ್ರದಲ್ಲಿ ಎರಡು ದೊಡ್ಡ ವಿಭಾಗಗಳನ್ನು ಮಾತ್ರ ನಮೂದಿಸಿರುತ್ತಾರೆ- ಆದರೆ 92 ಎಸಳುಗಳನ್ನು ಎತ್ತಿ ಬರೆದಿಲ್ಲ.

ಚಕ್ರಗಳ ಎಸಳುಗಳ ಸಂಖ್ಯೆ ಅಷ್ಟು ಮುಖ್ಯವಲ್ಲ. ಉದಾಹರಣೆಗಾಗಿ, ಯೋಗ ಕುಂಡಲಿನಿ ಉಪನಿಷತ್ತಿನಲ್ಲಿ ಹೃದಯ ಚಕ್ರದಲ್ಲಿ 12 ದಳಗಳಿಗೆ ಬದಲಾಗಿ 16 ದಳಗಳನ್ನು ನಮೂದಿಸಲಾಗಿದೆ. ಧ್ಯಾನಬಿಂದು ಮತ್ತು ಷಾಂಡಿಲ್ಯ ಉಪನಿಷತ್ತುಗಳಲ್ಲಿ ಹೊಕ್ಕಳು ಚಕ್ರದಲ್ಲಿರುವ ಹತ್ತು ಎಸಳುಗಳಿಗೆ ಬದಲಾಗಿ 12 ದಳಗಳನ್ನು ನಮೂದಿಸಿದೆ. ಅನೇಕ ಹಿಂದೂ ಗ್ರಂಥಗಳು ಹೃದಯದ ಕೆಳಗಿರುವ ಮತ್ತೊಂದು ಚಕ್ರವನ್ನು ಮತ್ತು ಭ್ರೂಮಧ್ಯ ಚಕ್ರಕ್ಕೂ ಶಿಖರ ಪ್ರಾಯವಾದ ಸಹಸ್ರಾರ ಚಕ್ರಕ್ಕೂ ಮಧ್ಯೆ ಅನೇಕ ಕೇಂದ್ರಗಳನ್ನು ನಮೂದಿಸಿವೆ. ಧ್ಯಾನಬಿಂದು ಉಪನಿಷತ್ತು ಹೃದಯ ಚಕ್ರಕ್ಕೆ ಎಂಟು ದಳಗಳಿರುವಂತೆ ನಮೂದಿಸಲಾಗಿದೆ. ಬಹುಶಃ ಇದು ಧ್ಯಾನದಲ್ಲಿ ಉಪಯೋಗವಾಗುವ ಹೃದಯ ಚಕ್ರದ ಕೆಳಗಿನ ಮತ್ತೊಂದು ಚಕ್ರವಿರಬಹುದು. ದಳಗಳ ಬಣ್ಣಗಳಲ್ಲೂ ಕೆಲವು ಭಿನ್ನತೆಗಳಿರುತ್ತವೆ.

ಮೇಲ್ಕಂಡ ವ್ಯತ್ಯಾಸಗಳು ಇರುವುದು ಸ್ವಾಭಾವಿಕ, ಏಕೆಂದರೆ ಭಿನ್ನ ಭಿನ್ನ ಜನಾಂಗಗಳಿಗೆ ಸೇರಿದ ವ್ಯಕ್ತಿಗಳಲ್ಲಿನ ಚಕ್ರಗಳ ಬಣ್ಣಗಳು ಭಿನ್ನ ಭಿನ್ನವಾಗಿರಬಹುದು ಅಲ್ಲದೆ ಪರಿಶೋಧಕರ ದೃಷ್ಟಿಯಲ್ಲೂ ಭಿನ್ನತೆಯಿರಲು ಸಾಧ್ಯ.

ಈ ಗ್ರಂಥದ ಒಂದನೆಯ ಅಧ್ಯಾಯದಲ್ಲಿ ನಮೂದಿಸಿರುವ ಚಕ್ರಗಳ ಬಣ್ಣಗಳು ಮತ್ತು ಎಸಳುಗಳನ್ನೂ ತುಂಬ ಜಾಗರೂಕತೆಯಿಂದ ಪರಿಶೀಲಿಸಿ ಬರೆದಿದೆ.

ಕಮಲ ದಳಗಳ ಬಣ್ಣಗಳ ಪಟ್ಟಿ

ಚಕ್ರ	ನಮ್ಮ ಅವಲೋಕನ	ಷಟ್‌ಚಕ್ರ ನಿರೂಪಣ	ಶಿವ ಸಂಹಿತಾ	ಗರುಡ ಪುರಾಣ
1.	ಜ್ವಾಲಾ ಕಿತ್ತಳೆ ಕೆಂಪು	ಕೆಂಪು	ಕೆಂಪು	...
2.	ಉಜ್ವಲ ಸೂರ್ಯನಂತೆ	ಕುಂಕುಮ ಕೆಂಪು	ಕುಂಕುಮ ಕೆಂಪು	ಸೂರ್ಯನಂತೆ
3.	ವಿವಿಧ ಕೆಂಪುಗಳು ಮತ್ತು ಹಸುರುಗಳು	ನೀಲಿ	ಸ್ವರ್ಣ	ಕೆಂಪು
4.	ಸ್ವರ್ಣ	ಕುಂಕುಮ ಕೆಂಪು	ಗಾಢಕೆಂಪು	ಸ್ವರ್ಣ
5.	ನೀಲಿ, ಬೆಳ್ಳಿಯ ಮಿನುಗು	ಹೊಗೇ ನೇರಳೆ	ಪ್ರಕಾಶಮಾನ ಸ್ವರ್ಣ	ಚಂದ್ರನಂತೆ
6.	ಹಳದಿ ಮತ್ತು ನೇರಳೆ	ಬಿಳಿ	ಬಿಳಿ	ಕೆಂಪು

ಹಿಂದೂ ಸಂಸ್ಕೃತಿ ಪ್ರಕಾರ ಯೋಗಿಗಳು ತಮ್ಮ ಶಿಷ್ಯರುಗಳಿಗಾಗಿ ಬರೆದಿರುವ ಚಕ್ರಗಳು ಸಾಂಕೇತಿಕ ರೂಪವುಳ್ಳವು. ಪ್ರತಿಯೊಂದು ಚಕ್ರದ ಬಣ್ಣ ಮತ್ತು ಎಸಳುಗಳು ಮಾತ್ರ ಕರಾರುವಾಕ್ಕಾಗಿ ಸೂಚಿಸಲ್ಪಟ್ಟಿರುತ್ತವೆ.- ಆದರೆ ಅವುಗಳು ಇದ್ದಂತೆ ಇದ್ದ ಹಾಗೆ ರೂಪಿಸಿಲ್ಲ. ಈ ಚಕ್ರಗಳ ಮಧ್ಯೆ ಪ್ರತಿಯೊಂದರಲ್ಲೂ ಒಂದು ರೇಖಾಗಣಿತದ ಆಕೃತಿಯಿರುತ್ತದೆ. ಮತ್ತು ಸಂಸ್ಕೃತ ಅಕ್ಷರ- ಒಂದು ಪಶು ಎರಡು ದೇವತೆಗಳ ರೂಪಗಳು (ಒಂದು ಗಂಡು ಒಂದು ಹೆಣ್ಣು) ಇರುತ್ತವೆ.

ಚಕ್ರಗಳ ರೂಪ ರೇಖೆಗಳು

ಕುಂಡಲಿನಿ ಅಥವಾ ಲಯಯೋಗದ ಉದ್ದೇಶಗಳು ಒಂದೇ ಆಗಿರುತ್ತವೆ. ಅದೇನೆಂದರೆ, ಜೀವಾತ್ಮನನ್ನು ಪರಮಾತ್ಮನಲ್ಲಿ ಒಂದು ಮಾಡವುದೇ ಅದು. ಈ ಸಿದ್ಧಿಗಾಗಿ ಮೂರು ವಿಧವಾದ ಪ್ರಯತ್ನಗಳು ಅವಶ್ಯಕ:- 1) ಪ್ರೇಮ 2) ಯೋಚನೆ 3) ಕೆಲಸಕ್ಕೆ ಸಂಬಂಧಪಟ್ಟುವು ಯಾವುದಾದರೂ ಒಂದು ನಿರ್ದಿಷ್ಟವಾದ ಯೋಗದಲ್ಲಿ ಇಚ್ಛಾಶಕ್ತಿಯನ್ನು ವಿಶೇಷವಾಗಿ ಪ್ರಯೋಗ ಮಾಡತಕ್ಕ ಅವಶ್ಯಕತೆ ಇದ್ದಾಗ್ಗೂ (ಯೋಗ ಸೂತ್ರಗಳ ಬೋಧೆ ಪ್ರಕಾರ), ಮತ್ತೊಂದರಲ್ಲಿ ಪ್ರೇಮವನ್ನು ಬಹು ಮುಖ್ಯವಾಗಿ ಅನುಷ್ಠಾನ ಮಾಡಬೇಕಾಗುತ್ತದೆ. (ಶ್ರೀ ಕೃಷ್ಣನು ಅರ್ಜುನನಿಗೆ ಕೊಟ್ಟಿರುವ ಭಗವದ್ಗೀತೆ ಬೋಧೆ ಪ್ರಕಾರ). ಹೀಗಿದ್ದಾಗ್ಗೂ ಮೆಲ್ಕಂಡ ಮೂರು ಮಾರ್ಗಗಳಲ್ಲೂ ಅನುಷ್ಠಾನ ಮಾಡಿ ಸಿದ್ಧಿ ಪಡೆಯಬೇಕಾಗಿರುತ್ತದೆ. ಪತಂಜಲಿ ಋಷಿಗಳು ಯೋಗದ ಪ್ರಾರಂಭದಲ್ಲಿ ಆತ್ಮ ಪರಿಶುದ್ಧತೆಗೆ ಸಂಬಂಧಪಟ್ಟ ತತ್ವವನ್ನು ಭೋಧಿಸಿರುತ್ತಾರೆ. ಅಲ್ಲದೆ ಆದಿಯಿಂದ ಅಂತ್ಯದವರೆಗೂ ಈಶ್ವರ ಪ್ರಣಿಧಾನ (ಅನನ್ಯ ಭಕ್ತಿ) ವನ್ನು ಅನುಷ್ಠಿಸಬೇಕಾಗುತ್ತದೆ. ಹೀಗೆಯೇ ಶ್ರೀಕೃಷ್ಣನು ಜ್ಞಾನವು ಅತ್ಯಂತ ಮುಖ್ಯವಾದ ಸಾಧನವೆಂದು ಒತ್ತಿ ಹೇಳುತ್ತಾನೆ. ಏಕೆಂದರೆ ಸೇವಾ ಕಾರ್ಯಕ್ಕೆ ಅದರ ಬೆಳಕು ಅತ್ಯಾವಶ್ಯಕವಾದುದು. ಸಾಧಕನು ಅರ್ಪಿಸಬೇಕಾದವುಗಳಲ್ಲಿ ಸೇವೆಯು ಅತ್ಯಂತ ಮುಖ್ಯವಾದುದು. ಅದನ್ನು ಅನುಷ್ಠಾನದಿಂದಲೂ ಭಕ್ತಿ ಮತ್ತು ವಿಮರ್ಶಾತ್ಮಕವಾದ ಪ್ರಯತ್ನದಿಂದಲೂ ಕಲಿಯುಬಹುದು. ಶ್ರೀ ಕೃಷ್ಣನು ಉಪಸಂಹಾರ ಮಾಡುತ್ತಾ ಹೇಳುವುದೇನೆಂದರೆ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡಿರತಕ್ಕ ಜ್ಞಾನಿಗಳು ನಿನಗೆ ಅನುಭವ ಜ್ಞಾನವನ್ನು ಬೋಧಿಸಬಲ್ಲರು- ''ಪರಮ ಗುರು ಚರಣ ಸನ್ನಿಧಿ'' ಎಂಬ ಆಧುನಿಕ ಬೋಧೆಯಲ್ಲೂ ವಿವೇಕ ವೈರಾಗ್ಯ-ಸಚ್ಚರಿತ್ರೆ, ಮತ್ತು ಗುರು- ಭಗವಂತ ಮತ್ತು ಮಾನವರಿಗಾಗಿ ಪ್ರೇಮ ಭಾವನೆಯನ್ನು ಬೆಳೆಸಿಕೊಳ್ಳಬೇಕೆಂಬ ಬೋಧೆಯಿರುತ್ತದೆ.



ಚಿತ್ರ-9

ಹಿಂದೂ ಯೋಗಿಗಳ ಬೋಧೆ ಪ್ರಕಾರ ಕುಂಡಲಿನಿ ಯೋಗವನ್ನು ಅನುಷ್ಠಾನ ಮಾಡಬೇಕೆಂಬ ಸಾಧಕನು ಮೇಲ್ಕಂಡಂತೆ ಪ್ರೇಮ-ಭಕ್ತಿ ಮತ್ತು ವಿವೇಚನೆಗಳನ್ನು ಹೃತ್ಪೂರ್ವಕವಾಗಿ ಮೈಗೂಡಿಸಿಕೊಳ್ಳಬೇಕಾಗುತ್ತದೆ. ಪ್ರಪಂಚದ ಮತ್ತು ಮಾನವ ಸ್ವಭಾವಗಳನ್ನು ಥಿಯಾಸಫಿ ಬೆಳಕಿನಲ್ಲಿ ಅರ್ಥಮಾಡಿಕೊಳ್ಳಬೇಕು. ಉನ್ನತ ಮಟ್ಟದ ಭಕ್ತಿ ಭಾವನೆಯನ್ನು ಮೈಗೂಡಿಸಿಕೊಂಡ ನಂತರ ಕುಂಡಲಿನಿ ಶಕ್ತಿಯನ್ನು ಉತ್ಥಾಪನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು . ಅಲ್ಲದೆ ಥಿಯಾಸಫಿ ದಿವ್ಯಜ್ಞಾನದ ಪರಿಷ್ಕಾರವಾದ ತಿಳುವಳಿಕೆ ಅತ್ಯಾವಶ್ಯಕ.

ಹೃದಯ ಚಕ್ರ

ಈ ಹೃದಯ ಚಕ್ರದ ಸಂಕೇತವನ್ನು ಪರಿಪೂರ್ಣವಾಗಿ ವಿವರಿಸಿ ತಿಳಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಂದು ಸಂಕೇತಕ್ಕೂ ಬಹು ವಿಧವಾದ ವಿವರಣೆಗಳಿರುತ್ತವೆ. ಹಿಂದೂ ಯೋಗಿಗಳು ತಮ್ಮ ಶಿಷ್ಯರಾಗಿ ಬಂದು ತಮ್ಮ ನೇತೃತ್ವದಲ್ಲಿ ಯೋಗಾಭ್ಯಾಸವನ್ನು ಮಾಡಲು ಬರುವಂತಹವರಿಗೆ ಮಾತ್ರ ಮಾಗದರ್ಶನ ನೀಡಬಲ್ಲರು. ಉಳಿದವರಿಗೆ ಅವರು ಆ ರೀತಿ ಮಾಡಲು ಇಷ್ಟಪಡುವುದಿಲ್ಲ.

''ಷಟ್ ಚಕ್ರ ನಿರೂಪಣ'' ಎಂಬ ಅವಲಾನ್ (Avalon) ರವರ ಗ್ರಂಥದಿಂದ ಹೃದಯ ಚಕ್ರದ ವಿಷಯವಾಗಿ ಮುಂದಿನ ವಿವರಣೆಯನ್ನು ಕೊಡಲಾಗಿದೆ.

ಹೃದಯ ಚಕ್ರವು ಬಂಧೂಕ ಪುಷ್ಪದ ಬಣ್ಣದ್ದು (ಕೆಂಪು) ಮತ್ತು ಅದರ ದಳಗಳಲ್ಲಿ ಪ್ರತಿಯೊಂದರಲ್ಲೂ 'ಕ' ದಿಂದ 'ತ' ವರೆಗೆ ಅಕ್ಷರಗಳಿದ್ದು, ಆ ಪ್ರತಿಯೊಂದು ಅಕ್ಷರದ ಮೇಲೂ ಒಂದು ಚುಕ್ಕೆ (ಬಿಂದು) ಯಿರುತ್ತದೆ.ಇದು (Vermillion) ಕುಂಕುಮ ಬಣ್ಣದ್ದು. ಅದರ ಬೀಜಕೋಶದಲ್ಲಿ ವಾಯುಮಂಡಲದ ಆರು ಮೂಲೆಗಳ ಆಕೃತಿಯಿರುತ್ತದೆ. ಅದರ ಮೇಲೆ ಸೂರ್ಯಮಂಡಲ ತ್ರಿಕೋನರೂಪದ್ದು ತುಂಬ ಪ್ರಕಾಶಮಾನವಾದುದು. ಅದರ ಮೇಲೆ ವಾಯು ಬೀಜ ಹೊಂಗೆ ಬಣ್ಣದ್ದು, ಕತ್ತಲೆ ಹಿನ್ನೆಲೆಯ ಮೇಲೆ ನಾಲ್ಕು ಭುಜಗಳುಳ್ಳದು. ಅಂಕುಶವನ್ನು ಹಿಡಿದುಕೊಂಡಿದೆ. ಆತನ ತೊಡೆಯ ಮೇಲೆ ಮೂರು ಕಣ್ಣಿನ ಈಶನು ಕುಳಿತಿರುತ್ತಾನೆ.- ಹಂಸ ಭಾಸದಂತೆ ಆತನ ಎರಡು ತೋಳುಗಳೂ ವರಗಳನ್ನು ಕೊಡುವಂತೆ ಚಾಚಿಕೊಂಡಿರುತ್ತವೆ. ಈ ಕಮಲದ ಆವರಣದಲ್ಲಿ ಕಾಕಿನಿಯೆಂಬ ಶಕ್ತಿ ಕುಳಿತಿರುತ್ತಾಳೆ-ಆಕೆಗೆ ನಾಲಕ್ಕು ತೋಳುಗಳು-ಪಾಶ ಕಪಾಲಗಳನ್ನು ಹಿಡಿದುಕೊಂಡಿರುತ್ತಾಳೆ. ವರವನ್ನು ಕೊಡುವಂತೆಯೂ ಅಭಯವನ್ನುಂಟು ಮಾಡುವಂತೆಯೂ ಚಿಹ್ನೆಗಳು ಕಾಣುತ್ತವೆ. ಆಕೆಯ ಮೈ ಬಣ್ಣ ಸ್ವರ್ಣ ವರ್ಣ, ಹಳದಿ ಉಡುಪು, ಪ್ರತಿಯೊಂದು ವಿಧವಾದ ಒಡವೆಯಿರುತ್ತದೆ. ಮೂಳೆಗಳ ಮಾಲೆ. ಆಕೆಯ ಹೃದಯವು ಅಮೃತಮಯವಾದುದು. ತ್ರಿಕೋಣದ ಮಧ್ಯದಲ್ಲಿ ವಾನಲಿಂಗ ರೂಪದಲ್ಲಿ ಶಿವನಿರುತ್ತಾನೆ. ಆತನ ತಲೆಯಲ್ಲಿ ಚಂದ್ರ ಮತ್ತು ತಲೆಯ ಮೇಲೆ ಬಿಂದು. ಆತನು ಸ್ವರ್ಣವರ್ಣದವನು. ಆತನು ಆನಂದ ಪುಳಕಿತನಾಗಿರುತ್ತಾನೆ. ಆತನ ಕೆಳಗೆ ಜೀವಾತ್ಮನಿರುತ್ತಾನೆ. (ಹಂಸನಂತೆ) ದೀಪವು ಮೇಲ್ಮುಖ ವಾಗುತ್ತಿರುವಂತೆ-ಪದ್ಮದ ಕೆಳಗಡೆ ಏಳು ಕೆಂಪು ಬಣ್ಣದ ಎಸಳುಗಳುಳ್ಳ ಕಮಲವಿರುತ್ತದೆ. ಈ ಕೆಂಪು ಕಮಲದಲ್ಲಿ ಕಲ್ಪವೃಕ್ಷ-ರತ್ನಖಚಿತ ಬಲಿಪೀಠವಿರುತ್ತದೆ. ಇದಕ್ಕೆ ಬಾವುಟಗಳ ಅಲಂಕಾರವಿರುತ್ತದೆ. ಇದು ಮಾನಸಿಕ ಆರಾಧನೆಯ ಸ್ಥಳ.

ಎಸಳುಗಳು ಮತ್ತು ಅಕ್ಷರಗಳು

ಈ ಚಕ್ರ ಪದ್ಮಗಳ ಎಸಳುಗಳು ಈಗಾಗಲೇ ವಿವರಿಸಿರುವಂತೆ ಪ್ರಪ್ರಥಮ ಶಕ್ತಿ ವಿಶೇಷಗಳಿಂದ ರೂಪಿಸಲ್ಪಟ್ಟಿವೆ. ಈ ಶಕ್ತಿಗಳು ಆ ಎಸಳುಗಳ ಮೂಲಕ ಶರೀರದೊಳಕ್ಕೆ ಪ್ರವಹಿಸುತ್ತವೆ. ಯಾವುದಾದರೂ ಒಂದು ನಿರ್ದಿಷ್ಟವಾದ ಚಕ್ರದ ಮೂಲಕ ಪ್ರವಹಿಸತಕ್ಕ ಶಕ್ತಿ ವಿಶೇಷದ ಪ್ರಭಾವದಿಂದ ಅದರ ಎಸಳುಗಳ ಸಂಖ್ಯೆಯು ನಿರ್ಧರಿಸಲ್ಪಡುತ್ತದೆ. ಹೃದಯ ಚಕ್ರಕ್ಕೆ ಹನ್ನೆರಡು ಎಸಳುಗಳಿರುತ್ತವೆ. ಇವುಗಳಿಗೆ ಸಂಬಂಧಪಟ್ಟ ಅಕ್ಷರಗಳು ಆ ಚಕ್ರದ ಮೂಲಕ ಹರಿಯುವ ಶಕ್ತಿಯ ಪ್ರಮಾಣವನ್ನು ನಿರ್ಧರಿಸುತ್ತವೆ. ಇಲ್ಲಿ ಕೊಟ್ಟಿರುವ ಅಕ್ಷರಗಳು 'ಕ' ಅಕ್ಷರದಿಂದ 'ತ' ವರೆಗೆ ಕ್ರಮವಾಗಿ ಎಣಿಸಲ್ಪಟ್ಟಿರುತ್ತವೆ. ಹೀಗೆಯೇ ಎಲ್ಲ ಚಕ್ರಗಳಿಗೂ ಸಂಬಂಧಪಟ್ಟಂತೆ 'ಅ' ಲಾಗಾಯಿತು 'ಕ್ಷ' ವರೆಗೆ ಐವತ್ತು ಅಕ್ಷರಗಳು ಎಲ್ಲ ಚಕ್ರಗಳ ಐವತ್ತು ಎಸಳುಗಳಿಗೆ ಹಂಚಲ್ಪಟ್ಟಿರುತ್ತವೆ. ಮಾನವನು ಭಾಷೆಯ ಮೂಲಕ ಉಚ್ಚರಿಸಲ್ಪಡುವ ಶಬ್ದಗಳಿಗೆಲ್ಲಾ ಓಂ ಶಬ್ದವು ಮೂಲಭೂತವಾಗಿರುತ್ತದೆ. ಓಂ-ಎಂಬಶಬ್ದವು ಅ-ಉ-ಮ-ಕಾರಗಳ ಸಮುಚ್ಚಯ. 'ಅ' ಕಾರವು ಗಂಟಲಿನ ಮೂಲಕವೂ 'ಉ' ಕಾರವು ಬಾಯಿಯನ್ನೇ ವ್ಯಾಪಿಸಿಕೊಂಡು ಮತ್ತು 'ಮ' ಕಾರವು ತುಟಿಗಳ ಮೂಲಕವೂ ಉಚ್ಚರಿಸಲ್ಪಡುತ್ತವೆ. - ಈ ಶಬ್ದವು ಎಲ್ಲ ಸೃಷ್ಟಾತ್ಮಕವಾದ ಶಬ್ದಗಳಿಗೂ ಮೂಲಭೂತವಾದುದು. ಆದುದರಿಂದ ಕೆಲವು ಶಕ್ತಿ ವಿಶೇಷಗಳನ್ನು ಪ್ರತಿನಿಧಿಸುತ್ತದೆ. ಪ್ರಪ್ರಥಮ 16 ಸ್ವರಗಳು ಕಂಠ ಚಕ್ರಕ್ಕೂ 'ಡ' ಇಂದ 'ಫ' ವರೆಗೆ ಹೊಕ್ಕುಳ ಚಕ್ರಕ್ಕೂ 'ಬ' ಇಂದ 'ಲ' ವರೆಗೆ ಗುಲ್ಮಾಚಕ್ರಕ್ಕೂ 'ವ' ಇಂದ 'ಸ' ವರೆಗೆ ಮೂಲಾಧಾರ ಚಕ್ರಕ್ಕೂ ಅನ್ವಯವಾಗುತ್ತವೆ, 'ಹ' ಇಂದ 'ಕ್ಷ' ವರೆಗೆ ಆಜ್ಞಾ ಚಕ್ರಕ್ಕೂ ಅನ್ವಯವಾಗುತ್ತವೆ. ಸಹಸ್ರಾರ ಚಕ್ರವು ನಮ್ಮ ಅಕ್ಷರ ಮಾಲಿಕೆಯನ್ನು ಇಪ್ಪತ್ತು ಸಾರಿ ತೆಗೆದುಕೊಳ್ಳುತ್ತದೆ.

ಈ ಅಕ್ಷರಗಳನ್ನು ಚಕ್ರಗಳಿಗೆ ಅನ್ವಯ ಮಾಡಿದ ಉದ್ದೇಶ ಗೊತ್ತಿಲ್ಲ. ಆದರೆ ಚಕ್ರಗಳನ್ನು ಹತ್ತಿಕೊಂಡು ಹೋದ ಹಾಗೆಲ್ಲ ಶಕ್ತಿ ವಿಶೇಷಗಳು ಅಧಿಕವಾಗುತ್ತ ಹೋಗುತ್ತವೆ. ಲಯ ಯೋಗದವರಿಗೆ ಈ ವಿಶೇಷ ಶಕ್ತಿಗಳು ಗೊತ್ತಿದ್ದಿರಬಹುದು. ಆದುದರಿಂದ ಅಕ್ಷರಗಳನ್ನೆಲ್ಲ ಆ ಅಧಿಕವಾಗುತ್ತಿರುವ ಶಕ್ತಿಗಳ ಸಂಕೇತ ರೂಪವಾಗಿ ಪ್ರಯೋಗ ಮಾಡಿರಬಹುದು.

ಈ ಅಕ್ಷರಗಳ ಮೇಲೆ ಧ್ಯಾನ ಮಾಡತಕ್ಕ ಅನುಷ್ಠಾನಕ್ಕೆ ಅಂತರಂಗಿಕ ಶಬ್ದ (ಇದು ಹೊರಗಿನ ಶಬ್ದವನ್ನು ಕೊಂದು ಹಾಕುತ್ತೆಂಬದಾಗಿ ಮೌನವಾಣಿ ಗ್ರಂಥದಲ್ಲಿ ಹೇಳಿದೆ) ಇವನ್ನು ಕಂಡುಕೊಳ್ಳುವುದೇ ಉದ್ದೇಶವಾಗಿರಬೇಕು. ಹಿಂದೂ ಸಂಸ್ಕೃತಿ ಪ್ರಕಾರ ಧ್ಯಾನದ ಉದ್ದೇಶ ತಿಳಿದಿರುವ ನಾವು ಉತ್ಪತ್ತಿ ಮಾಡುವ ಶಬ್ದದಿಂದ ಆ ಶಬ್ದಗಳ ಅಂತರಂಗಿಕ ರಹಸ್ಯಗುಣ ಮತ್ತು ಶಕ್ತಿ ವಿಶೇಷವನ್ನು ಕಂಡುಕೊಳ್ಳುವುದೇ ಆಗಿದೆ. ಈ ರೀತಿ ಮಾಡುವುದರ

ಮೂಲಕ ಸಾಧಕನು ಲೋಕಾಂತರ ಪ್ರಜ್ಞೆ ಮಟ್ಟಕ್ಕೆ ಹತ್ತಲು ಸಹಾಯವಾಗುತ್ತದೆ. ಭಗವಂತನು ಅಕ್ಷರಮಾಲೆಯನ್ನು ಉಚ್ಚರಿಸುತ್ತ ಲೋಕಗಳನ್ನು ಸೃಷ್ಟಿಸಿದನೆಂದು ಭಾವಿಸಬಹುದು. ಈ ದೃಷ್ಟಿಯಿಂದ ನಮ್ಮ ಮಾತು ಕೇವಲ ಕೆಳಗಿನ ದರ್ಜೆಯದಾಗುತ್ತದೆ. ಈ ಲಯ ಯೋಗದಲ್ಲಿ ಸಾಧಕನಿಗೆ ಹೊರಗಿನಿಂದ ಒಳಕ್ಕೆ ಹತ್ತಿಕೊಂಡು ಹೋಗಿ ಭಗವಂತನನ್ನು ಸಮೀಪಿಸತಕ್ಕ ಉದ್ದೇಶವಿರುತ್ತದೆ. ಮಾರ್ಗಜ್ಯೋತಿಯಲ್ಲಿ ಸಾಧಕರಿಗೆ ಜೀವಿತದ ಗಾನವನ್ನು ಆಲಿಸಿ ಕೇಳುವಂತೆಯೂ ಆ ಮೂಲಕ ಆದರೆ ಅಂತರಂಗಿಕವಾಗಿ ಶೃತಿಯನ್ನು ಅರ್ಥ ಮಾಡಿಕೊಳ್ಳುವಂತೆಯೂ ಕರೆಯಿರುತ್ತದೆ.

ಮಂಡಲಗಳು

ಹೃದಯ ಚಕ್ರದಲ್ಲಿ ವೃತ್ತದ ಮಧ್ಯೆಯಿರುವ ಆರು ಮೂಲೆಯ ಆಕೃತಿ-ಊರ್ಧ್ವಮಯವಿರುದ್ಧ ಮುಖವಾದ ತ್ರಿಕೋಣ ದ್ವಂದ್ವವಿರುತ್ತದೆ ಈ ಚಿಹ್ನೆಯು ವಾಯು ತತ್ತ್ವವನ್ನು ಸೂಚಿಸುತ್ತದೆ. ಪ್ರತಿಯೊಂದು ಚಕ್ರವೂ ಒಂದೊಂದು ಭೌತಿಕ ತತ್ವ ಪೃಥ್ವಿ-ಅಪ್ಪು-ತೇಜಸ್ಸು-ವಾಯು ಮತ್ತು ಆಕಾಶ ಮತ್ತು ಮನಸ್ತತ್ವಕ್ಕೆ ಸಂಬಂಧ ಪಟ್ಟಿರುತ್ತದೆ. ಈ ತತ್ವಗಳನ್ನು ಪ್ರಕೃತಿ ತತ್ವದ ಸೂಕ್ಷ್ಮತರವಾದ ಭಾಗಗಳೆಂದು ಪರಿಗಣಿಸಬೇಕು. ಉದಾಹರಣೆಗಾಗಿ, ಘನ ದ್ರವ ಅಗ್ನಿ ವಾಯು ತತ್ವ ಮತ್ತು ಆಕಾಶ ತತ್ವ ಅಥವಾ ಸ್ಥೂಲ ಕಾಮ ಮಾನಸಿಕ ಮೊದಲಾದ ಲೋಕಗಳಂತೆ ಇರುತ್ತವೆಯೆಂದು ತಿಳಿಯಬೇಕು. ಈ ತತ್ವಗಳನ್ನು ಸಾಂಕೇತಿಕ ಲಕ್ಷಣಗಳುಳ್ಳ ಯಂತ್ರಗಳು ಅಥವಾ ಆಕೃತಿಗಳಂತೆ ಪರಿಗಣಿಸಬೇಕು. ''ಷಟ್ ಚಕ್ರಗಳ ನಿರೂಪಣ'' ಗ್ರಂಥದಲ್ಲಿ ಈ ಮುಂದಿನಂತೆ ವಿಂಗಡಿಸಿ ಪಟ್ಟಿ ಮಾಡಿದೆ:

ಚಕ್ರ	ತತ್ವ	ಆಕೃತಿ	ಬಣ್ಣ
1	ಪೃಥ್ವಿ	ಚೌಕ	ಹಳದಿ
2	ಅಪ್ಪು	ಶಶಿ	ಬಿಳಿಯದು
3	ಅಗ್ನಿ	ತ್ರಿಕೋಣ	ಪ್ರಕಾಶಮಾನವಾದ ಕೆಂಪು
4	ವಾಯು	ಎರಡು ಭೇದಿತ ತ್ರಿಕೋಣಗಳು ಪರಸ್ಪರ ತಲೆಕೆಳಗಾದುವು	ಹೊಗೆಯ ಬಣ್ಣ
5	ಆಕಾಶ	ವೃತ್ತ	ಬಿಳಿಯದು
6	ಮನಸ್ಸು		ಬಿಳಿಯದು

ಕೆಲವು ಸಂದರ್ಭಗಳಲ್ಲಿ ಮೇಲಿನ ಪಟ್ಟಿಯಲ್ಲಿ ನಮೂದಿಸಿರುವ ಹಳದಿ ಬಣ್ಣಕ್ಕೆ ಬದಲಾಗಿ ಕಿತ್ತಲೆ ಕೆಂಪು ಬಣ್ಣವನ್ನು ಸೂಚಿಸಿದೆ. ಹೊಗೆಯ ಬಣ್ಣಕ್ಕೆ ಬದಲಾಗಿ ನೀಲಿ ಬಣ್ಣವನ್ನು ಮತ್ತು ಐದನೆಯ ಚಕ್ರದ ಬಿಳಿ ಬಣ್ಣಕ್ಕೆ ಬದಲಾಗಿ ಕಪ್ಪು ಬಣ್ಣವನ್ನು (ಈ ಕಪ್ಪು ನೀಲಿ ಬಣ್ಣವನ್ನು ಪ್ರತಿನಿಧಿಸುತ್ತದೆಯೆಂದು ಹೇಳಿದೆ) ಸೂಚಿಸಿರುತ್ತದೆ.

ಓದುಗರಿಗೆ ತತ್ವಗಳಲ್ಲಿ ಮನಸ್ತತ್ವವನ್ನು ಒಂದಾಗಿ ನಮೂದಿಸಿರುವುದು ವಿಲಕ್ಷಣವಾಗಿ ತೋರಬಹುದು. ಆದರೆ ಹಿಂದೂವಿಗೆ ಆ ರೀತಿ ತೋರುವುದಿಲ್ಲ. ಅದನ್ನು ಪ್ರಜ್ಞೆಯ ಉಪಕರಣವನ್ನಾಗಿ ಆತನು ಪರಿಗಣಿಸುತ್ತಾನೆ. ಹಿಂದೂ ಸಂಸ್ಕೃತಿಯಲ್ಲಿ ಉನ್ನತ ಮಟ್ಟದ ಪುರುಷಾತ್ಮನ ದೃಷ್ಟಿಯಿಂದ ಎಲ್ಲವನ್ನೂ ವಿಮರ್ಶಿಸುವ ವಾಡಿಕೆಯುರುತ್ತದೆ. ಭಗವದ್ಗೀತೆಯಲ್ಲಿ ಉದಾಹರಣೆಗಾಗಿ, ಶ್ರೀ ಕೃಷ್ಣನು (7ನೆಯ ಅಧ್ಯಾಯದಲ್ಲಿ) ''ಪೃಥ್ವಿ-ಅಪ್ಪು-ಅಗ್ನಿ-ವಾಯು-ಆಕಾಶ-ಮನಸ್ಸು-ಬುದ್ಧಿ-ಅಹಂಕಾರತತ್ವ : ಇವು ನನ್ನ ಪ್ರಕೃತಿಯ ಎಂಟು ವಿಭಾಗಗಳು'' ಎಂದು ಹೇಳುತ್ತಾನೆ. ಅಲ್ಲಿಂದ ಸ್ವಲ್ಪ ಮುಂದಕ್ಕೆ ಈ ತತ್ವಗಳನ್ನು ತನ್ನ ಕೆಳಮಟ್ಟದ ಅಭಿವ್ಯಕ್ತತೆಗಳೆಂದು ಭಾವಿಸಬೇಕೆಂದು ಹೇಳುತ್ತಾನೆ. ಹಿಂದೆ ಸೂಚಿಸಿದಂತೆ ಈ ತತ್ವಗಳು, ಅವುಗಳಿಗೆ ಸಂಬಂಧಪಟ್ಟ ಪ್ರಜ್ಞೆ ಮಟ್ಟಗಳನ್ನು ಸೂಚಿಸುತ್ತವೆ - ಆದರೆ ಇವುಗಳಿಗೂ ಚಕ್ರಗಳಿಗೂ ಸಂಬಂಧವಿರುವಂತೆ ಕಾಣವುದು. ಆದರೆ ಯೋಗಿಯು ಈ ತತ್ವಗಳನ್ನು ಮತ್ತು ಪ್ರತಿಯೊಂದು ಚಕ್ರದ ಸಂಕೇತವನ್ನು ಕುರಿತು ಧ್ಯಾನ ಮಾಡುವಾಗ ಆತನಿಗೆ ಮೇಲ್ಕಂಡ ತತ್ವಗಳಿಗೆ ಸಂಬಂಧಪಟ್ಟ ಪ್ರಜ್ಞೆ ಅಂತಸ್ತುಗಳು ಜ್ಞಾಪಕಕ್ಕೆ ಬರುತ್ತವೆ. ಅಲ್ಲದೆ ಈ ವಿಧವಾದ ಧ್ಯಾನಕ್ರಮವು ಆತನು ಸಾಧಾರಣವಾಗಿರುವ ಪ್ರಜ್ಞೆ ಮಟ್ಟದಿಂದ ತನ್ನ ಪ್ರಜ್ಞೆ ಕೇಂದ್ರವನ್ನು ಅಂತಸ್ತುವಾರಾಗಿ ಹತ್ತಿಸಿ ಏಳನೆಯ ಅತ್ಯಂತ ಉನ್ನತ ಮಟ್ಟ ಭಗವಚ್ಚೈತನ್ಯದಲ್ಲಿ ಒಂದಾಗಲು ಹವಣಿಸಬಹುದು.

ವಾಸ್ತವವಾಗಿಯೂ ಸಾಧಕನು ಉನ್ನತ ಲೋಕದ ಪ್ರಜ್ಞೆ ಮಟ್ಟಕ್ಕೆ ಹತ್ತಲು ಸಾಧ್ಯವಿಲ್ಲದಿದ್ದಾಗ್ಗೂ ಮೇಲಿನ ಅಂತಸ್ತುಗಳ ಪ್ರಭಾವಗಳನ್ನು ಎಟಕಿಸಿಕೊಳ್ಳುವಷ್ಟರ ಮಟ್ಟಿಗೆ ಸಾಧನೆಯನ್ನು ಮುಂದುವರಿಸಬಹುದು. ಆ ರೀತಿ ಅನುಭವ ಮಾಡಿಕೊಂಡ ಉನ್ನತ ಮಟ್ಟದ ಪ್ರಭಾವವನ್ನು ''ಅಮೃತ'' ದಂತೆ ಪರಿಗಣಿಸಬೇಕಾಗಿದೆ. ಮುಂದೆ ಕುಂಡಲಿನಿ ಉತ್ಥಾಪನೆ ವಿಷಯಕ್ಕೆ ಬಂದಾಗ ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೆಚ್ಚು ವಿವರಗಳನ್ನು ಕೊಡಲಾಗುವುದು.

ಯಂತ್ರಗಳು

ಪಂಡಿತ ರಾಮ ಪ್ರಸಾದ್‌ರವರು ಪ್ರಕೃತಿ ತತ್ವಗಳಿಗೆ ಸಂಬಂಧಪಟ್ಟ ರೇಖಾಕೃತಿ ಅಥವಾ ಯಂತ್ರಗಳ ವಿಷಯವಾಗಿ ವಿಮರ್ಶಾತ್ಮಕವಾದ ಲೇಖನ ಬರೆದಿರುತ್ತಾರೆ. ಅವರ ವಿಮರ್ಶೆಗೆ ಸಂಬಂಧಪಟ್ಟ ಗ್ರಂಥಕ್ಕೆ ಪ್ರಕೃತಿಯ ಸೂಕ್ಷ್ಮ ಶಕ್ತಿಗಳು (Nature's finer

forces) ಎಂಬ ಹೆಸರಿದೆ. ಈ ವಿಷಯವನ್ನು ಸಂಗ್ರಹವಾಗಿ ಇಲ್ಲಿ ಬರೆಯೋಣ. ಘನ ವಸ್ತುಗಳಿಗಿಂತ ಅತೀತವಾದ ಪ್ರಕಾಶಮಾನವಾದ ಅತಿವಾಯು ತತ್ವವಿರುವಂತೆ, ಇದೇ ನಮ್ಮ ಕಣ್ಣಿಗೆ ಬೆಳಕನ್ನು ತಂದು ಕೊಡುವ ಸಾಧನ, ಹೀಗೆಯೇ ಇತರೆ ಇಂದ್ರಿಯಗಳ ಮೂಲಕ ನಮ್ಮ ಪ್ರಜ್ಞೆಗೆ ಬರುವ ವೇದನೆಗಳು ಎಂದರೆ, ವಾಸನೆ-ರುಚಿ-ಸ್ಪರ್ಶ-ಮತ್ತು ಶ್ರವಣ. ಇವುಗಳಿಗೆ ಪ್ರತಿಯೊಂದಕ್ಕೂ ಸಂಬಂಧಪಟ್ಟಂತೆ ಬೇರೆ-ಬೇರೆ ಅತಿವಾಯು ತತ್ವವಿರುತ್ತದೆ. ಇಂದ್ರಿಯಗಳು ಹೊರಗಿನ ವಿಷಯಗಳಿಗೆ ಸಂಬಂಧಪಟ್ಟಂತಹ ವೇದನೆಗಳಿಗೆ ಎಂದರೆ ವಾಸನೆಯು ಘನ ವಸ್ತುವಿಗೆ ಸಂಬಂಧಪಟ್ಟಂತೆ ಚಚ್ಚೌಕ ರೂಪದಲ್ಲೂ ರುಚಿಯು ದ್ರವ ವಸ್ತುವಿಗೆ ಸಂಬಂಧ ಪಟ್ಟಂತೆ ಅರ್ಧಚಂದ್ರಾಕೃತಿ ರೂಪದಲ್ಲೂ ರೂಪವು ಅನಿಲಕ್ಕೆ ಸಂಬಂಧಪಟ್ಟ ತ್ರಿಕೋನ ರೂಪದಲ್ಲೂ ಸ್ಪರ್ಶವು ವಾಯು ತತ್ವಕ್ಕೆ ಸಂಬಂಧಪಟ್ಟಂತೆ ಆರು ಕೋನ ಮೂಲೆಯ ಆಕೃತಿಯಲ್ಲೂ ಶಬ್ದವು ಅತಿವಾಯು ತತ್ವಕ್ಕೆ ಸಂಬಂಧಪಟ್ಟಂತೆ ವೃತ್ತಾಕಾರದಲ್ಲೂ ಅಭಿವ್ಯಕ್ತವಾಗುತ್ತವೆ. ಶಬ್ದೋತ್ಪತ್ತಿಯು ವೃತ್ತಾಕಾರದಲ್ಲಿ ಅಭಿವ್ಯಕ್ತವಾಗುತ್ತದೆ-ಎಂದರೆ ಅದರ ಅಲೆಗಳು ಸುತ್ತಲೂ ಪ್ರಸರಿಸುತ್ತವೆ. ಆದುದರಿಂದ ಇದು ಐದನೆಯ ಚಕ್ರದಲ್ಲಿರುವುದು. ಬೆಳಕಿನ ಅಭಿವ್ಯಕ್ತತೆಯೇ ತ್ರಿಕೋನ ರೂಪದಲ್ಲಿ ಆಗುತ್ತದೆ. ಅದರ ಅಲೆಗಳು ಆಕಾಶದಲ್ಲಿ ಚಲಿಸುತ್ತವೆ. ಇದು ಮೂರನೆಯ ಚಕ್ರದಲ್ಲಿ ಚಲಿಸುತ್ತದೆ. ಆದುದರಿಂದ ಮೂರನೆಯ ಚಕ್ರದಲ್ಲಿರುವದು. ಹೀಗೆಯೇ ಇತರೆ ವೇದನೆಗಳು ಎಂದರೆ ಸ್ಪರ್ಶ-ರುಚಿ ಮತ್ತು ವಾಸನೆ ಇವುಗಳಿಗೆ ಸಂಬಂಧಪಟ್ಟ ಅಭಿವ್ಯಕ್ತತೆಯು ಸ್ಪರ್ಶವು ಆರು ಕೋನಗಳ ಆಕೃತಿಯಲ್ಲಿ ನಾಲ್ಕನೆಯ ಚಕ್ರದಲ್ಲೂ ರುಚಿಯು ಅರ್ಧಚಂದ್ರಾಕೃತಿಯಲ್ಲಿ ಎರಡನೆಯ ಚಕ್ರದಲ್ಲೂ ವಾಸನೆಯು ಚಚ್ಚೌಕ ಆಕೃತಿಯಲ್ಲಿ ಮೊದಲನೆ ಚಕ್ರದಲ್ಲೂ ಅಭಿವ್ಯಕ್ತವಾಗುತ್ತವೆ.

ಪಶುಗಳು

ಜಿಂಕೆಯು ಚುರಾಕಾಗಿ ಓಡುವ ಕಾಲಗಳುಳ್ಳದ್ದು-ಇದು ವಾಯುತತ್ವಕ್ಕೆ ಒಂದು ಸಂಕೇತ ಇದಕ್ಕೆ ಬೀಜಯಂತ್ರವು (ಶಬ್ದ ರೂಪದಲ್ಲಿ ಅಭಿವ್ಯಕ್ತವಾಗುವ ಅದರ ಶಕ್ತಿ) ಯೂಂ ಎಂದು ಯಾಮ್-ಎಂಬ ಶಬ್ದದ ಮೇಲೆ ಬಿಂದುವಿರುತ್ತದೆ. ಇದೇ ದೈವಿಕ ಚೈತನ್ಯ. ತ್ರಿಲೋಚನನಾದ ಈಶನನ್ನು ಈ ಚಕ್ರದಲ್ಲಿ (ಅನಾಹತ) ಆರಾಧಿಸಬೇಕು. ಇತರೆ ಪ್ರಾಣಿಗಳು ಎಂದರೆ ಆನೆ-ಭೂಮಿಗೆ ಸಂಬಂಧಪಟ್ಟುದು ಮೂಲಾಧಾರ ಚಕ್ರ ಮೊಸಳೆ-2ನೆಯ ಚಕ್ರ-ಟಗರು ತುಂಬ ಮೇಲೆ ಜೀಳುವ ಸ್ವಭಾವದ್ದು-3ನೆಯ ಚಕ್ರ, ಯೋಗಿಯು ಮೇಲ್ಕಂಡ ಪಶುಗಳ ಮೇಲೆ ಕುಳಿತಿರುವಂತೆ ಊಹಿಸಿಕೊಂಡು, ಅವುಗಳಿಗೆ ಸಂಬಂಧಪಟ್ಟ ಶಕ್ತಿ ವಿಶೇಷಗಳನ್ನು ಮೈಗೂಡಿಸಿಕೊಳ್ಳುತ್ತಾನೆ.

ದೈವಿಕತೆಗಳು

ಓಂ-ಎಂಬ ದಿವ್ಯ ಮಂತ್ರಕ್ಕೆ ನಾಲಕ್ಕು ಭಾಗಗಳಿರುತ್ತವೆ. ಅ.ಉ.ಮ್ ಮತ್ತು ಅರ್ಧ ಮಾತ್ರೆ ಇದಕ್ಕೆ ಸಂಬಂಧಪಟ್ಟಂತೆ ಮೌನವಾಣಿಯಲ್ಲಿ ಈ ಮುಂದಿನ ವಿವರಣೆಯಿದೆ.

ಅನಂತರ ನೀನು ಮಹತ್ವ ಪೂರ್ಣವಾದ ಪಕ್ಷಿಯ ರೆಕ್ಕೆಗಳ ಮಧ್ಯೆ ವಿಶ್ರಾಂತಿ ಪಡೆದುಕೊ. ಹೌದು ಆ ಪಕ್ಷಿಯು ಹುಟ್ಟಲೂ ಇಲ್ಲ, ಸಾಯುವುದೂ ಇಲ್ಲ. ಅದರ ರೆಕ್ಕೆಗಳ ಮಧ್ಯೆ ವಿಶ್ರಾಂತಿ ಪಡೆಯುವುದು ತುಂಬ ಮಧುರವಾದುದು. ಓಂ-ಎಂಬ ಏಕೈಕ ಪಕ್ಷಿಯಾಗಿ ಅನೇಕ ಕಲ್ಪಗಳ ಕಾಲ ಎಂದರೆ ನಿತ್ಯತ್ವದಲ್ಲಿ ವಾಸ ಮಾಡುತ್ತದೆ.

ಮೇಡಂ ಬ್ಲಾವಟ್ಕಿ ಇದಕ್ಕೆ ಟಿಪ್ಪಣಿ ಬರೆದಿರುತ್ತಾರೆ.

''ಕಾಲ ಹಂಸ'' (ನಾದ ಬಿಂದು ಉಪನಿಷತ್‌ನಲ್ಲಿ ಹೇಳುವಂತೆ) ''ಅ'' ಹಂಸ ಪಕ್ಷಿಯ ಬಲರೆಕ್ಕೆ, ಉ-ಎಡರೆಕ್ಕೆ, ಮ್-ಅದರ ಬಾಲ, ಅರ್ಧ ಮಾತ್ರೆ-ಅದರ ತಲೆ.

ಯೋಗಿಯು ಧ್ಯಾನದಲ್ಲಿ ಮೂರನೆಯ ಮಾತ್ರೆಯನ್ನು ತಲುಪಿದ ನಂತರ ಮೌನವೆಂಬ ನಾಲ್ಕನೆಯ ಅಂತಸ್ತಿಗೆ ಹತ್ತುತ್ತಾನೆ. ಆ ಮೌನದಲ್ಲಿ ಪರಮಾತ್ಮನನ್ನು ಧ್ಯಾನಿಸುತ್ತಾನೆ.

ಚಕ್ರಗಳಿಗೆ ಅನ್ವಯವಾಗುವ ಅಭಿಮಾನ ದೇವತೆಗಳು ಭಿನ್ನ ಭಿನ್ನವಾಗಿರುತ್ತವೆ. (ಒಂದೊಂದು ಗ್ರಂಥದಲ್ಲಿ ಒಂದೊಂದು ವಿಧವಾಗಿ ಹೇಳಿರುತ್ತಾರೆ). ''ಷಟ್ ಚಕ್ರ ನಿರೂಪಣ'' ಎಂಬ ಗ್ರಂಥದಲ್ಲಿ ಪ್ರಥಮ ಚಕ್ರದಲ್ಲಿ ಬ್ರಹ್ಮನನ್ನು ಎರಡನೆಯ ಚಕ್ರದಲ್ಲಿ ವಿಷ್ಣುವನ್ನೂ-ಮೂರನೆಯ ಚಕ್ರದಲ್ಲಿ ಶಿವನನ್ನೂ ಆರಾಧಿಸಲು ಹೇಳಿದೆ. ಅನಂತರ ಇನ್ನೂ ಮೇಲಿನ ಚಕ್ರಗಳಲ್ಲಿ ಶಿವನನ್ನೇ ಬೇರೆ ಬೇರೆ ರೂಪಗಳಲ್ಲಿ ಆರಾಧಿಸಬೇಕೆಂದು ಹೇಳಿದೆ. ಶಿವ ಸಂಹಿತೆಯಲ್ಲಿ ಮೊದಲನೆಯ ಚಕ್ರದಲ್ಲಿ ಗಣೇಶನನ್ನು, ಅನಂತರ ಕ್ರಮವಾಗಿ ಮುಂದಿನ ಚಕ್ರಗಳಲ್ಲಿ ತ್ರಿಮೂರ್ತಿಗಳನ್ನು ಧ್ಯಾನಿಸಬೇಕೆಂದು ಹೇಳಿದೆ. ಬಹುಶಃ ಈ ಭಿನ್ನತೆಗಳಗೆ ಜನರು ಆರಿಸಿಕೊಂಡಿರುವ ಇಷ್ಟ ದೇವತೆಗಳ ಕಾರಣವಿರಬಹುದು.

ಈಶನ ಜೊತೆಗೆ ಕಾಕಿನಿ ಎಂಬ ದೇವತೆಯಿರುತ್ತದೆ. ಸಂಕಲ್ಪ-ಶಕ್ತಿಯನ್ನು ಮನಸ್ಸಿನ ಶಕ್ತಿಯಾಗಿ ವಿವರಿಸಿದೆ. ಷಟ್ ಚಕ್ರಗಳಲ್ಲಿ, ಪ್ರತಿಯೊಂದರಲ್ಲೂ ಡಾಕಿನಿ-ರಾಕಿಣಿ-ಲಾಕಿನಿ-ಕಾಕಿನಿ-ಷಾಕಿನಿ ಮತ್ತು ಹಾಕಿನಿ ಎಂಬ ಸ್ತ್ರೀ ದೇವತೆಗಳನ್ನು ಆರಾಧಿಸುವುದುಂಟು. ಶರೀರಕ್ಕೆ ಸಂಬಂಧಪಟ್ಟ ಧಾತುಗಳನ್ನು ರಕ್ಷಿಸತಕ್ಕವರು ಕಾಕಿನಿ ಕೆಂಪು ಕಮಲದ ಮೇಲೆ ಮುಂಡಿಸಿರುತ್ತಾಳೆ. ಈಕೆಗೆ ನಾಲಕ್ಕು ತೋಳುಗಳಿರುತ್ತವೆ. ಎರಡು ಕೈಗಳು ವರ ಪ್ರಧಾನ

ಹಸ್ತಗಳು; ಮತ್ತೆರಡು ಕೈಗಳಲ್ಲಿ ಪಾಶವನ್ನು, ತಲೆಬರುಡೆಯನ್ನು ಹಿಡಿದುಕೊಂಡಿರುತ್ತಾಳೆ. ತಲೆ ಬರುಡೆಯು ಆಕೆಯು ತನ್ನ ನೀಚ ಸ್ವಾಭಾವವನ್ನು ಗೆದ್ದಿರುವುದಕ್ಕೆ ಸಂಕೇತ.

ದೇಹಕ್ಕೆ ಸಂಬಂಧಪಟ್ಟ ಧ್ಯಾನ

ಯೋಗ ತತ್ವ ಉಪನಿಷತ್ತಿನ ಪ್ರಕಾರ ಈ ಚಕ್ರಗಳನ್ನು ಪ್ರಚೋದನೆ ಮಾಡಲು ಈ ಸ್ಥೂಲಶರೀರಕ್ಕೆ ಸಂಬಂಧಪಟ್ಟಂತೆ ವಿಧಾಯಕವಾದ ಅನುಷ್ಠಾನಗಳು ಇರುತ್ತವೆ. ಯೋಗತತ್ವ-ಉಪನಿಷತ್ತಿನಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ವಾಕ್ಯಗಳನ್ನು ಉದ್ದರಿಸಿ ಬರೆದಿದೆ.

ಈ ಸ್ಥೂಲಶರೀರವು ಐದು ಭೌತಿಕ ತತ್ವಗಳಿಂದ ನಿರ್ಮಾಣವಾಗಿದೆ- ಪೃಥ್ವಿ-ಅಪ್ಪು-ಅಗ್ನಿ-ವಾಯು ಮತ್ತು ಅತಿವಾಯು ತತ್ವ. ಆದುದರಿಂದ ಇದಕ್ಕೆ ಸಂಬಂಧ ಪಟ್ಟಂತೆ ಐದು ಮುಖವಾದ ಧ್ಯಾನವಿರುತ್ತದೆ. ಪಾದಗಳಿಂದ ಮೊಣಕಾಲ್ಮಂಡಿವರೆಗೂ ಇರುವ ಭಾಗವು ಪೃಥ್ವಿ ತತ್ವವನ್ನು ಪ್ರತಿನಿಧಿಸುತ್ತದೆ. ಇದು ನಾಲ್ಕು ಮುಖಗಳುಳ್ಳದ್ದು. ಬಣ್ಣ ಹಳದಿ ''ಲ'' ಎಂಬಕ್ಷರ ಸಂಜ್ಞೆಯುಳ್ಳದು. ಭೂಮಿಯಿಂದ ಉಸಿರನ್ನು ಎಳೆದುಕೊಂಡು 'ಲ' ಅಕ್ಷರವನ್ನು ಚಿಂತಿಸುತ್ತಾ ಚತುರ್ಮುಖ ಬ್ರಹ್ಮನನ್ನು (ಸ್ವರ್ಣ ವರ್ಣದ) ಧ್ಯಾನ ಮಾಡಬೇಕು.

ಮೊಣಕಾಲ್ಮಂಡಿಯಿಂದ ಮಲದ್ವಾರದವರೆಗೂ ಹಬ್ಬಿರುವ ಭಾಗವು ''ಅಪ್'' ತತ್ವವನ್ನು ಪ್ರತಿನಿಧಿಸುತ್ತದೆ. ಜಲ ತತ್ವವು ಚಂದ್ರನ ಬೆಳಕಿನಂತೆ ಪ್ರಕಾಶಿಸುತ್ತ (ಅರ್ಧಚಂದ್ರಾಕೃತಿ ರೂಪದ್ದು) 'ವ' ಅಕ್ಷರವನ್ನು ಬೀಜ ರೂಪವಾಗಿ ಪಡೆದಿದೆ. ಉಸಿರನ್ನು 'ವ' ಎಂಬಕ್ಷರದಿಂದ ಸೆಳೆದುಕೊಂಡು ಜಲ ಭಾಗವನ್ನು ಚಿಂತಿಸುತ್ತಾ ನಾರಾಯಣನನ್ನು ಧ್ಯಾನಿಸಬೇಕು. ನಾರಾಯಣನಿಗೆ ನಾಲ್ಕು ತೋಳುಗಳೂ ಕಿರೀಟ ಧರಿಸಿದ ಶಿರಸ್ಸು ಉಳ್ಳವನಾಗಿ ಸ್ಫಟಿಕ ಶಿಲೆಯಂತೆ ಪ್ರಕಾಶಿಸತಕ್ಕವನೆಂದು ಭಾವಿಸಬೇಕು, ಅಲ್ಲದೆ ಕಿತ್ತಳೆ ವರ್ಣದ ಉಡಪನ್ನು ಧರಿಸಿಕೊಂಡಿರುವಂತೆ ಊಹಿಸಿಕೊಳ್ಳಬೇಕು.

ಮಲದ್ವಾರದಿಂದ ಹೃದಯದವರೆಗೂ ಇರುವ ಭಾಗವು ಅಗ್ನಿ ತತ್ವವನ್ನು ಪ್ರತಿನಿಧಿಸುತ್ತದೆ. ತ್ರಿಕೋನಾಕೃತಿಯುಳ್ಳದ್ದು. ಕೆಂಪು ಬಣ್ಣ. ಬೀಜ ಮಂತ್ರ 'ರ' ಉಸಿರನ್ನು ಎಳೆದುಕೊಂಡು 'ರ' ಎಂಬ ಅಕ್ಷರದಿಂದ ಹೊಳೆಯುವಂತೆ ಮಾಡಿ ಅಗ್ನಿ ತತ್ವಕ್ಕೆ ಸಂಬಂಧ ಪಟ್ಟ ಪ್ರದೇಶದಲ್ಲಿ ತ್ರಿಲೋಚನನಾದ ರುದ್ರನನ್ನು ಚಿಂತಿಸಬೇಕು. ರುದ್ರನು ಮಟ ಮಟ ಮಧ್ಯಾಹ್ನದ ಸೂರ್ಯನಂತೆ ಕಂಗೊಳಿಸುತ್ತಿರುವನು. ಭಸ್ಮಾಂಗಧಾರಿ ಪ್ರಸನ್ನ ವದನ- ಈತನು ಎಲ್ಲ ವರಗಳನ್ನು ಕೊಡಬಲ್ಲನು.

ಹೃದಯದಿಂದ ಹುಬ್ಬುಗಳ ಮಧ್ಯದವರೆಗೂ ಇರುವ ಭಾಗವು ವಾಯುತತ್ತ್ವವನ್ನು ಪ್ರತಿನಿಧಿಸುತ್ತದೆ. ಇದು ಆರು ಕೋನಗಳ ರೂಪದ್ದು-ಕಪ್ಪು ಬಣ್ಣದ್ದು 'ಯ' ಅಕ್ಷರದಿಂದ ಪ್ರಕಾಶಿಸುತ್ತದೆ. ಈ ಪ್ರದೇಶದಲ್ಲಿ ಉಸಿರನ್ನು ಮುಂದುವರಿಸುತ್ತಾ ಸರ್ವಜ್ಞನು ಸರ್ವತೋಮುಖಗಳುಳ್ಳವನೂ ಆದ ಈಶ್ವರನನ್ನು ಧ್ಯಾನಿಸಬೇಕು.

ಹುಬ್ಬುಗಳ ಮಧ್ಯದಿಂದ ತಲೆಯ ಮೇಲ್ಭಾಗದವರೆಗೂ ಇರುವ ಪ್ರದೇಶವು ಆಕಾಶ ತತ್ತ್ವವನ್ನು ಪ್ರತಿನಿಧಿಸುತ್ತದೆ. ಇದು (ಆಕೃತಿ) ವೃತ್ತಾಕಾರದ್ದು, ಹೊಗೆಯ ಬಣ್ಣದ್ದು 'ಹ' ಎಂಬ ಅಕ್ಷರದಿಂದ ಥಳಥಳಿಸುತ್ತದೆ. ಈ ಪ್ರದೇಶಕ್ಕೆ ಅನ್ವಯವಾಗುವಂತೆ ಉಸಿರನ್ನು ಎಳೆದುಕೊಂಡು, ಸದಾಶಿವನನ್ನು ಕುರಿತು ಈ ಮುಂದಿನ ರೀತಿಯಲ್ಲಿ ಧ್ಯಾನ ಮಾಡಬೇಕು. ಬಿಂದು ಆಕೃತಿ ಸುಖದಾಯಕ ಅತ್ಯಂತ ಉನ್ನತ ಮಟ್ಟದ ದೇವ-ಆಕಾಶಾಕೃತಿ ಸ್ಫಟಿಕ ಶಿಲೆಯಂತೆ ಕಂಗೊಳಿಸತಕ್ಕವನು ಚಂದ್ರಶೇಖರ-ಐದು ಮುಖಗಳುಳ್ಳವನು, ಹತ್ತು ಕೈಗಳು, ಮೂರು ಕಣ್ಣುಗಳುಳ್ಳವನು. ಪ್ರಸನ್ನವದನ, ಸರ್ವಾಲಂಕೃತಾಭರಣಗಳುಳ್ಳವನು ತನ್ನ ಎಡಭಾಗದಲ್ಲಿ ಉಮಾದೇವಿ ಸಹಿತನಾಗಿ ಸರ್ವವರಗಳೆಲ್ಲಕ್ಕೂ ಮೂಲ ಕಾರಣನು.

ಈ ರೀತಿ ತತ್ತ್ವವನ್ನು ಕುರಿತು ಧ್ಯಾನ ಮಾಡಬೇಕೆಂದು ಹೇಳಿರುವುದು, ಶರೀರದ ಭಾಗಗಳಿಗೆ ಅನ್ವಯವಾಗುವಂತೆ ಸೂಚಿಸಿರುವುದು, ನೆನಪಿನ ಉದ್ದೇಶದಿಂದಲೇ ಹೊರತು ಆ ಶರೀರದ ಭಾಗಗಳನ್ನು ಪರಿವರ್ತನೆಗೊಳಿಸುವುದಕ್ಕೆ ಸರ್ವಥಾ ಅಲ್ಲ.

ಗ್ರಂಥಿಗಳು

ಹೃದಯ ಚಕ್ರದ ಮಧ್ಯೆ ತಲೆ ಕೆಳಗಾದ ತ್ರಿಕೋನಾಕೃತಿಯಿರುತ್ತದೆ. ಈ ಲಕ್ಷಣವು ಎಲ್ಲ ಚಕ್ರಗಳಲ್ಲೂ ಇರುವುದಿಲ್ಲ. ಆಧಾರ, ಹೃದಯ ಚಕ್ರ ಮತ್ತು ಹುಬ್ಬುಗಳ ಮಧ್ಯೆ ಚಕ್ರಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಮೂರು ವಿಶೇಷ ಗ್ರಂಥಿಗಳ ಮೂಲಕ ಕುಂಡಲಿನಿ ಶಕ್ತಿಯು ಹಾದು ಹೋಗುವಾಗ ಅದು ಅವುಗಳನ್ನು ಭೇದಿಸಿಕೊಂಡು ಹೋಗಬೇಕಾಗುತ್ತದೆ. ಪ್ರಥಮ ಗ್ರಂಥಿಯು ಬ್ರಹ್ಮನಿಗೆ ಸಂಬಂಧಪಟ್ಟುದ್ದು; ಎರಡನೆಯದು ವಿಷ್ಣುವಿಗೂ ಮೂರನೆಯದು ಶಿವನಿಗೂ ಸಂಬಂಧ ಪಟ್ಟುವು. ಈ ಸಂಕೇತದ ಅರ್ಥವೇನೆಂದರೆ ಚಕ್ರಗಳ ಗ್ರಂಥಿಗಳನ್ನು ಭೇದಿಸಿಕೊಂಡು ಹೋಗುವುದು ಎಂದರೆ ಒಂದು ಪ್ರಜ್ಞೆ ಮಟ್ಟದಿಂದ ಮತ್ತೊಂದು ಉನ್ನತ ಮಟ್ಟದ ಪ್ರಜ್ಞೆಗೆ ಏರುವುದು ಎಂದರ್ಥ. ಪ್ರಥಮ ಗ್ರಂಥಿಯನ್ನು ಭೇದಿಸಿದಾಗ ದೇಹಾತ್ಮದಿಂದ ಅಂತರಾತ್ಮನ ಪ್ರಜ್ಞೆ ಮಟ್ಟಕ್ಕೂ ಎರಡನೆಯ ಗ್ರಂಥಿಯನ್ನು ಭೇದಿಸಿದಾಗ ಅಂತರಾತ್ಮನ ಮಟ್ಟದಿಂದ ಪುರುಷಾತ್ಮನ ಮಟ್ಟಕ್ಕೂ ಹತ್ತಿ ಹೋಗುವುದು ಎಂದರ್ಥ. ಇದರ ಅರ್ಥ ಗೌಣ ಮಟ್ಟದ್ದು ಏಕೆಂದರೆ, ಹೃದಯ ಚಕ್ರವು ಉನ್ನತ ಮಟ್ಟದ ಕಾಮದೇಹದ ಪ್ರಜ್ಞೆಯಿಂದಲೂ ಗಂಟಲು ಚಕ್ರವು ಮನಸ್ಸಿನ ಮಟ್ಟದ ಪ್ರಜ್ಞೆಯಿಂದಲೂ

ಸ್ಫುರಣೆಗಳನ್ನು ಪಡೆಯುತ್ತವೆ-ಎಂಬುದಾಗಿ ಹಿಂದೆಯೇ ಹೇಳಿದೆ. ಪ್ರತಿಯೊಂದು ತ್ರಿಕೋನದಲ್ಲೂ ಪರಮಾತ್ಮನು ಲಿಂಗ ಸ್ವರೂಪದಲ್ಲಿ ಪ್ರತಿಬಿಂಬಿತನಾಗಿರುತ್ತಾನೆ. ಇದು ಐಕ್ಯದ ಸಂಕೇತ. ಅಂತರಾತ್ಮನು ದೀಪದ ಜ್ವಾಲೆಯಂತೆ ಮೇಲ್ಮುಖವಾಗಿ ಜೀವಿಸುತ್ತಾನೆ-ಏಕೆಂದರೆ ಆತನಿಗೆ ದೇಹಾತ್ಮಕ್ಕೆ ಸಂಬಂಧಪಟ್ಟ ಆಗು ಹೋಗುಗಳ ಸಂಬಂಧವಿರುವುದಿಲ್ಲ. ಆತನು ಈ ಮಟ್ಟದ ಪರಿಸ್ಥಿತಿಗೆ ಅತೀತನಾಗಿರುತ್ತಾನೆ.

ಎರಡನೆಯ ಹೃದಯ ಚಕ್ರ

ಹೃದಯ ಚಕ್ರಕ್ಕೆ ಸ್ವಲ್ಪ ಕೆಳಮಟ್ಟದಲ್ಲಿರುವುದು. ಇದು ಸಣ್ಣ ಪದ್ಮ. ಇದು ವಿಶೇಷ ಲಕ್ಷಣವುಳ್ಳದು. ಇದರಲ್ಲಿ ಸ್ವಂತ ಗುರುವನ್ನು ಕುರಿತು ಧ್ಯಾನ ಮಾಡತಕ್ಕ ಅವಕಾಶವಿರುತ್ತದೆ. ಅಥವಾ ಇಷ್ಟ ದೇವತೆಯನ್ನು ಕುರಿತು ಧ್ಯಾನ ಮಾಡತಕ್ಕ ಕೇಂದ್ರ. ಇಲ್ಲಿ ಭಕ್ತನು ರತ್ನಗಳ ದ್ವೀಪವೊಂದನ್ನು ಕಲ್ಪಿಸಿಕೊಂಡು ಅದರಲ್ಲಿ ಉದ್ಯಾನವನ ಮತ್ತು ಬಲಿ ಪೀಠವಿರುವಂತೆ ಊಹಿಸಿಕೊಳ್ಳುತ್ತಾನೆ. ಆ ಬಲಿ ಪೀಠದ ಲಕ್ಷಣವನ್ನು ಘೇರಂಡ ಸಂಹಿತೆಯಲ್ಲಿ ಈ ಮುಂದಿನಂತೆ ವರ್ಣಿಸಿರುತ್ತಾರೆ.

''ತನ್ನ ಹೃದಯದ ಮಧ್ಯದಲ್ಲಿ ಅಮೃತ ಸಾಗರವಿರುವಂತೆ ಭಾವಿಸಿಕೊಳ್ಳಲಿ. 'ಆ ಸಾಗರದ ಮಧ್ಯೆ ರತ್ನಗಳು ದೊರೆಯುವಂತಹ ಒಂದು ದ್ವೀಪವಿರುತ್ತದೆ. ಅದರಲ್ಲಿರುವ ಮರಳು ವಜ್ರ ಮತ್ತು ರತ್ನಗಳಿಂದ ತುಂಬಿರುತ್ತದೆ. ಅದರ ಸುತ್ತಲೂ ಕದಂಬ ವೃಕ್ಷಗಳಿರುತ್ತವೆ. ಇವು ಪರಿಮಳಯುಕ್ತವಾದ ಪುಷ್ಪ ಭರಿತವಾಗಿವೆ-ಇವುಗಳ ಸುತ್ತಲೂ ಪುಷ್ಪಭರಿತವಾದ ಮಲ್ಲಿಗೆ, ಚಂಪಕ, ಪಾರಿಜಾತ, ಪದ್ಮ ಪುಷ್ಪಗಳನ್ನು ಬಿಟ್ಟಿರುವ ವೃಕ್ಷಗಳಿರುತ್ತವೆ. ಇವುಗಳ ಪರಿಮಳವು ಸುತ್ತಲೂ ವ್ಯಾಪಿಸಿರುತ್ತದೆ. ಈ ತೋಟದ ಮಧ್ಯದಲ್ಲಿ ಯೋಗಿಯು ದಿವ್ಯವಾದ ಕಲ್ಪವೃಕ್ಷವಿರವಂತೆ ಊಹಿಸಿಕೊಳ್ಳಲಿ. ಇದಕ್ಕೆ ವೇದಗಳನ್ನು ಪ್ರತಿನಿಧಿಸುವ ನಾಲ್ಕು ಕೊಂಬೆಗಳೂ-ಅಲ್ಲದೆ ಹೂಗಳೂ ಹಣ್ಣುಗಳೂ ಭರಿತವಾಗಿರುವಂತೆ ಭಾವಿಸಲಿ. ಈ ಮರದ ಕೆಳಗೆ ರತ್ನಖಚಿತವಾದ ಪೀಠವಿರುವಂತೆ ಊಹಿಸಿಕೊಳ್ಳಲಿ ಅದರ ಮಧ್ಯೆ ಅಲಂಕೃತವಾದ ಒಂದು ಸಿಂಹಾಸನವಿರುವಂತೆಯೂ ಅದರ ಮೇಲೆ ಇಷ್ಟ ದೇವತೆ ಮಂಡಿಸಿರುವಂತೆಯೂ ಭಾವಿಸಿಕೊಂಡು, ಅದನ್ನು ಕುರಿತು ಧ್ಯಾನಿಸಲಿ'' ಇದು ಬರಿಯ ಊಹೆಯಲ್ಲ. ಈ ಮೂಲಕ ಗುರುವಿನ ಸನ್ನಿಧಿ ಲಭಿಸುವ ಯೋಗವಿರುತ್ತದೆ. ಸ್ವರ್ಗದಲ್ಲಿರುವವರಿಗೆ ಅವರ ಪ್ರೀತಿಪಾತ್ರರು ಹೇಗೆ ರೂಪಗೊಂಡು ಆತನನ್ನು ಸ್ಫೂರ್ತಿಗೊಳಿಸುತ್ತಾರೆಯೋ ಹಾಗೆ ಸಾಧಕರನ್ನು ಕಲ್ಪಿಸಿ ಕೊಂಡಿರುವ ಪ್ರತಿಬಿಂಬದ ಮೂಲಕ ಗುರುಗಳ ಚೈತನ್ಯವು ಆತನಿಗೆ ಸ್ಫೂರ್ತಿ, ಉತ್ಸಾಹಗಳನ್ನು ಕೊಡುವುದು ಖಚಿತ. ಆ ಪ್ರತಿ ಬಿಂಬದ ಮೂಲಕ ಉಚಿತವಾದ ಬೋಧೆಯೂ ಕೂಡ ಲಭಿಸುವುದುಂಟು. ಇದಕ್ಕೆ ಒಂದು ನಿದರ್ಶನ ಮದ್ರಾಸ್ ಪ್ರಾಂತ್ಯದಲ್ಲಿ ಒಬ್ಬ ವೃದ್ಧನು ಗುರುಗಳಾದ ಮೌರ್ಯ ಋಷಿಗಳ ಶಿಷ್ಯನೆಂದು ಭಾವಿಸಿದ್ದನು. ಆ ಗುರುಗಳು ದಕ್ಷಿಣ ದೇಶದಲ್ಲಿ ಪ್ರವಾಸ ಮಾಡುವ

ಸಂದರ್ಭದಲ್ಲಿ ಆ ವೃದ್ಧನ ಹಳ್ಳಿಗೆ ಬೇಟಿ ಕೊಟ್ಟಿದ್ದರು. ಆ ಲಾಗಾಯಿತು ಆ ವೃದ್ಧನು ತನ್ನ ಗುರುವನ್ನು ಮರೆಯಲಿಲ್ಲ. ಧ್ಯಾನ ಮಾಡುವ ಸಂದರ್ಭಗಳಲ್ಲಿ ಅನೇಕ ವೇಳೆ ಗುರುಗಳು ಬೋಧೆಗಳನ್ನು ಕೊಡುತ್ತಿದ್ದರಂತೆ.

ಹಿಂದೂಗಳು ಗುರುವಿನ ಅವಶ್ಯಕತೆ ವಿಷಯವಾಗಿ ತುಂಬ ನಂಬಿಕೆಯುಳ್ಳವರು, ಅಂತಹವರಿಗೆ ಗುರುಗಳು ದೊರೆತರೆ ಅವರು ಅನನ್ಯ ಭಕ್ತಿಯಿಂದ ಆರಾಧಿಸುತ್ತಾರೆ. ತೇಜೋ ಬಿಂದು ಉಪನಿಷತ್ತಿನಲ್ಲಿ ಮಾನವನ ಅತ್ಯುನ್ನತ ಭಾವನೆಯೇ ಗುರುವು ಎಂದು ಹೇಳಿದೆ ಭಗವಂತನನ್ನು ಕುರಿತು ಬೋಧಿಸತಕ್ಕ ಅತ್ಯುನ್ನತ ಮಟ್ಟದ ಭಾವನೆಯೇ ಗುರುವು ಎಂದು ಹೇಳಿದೆ. ಭಗವಂತನನ್ನು ಕುರಿತು ಬೋಧಿಸತಕ್ಕ ಅತ್ಯುನ್ನತ ಮಟ್ಟದ ಭಾವನೆಯೂ ಕೂಡ ಗುರುವಿನ ಸಹಜ ಸ್ವಭಾವವನ್ನು ಪ್ರತಿಬಿಂಬಿಸಲಾರದು ಎಂಬುದೇ ಅವರ ಭಾವನೆ. ಗುರುಗಳನ್ನು ಸಂಧಿಸಿರತಕ್ಕ ನಮ್ಮಂಥಹವರಿಗೆ (CWL&AB) ಮೇಲ್ಕಂಡ ಹೇಳಿಕೆಯ ಸತ್ಯಾಂಶವು ಚೆನ್ನಾಗಿ ಗೊತ್ತು. ಶಿಷ್ಯನ ಊಹೆಗೆ ಸಿಲುಕದ ಉನ್ನತ ಪ್ರಜ್ಞೆಯ ಮಟ್ಟದ ಅಂತಸ್ತು ಅವರದು. ಇದರಿಂದ ಗುರುವನ್ನು ಭಗವಂತನಿಗೆ ಸಮಾನನೆಂದು ಅರ್ಥಮಾಡಿಕೊಳ್ಳ ಕೂಡದು, ಆದರೆ ನಾವು ಊಹಿಸುವುದಕ್ಕಿಂತ ಮಿಗಿಲಾದ ಉನ್ನತ ಮಟ್ಟದ ಪ್ರಜ್ಞೆಯ ಅಂತಸ್ತು ಆ ಮಹಾತ್ಮರದು ಎಂದು ತಿಳಿಯಬೇಕು.

ಹೃದಯದಲ್ಲಿನ ಧ್ಯಾನದ ಪರಿಣಾಮ

ಹೃದಯ ಚಕ್ರದಲ್ಲಿ ಧ್ಯಾನ ಮಾಡಿದ ಪರಿಣಾಮವಾಗಿ ಯೋಗಿಗೆ ಪ್ರಾಪ್ತವಾಗುವ ಸೌಲಭ್ಯಗಳನ್ನು ಶಿವ ಸಂಹಿತೆಯು ಮುಂದಿನಂತೆ ವಿವರಿಸುತ್ತದೆ.

ಅಂತಹವನಿಗೆ ಅಪಾರ ಜ್ಞಾನವು ಲಭಿಸುತ್ತದೆ. ತ್ರಿಕಾಲ ಜ್ಞಾನಿಯಾಗುತ್ತಾನೆ, ದಿವ್ಯದೃಷ್ಟಿ - ದಿವ್ಯ ಶ್ರವಣಗಳು ಲಭ್ಯವಾಗುವುದಲ್ಲದೆ ಜಲಸ್ತಂಬನ, ಆಕಾಶ ಗಮನ ಮೊದಲಾದ ಸಿದ್ಧಿಗಳು ಪ್ರಾಪ್ತವಾಗುತ್ತವೆ.

ಆತನಿಗೆ ಜೀವನ್ಮುಕ್ತರ ದರ್ಶನವಾಗುತ್ತದೆ-ಯೋಗಿನಿಗಳನ್ನು ಸಂಧಿಸುತ್ತಾನೆ. ವಾಯುಮಂಡಲದಲ್ಲಿ ಹಾರಾಡುವ ಪಕ್ಷಿ ಮೊದಲಾದುವುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾನೆ.

ಯಾರು ಪ್ರತಿದಿನವೂ ಗುಪ್ತವಾದ ಬಾಣಲಿಂಗವನ್ನು ಕುರಿತು ಧ್ಯಾನ ಮಾಡುತ್ತಾನೆಯೋ ಅಂತಹವನಿಗೆ ಖೇಚರೀ ಭೂಚರೀ ಮೊದಲಾದ ಸಿದ್ಧಿಗಳು ಪ್ರಾಪ್ತವಾಗುತ್ತವೆ.

ಇಂತಹ ಸಿದ್ಧಿಗಳನ್ನು ಕುರಿತು ಹೆಚ್ಚಾಗಿ ವಿವರಣೆ ಮಾಡುವುದು ಅನಾವಶ್ಯಕ.

ಕುಂಡಲಿನಿ

ಹಿಂದೂ ಯೋಗಿಗಳಿಗೆ ಶರೀರ ಶಾಸ್ತ್ರದಲ್ಲಿ ಅಷ್ಟು ಅಭಿರುಚಿಯಿರುವುದಿಲ್ಲ. ಅವರಿಗೆ ಧ್ಯಾನಾಸಕ್ತರಾಗಿ ಕುಂಡಲಿನಿ ಶಕ್ತಿಯನ್ನು ಉತ್ಥಾಪನೆ ಮಾಡುವುದರ ಮೂಲಕ ತಮ್ಮ ಪ್ರಜ್ಞೆಯನ್ನು ಉನ್ನತಮಟ್ಟದ ಲೋಕಗಳಿಗೆ ಹತ್ತಿಸುವುದರಲ್ಲಿ ತುಂಬ ಆಸಕ್ತಿ. ಆದುದರಿಂದ ಸಂಸ್ಕೃತ ಗ್ರಂಥಗಳಲ್ಲಿ ಚಕ್ರಗಳ ಆಕೃತಿ ಮತ್ತು ಲಕ್ಷಣಗಳನ್ನು ಅಷ್ಟಾಗಿ ವರ್ಣಿಸಿಲ್ಲ. ಆದರೆ ಅವುಗಳು ಹೇಗೆ ಬೆನ್ನುಮೂಳೆಯಲ್ಲಿರುವ ಶುಷುಮ್ನ ನಾಡಿಯಲ್ಲಿ ಬೇರು ಬಿಟ್ಟುಕೊಂಡಿರುತ್ತವೆ, ಕುಂಡಲಿನಿಯನ್ನು ಆ ಕೇಂದ್ರಗಳ ಮೂಲಕ ಹೇಗೆ ಹತ್ತಿಸಿಕೊಂಡು ಹೋಗಬಹುದು ಎಂಬ ವಿಷಯವಾಗಿ ತುಂಬ ವಿವರಗಳನ್ನು ಕೊಟ್ಟಿರುತ್ತಾರೆ.

ಕುಂಡಲಿನಿ ಶಕ್ತಿಯನ್ನು ಮಿಂಚಿನಂತೆ ಕಂಗೊಳಿಸತಕ್ಕ ದೇವಿ ಎಂದು ವರ್ಣಿಸಿದೆ. ಕುಂಡಲಿನಿ ಶಕ್ತಿಯು ಮೂಲಾಧಾರ ಚಕ್ರದಲ್ಲಿ ಸರ್ಪದಂತೆ ಮೂರೂವರೆ ಸುತ್ತುಗಳನ್ನು ಹಾಕಿಕೊಂಡು ಸುಪ್ತಾವಸ್ಥೆಯಲ್ಲಿರುತ್ತದೆ. ಈ ಕುಂಡಲಿನಿ ಸರ್ಪವು ಅಲ್ಲಿರುವ ಸ್ವಾಯಂಭು ಲಿಂಗವನ್ನು ಸುತ್ತು ಹಾಕಿಕೊಂಡು ತನ್ನ ಹೆಡೆಯಿಂದ ಶುಷುಮ್ನ ನಾಡಿಯನ್ನು ಮುಚ್ಚಿರುತ್ತದೆ. ಇದರ ಹೊರಗಿನ ಪದರವು ಎಲ್ಲ ಜನರಲ್ಲೂ ಎಚ್ಚೆತ್ತು ಕೆಲಸ ಮಾಡುತ್ತದೆ. ಉಸಿರಾಡತಕ್ಕ ಎಲ್ಲ ಪ್ರಾಣಿಗಳನ್ನೂ ರಕ್ಷಿಸುತ್ತದೆ. ಮಾನವ ದೇಹದಲ್ಲಿನ ಶಬ್ದಬ್ರಹ್ಮವೆಂದು ಕುಂಡಲಿನೀದೇವಿಗೆ ಹೆಸರು ಬಂದಿರುತ್ತದೆ. ಶಬ್ದ-ಎಂದರೆ ಮಾತು. ಇಲ್ಲಿ ಬ್ರಹ್ಮ-ಎಂದರೆ ಭಗವಂತನ ಮೂರನೆ ಮೂರ್ತಿಯ ಚೈತನ್ಯವನ್ನು ಸೂಚಿಸಿದೆ. ಈ ಪ್ರಪಂಚವು ಸೃಷ್ಟಿಸಲ್ಪಡುವಾಗ ಈ ಶಬ್ದವು ನಾಲ್ಕು ಅಂತಸ್ತುಗಳಲ್ಲಿ ಅಭಿವ್ಯಕ್ತವಾಯಿತು. ಈ ನಾಲ್ಕು ಅಂತಸ್ತುಗಳನ್ನು ಪಾಶ್ಚಾತ್ಯರಾದ ನಾವು ನಮ್ಮ ಶರೀರ-ಜೀವಾತ್ಮ-ಪುರುಷಾತ್ಮ ಮತ್ತು ನಾಲ್ಕನೆಯದಾದ ವಿಶ್ವಾತ್ಮನೊಂದಿಗೆ ಒಂದಾಗುವಿಕೆಗೆ ಹೋಲಿಸಬಹುದು.

ಕುಂಡಲಿನಿಯನ್ನು ಎಚ್ಚರಗೊಳಿಸುವಿಕೆ

ಯೋಗಿಗಳ ಉದ್ದೇಶ ಕುಂಡಲಿನಿಯನ್ನು ಎಚ್ಚರಗೊಳಿಸಿ ಅನಂತರ ಆಕೆಯನ್ನು ಕ್ರಮೇಣ ಶುಷುಮ್ನ ನಾಡಿಯ ಮೂಲಕ ಹತ್ತಿಸುವುದೇ ಆಗಿದೆ. ಈ ಕಾರ್ಯಸಾಧನೆಗೆ ಅನೇಕ ವಿಧವಾದ ಅನುಷ್ಠಾನಗಳು ವಿಧಾಯಕವಾಗಿರುತ್ತವೆ. ಶಿವಸಂಹಿತೆಯಲ್ಲಿ ಹತ್ತು ಮುದ್ರೆಗಳನ್ನು ವಿವರಿಸಿದೆ. ಇಲ್ಲಿ ಅತ್ಯಂತ ಉತ್ತಮವಾದ ಸಾಧನೆಗಳನ್ನು ಹೇಳಿದೆ. ಅಲ್ಲದೆ ಇವುಗಳೆಲ್ಲವನ್ನೂ ಏಕಕಾಲದಲ್ಲಿ ಅನುಷ್ಠಾನ ಮಾಡಬೇಕೆಂದು ಹೇಳಿದೆ. ಇವುಗಳಲ್ಲಿ ಒಂದು ವಿಧಾನವನ್ನು ಅನುಷ್ಠಾನ ಮಾಡುವುದರ ಮೂಲಕ ಆಗುವ ಫಲಿತಾಂಶವನ್ನು ಕುರಿತು ಅವಲಾನ್‌ರವರು ಷಟ್ ಚಕ್ರ ನಿರೂಪಣೆ ಗ್ರಂಥದಲ್ಲಿ ಈ ಮುಂದಿನಂತೆ ಬರೆಯುತ್ತಾರೆ.

"ಶರೀರದಲ್ಲಿನ ಉಷ್ಣತೆಯು ತುಂಬ ಅಧಿಕವಾಗುತ್ತದೆ-ಕುಂಡಲಿನಿಯು ಅದರ ಪ್ರಭಾವದಿಂದ ಎಚ್ಚೆತ್ತು (ಸರ್ಪಕ್ಕೆ ಕೋಲಿನಲ್ಲಿ ಹೊಡೆದ ಕೂಡಲೇ ಬುಸ್ ಬುಸ್ ಎಂದುಕೊಂಡು ಹೆಡೆ ಎತ್ತುವ ಹಾಗೆ) ಸುಷುಮ್ನ ನಾಡಿಯನ್ನು ಪ್ರವೇಶಿಸುತ್ತದೆ.

ಕುಂಡಲಿನಿ ಶಕ್ತಿಯು ಕೆಲವು ಸಂದರ್ಭಗಳಲ್ಲಿ ಇಚ್ಛಾಶಕ್ತಿಯ ಪ್ರಭಾವದಿಂದಾಗಲೀ ಅಥವಾ ಆಕಸ್ಮಿಕ ಘಟನೆಯಿಂದಾಗಲೀ ಎಚ್ಚರಗೊಳ್ಳುತ್ತದೆ ಎಂಬ ನಿದರ್ಶನಗಳು ದೊರೆತಿವೆ. ಕೆನಡ ದೇಶದಲ್ಲಿ ಒಬ್ಬ ಹೆಣ್ಣು ಮಗಳು ಮಹಡಿಯ ಮೆಟ್ಟಲಿನಿಂದ ಜಾರಿಬಿದ್ದಳಂತೆ. ಕೂಡಲೇ ಆಕೆಗೆ ಮೂಲಾಧಾರ ಚಕ್ರವಿರುವ ಸ್ಥಳಕ್ಕೆ ಪೆಟ್ಟು ಬಿದ್ದು ಕುಂಡಲಿನೀ ಶಕ್ತಿಯು ಎಚ್ಚೆತ್ತು ಆ ಮೂಲಕ ದಿವ್ಯದೃಷ್ಟಿ ಪ್ರಾಪ್ತವಾಯಿತೆಂದು ತಿಳಿದುಬಂದಿದೆ.

ಕೆಲವು ಗ್ರಂಥಗಳು ಚಕ್ರಗಳನ್ನು ಕುರಿತು ಧ್ಯಾನ ಮಾಡುವಂತೆ ಸೂಚಿಸುತ್ತವೆ. ಮುಂಚಿತವಾಗಿ ಎಚ್ಚರಗೊಳಿಸಬೇಕಾದ ಕುಂಡಲಿನಿಯ ವಿಷಯವನ್ನೇ ಎತ್ತುವುದಿಲ್ಲ. ಗರುಡ ಪುರಾಣದಲ್ಲಿ-ಮೂಲಾಧಾರ, ಸ್ವಾಧಿಷ್ಠಾನ ಮಣಿಪುರ, ಅನಾಹತ, ವಿಶುದ್ಧ ಮತ್ತು ಆಜ್ಞಾ ಎಂಬ ಆರು ಚಕ್ರಗಳಿವೆ. ಸಾಧಕನು ಈ ಚಕ್ರಗಳಲ್ಲಿ ಗಣೇಶ-ವಿಧಿ (ಬ್ರಹ್ಮ), ವಿಷ್ಣು, ಶಿವ-ಜೀವ ಗುರು-ಪರಬ್ರಹ್ಮ ತತ್ವವನ್ನು ಕುರಿತು ಕ್ರಮವಾಗಿ ಧ್ಯಾನ ಮಾಡಬೇಕು. ಹೃತ್ಪೂರ್ವಕವಾಗಿ ಮಾನಸಿಕವಾಗಿ ಆರಾಧಿಸಿದ ನಂತರ ಆತನು ಅಜಪ-ಗಾಯಿತ್ರಿಯನ್ನು ಗುರುಗಳ ಬೋಧೆ ಪ್ರಕಾರ ಜಪಿಸಬೇಕೆಂದು ಹೇಳಿದೆ.

ಸಹಸ್ರಾರ ಚಕ್ರ ತಲೆಕೆಳಗಾಗಿರುವಂತೆ ಭಾವಿಸಿಕೊಂಡು ಅದರ ರಂಧ್ರದಲ್ಲಿ ಹಂಸದೊಳಗೆ ಪವಿತ್ರ ಗುರುವನ್ನು ಕುರಿತು ಧ್ಯಾನ ಮಾಡಬೇಕು. ಆತನ ಹಸ್ತಕಮಲವು ಆತನನ್ನು ಭಯದಿಂದ ಪಾರು ಮಾಡುತ್ತದೆ.

ಆ ಪರಮ ಗುರುವಿನ ಪಾದದಿಂದ ಉಗಮವಾಗುವ ಅಮೃತದಿಂದ ತನ್ನ ಶರೀರವನ್ನು ಸ್ನಾನ ಮಾಡಿಸಬೇಕು. ಐದು ಮುಖವಾಗಿ ಆತನನ್ನು ಆರಾಧಿಸಿದ ನಂತರ ಆತನನ್ನು ಸ್ತೋತ್ರ ಮಾಡುತ್ತಾ ನಮಸ್ಕರಿಸಬೇಕು.

ಅನಂತರ ಕುಂಡಲಿನಿಯು ಆರು ಚಕ್ರಗಳನ್ನು ಕೆಳಗಿನಿಂದ ಮೇಲಕ್ಕೂ ಮೇಲಿನಿಂದ ಕೆಳಕ್ಕೂ ಹರಿದಾಡಿ ಮೂರುವರೆ ಸುತ್ತಿನಲ್ಲಿ ಮಲಗಿರುವಂತೆ ಧ್ಯಾನಿಸಬೇಕು.

ಅನಂತರ ರಂಧ್ರದಿಂದ ಆಚೆಗಿರುವ ಸುಷುಮ್ನ ಕುರಿತು ಧ್ಯಾನಿಸುವ ಮೂಲಕ ಅತ್ಯಂತ ಉನ್ನತ ಮಟ್ಟದ ವಿಷ್ಣು ಅಂತಸ್ತನ್ನು ಮುಟ್ಟುತ್ತಾನೆ".

ಕುಂಡಲಿನಿಯ ಏರುವಿಕೆ

ಶುಷುಮ್ನ ನಾಡಿಯ ಮೂಲಕ ಕುಂಡಲಿನಿಯು ಹತ್ತಿದಾಗ ಆಗುವ ಫಲಿತಾಂಶವನ್ನು ಸಂಬಂಧಪಟ್ಟ ಪ್ರಮಾಣ ಗ್ರಂಥಗಳು ಸೂಚಿಸುತ್ತವೆಯೇ ಹೊರತು ವಿವರಿಸುವುದಕ್ಕೆ ಹೋಗುವುದಿಲ್ಲ. ಬೆನ್ನು ಮೂಳೆಯನ್ನು ಮೇರುದಂಡ-ಶರೀರದ ಮೂಲಧಾರವಾದ ಅಕ್ಷಕಂಭ, ಅದರಲ್ಲಿ ಶುಷುಮ್ನ ಎಂಬ ನಾಡಿಯಿರುತ್ತದೆ. ಅದರೊಳಗೆ ವಜ್ರಿಣಿ ಮತ್ತು ಅದರೊಳಗೆ ಚಿತ್ರಿಣಿ ಎಂಬ ಜಾಡು ಹುಳುವಿನ ಬಲೆಯ ಸೂತ್ರದಂತೆ ಸೂಕ್ಷ್ಮವಾಗಿರುತ್ತದೆ ಇದರಲ್ಲಿ ಚಕ್ರಗಳು ಬೇರು ಬಿಟ್ಟುಕೊಂಡಿರುತ್ತವೆ.

ಕುಂಡಲಿನಿ ಶಕ್ತಿಯು ಯೋಗಿ ಧ್ಯಾನಾಸಕ್ತನಾಗಿ ತನ್ನ ಇಚ್ಛಾಶಕ್ತಿಯನ್ನು ಪ್ರಯೋಗ ಮಾಡಿದಂತೆಲ್ಲ ಚಿತ್ರಿಣಿ ಮೂಲಕ ಹತ್ತುತ್ತ ಹೋಗುತ್ತದೆ. ಕುಂಡಲಿನಿ ಶಕ್ತಿಯು ಹತ್ತುವುದು ಒಂದೇ ಸಾರಿಗೆ ಆಗುವುದಿಲ್ಲ. ಯೋಗಿಯು ಪುನಹ ಪುನಹ ಪ್ರಯತ್ನ ಮಾಡುತ್ತಾ ಅದನ್ನು ಹತ್ತಿಸಬೇಕಾಗುತ್ತದೆ. ಕುಂಡಲಿನಿ ಶಕ್ತಿಯು ಚಕ್ರಗಳನ್ನು ಹತ್ತಿದಂತೆಲ್ಲ ಪ್ರತಿಯೊಂದು ಚಕ್ರ ಪದ್ಮವು ಜೋಲು ಬಿದ್ದು ಇದ್ದುದು ಮೇಲಕ್ಕೆ ತಲೆಯೆತ್ತುತ್ತದೆ. ಧ್ಯಾನವು ಮುಗಿದ ನಂತರ ಯೋಗಿಯು ಕುಂಡಲಿನಿಯನ್ನು ಪುನಃ ಅದೇ ಮಾರ್ಗದಲ್ಲಿ ಹಿಂತಿರುಗಿಸಿ ಮೂಲಾಧಾರ ಚಕ್ರಕ್ಕೆ ಇಳಿಸುತ್ತಾನೆ. ಆದರೆ ಕೆಲವು ಸನ್ನಿವೇಶಗಳಲ್ಲಿ ಕುಂಡಲಿನಿಯು ಹೃದಯಚಕ್ರಕ್ಕೆ ವಾಪಸು ಬಂದು ಅಲ್ಲಿ ತನ್ನ ಕೋಣೆಯನ್ನು ಪ್ರವೇಶಿಸುತ್ತದೆ. ಅನೇಕ ಗ್ರಂಥಗಳಲ್ಲಿ ಕುಂಡಲಿನಿಯು ಹೊಕ್ಕಳ ಚಕ್ರದಲ್ಲಿರುತ್ತದೆಂದು ಹೇಳಿದೆ. ಸಾಧಾರಣ ಜನರಲ್ಲಿ ಅಲ್ಲಿ ಕುಂಡಲಿನಿಯಿರುವುದನ್ನು ನಾವು ನೋಡಿಲ್ಲ ಬಹುಶಃ ಅಂತಹವರು ಅದನ್ನು ಎಬ್ಬಿಸಿ ಅಲ್ಲಿಗೆ ತಂದಿರಬಹುದು.

ಕುಂಡಲಿನಿ ಶಕ್ತಿಯು ಪ್ರತಿಯೊಂದು ಚಕ್ರವನ್ನು ಪ್ರವೇಶಿಸಿ-ಅದನ್ನು ಬಿಟ್ಟು ಹೋದಾಗ ಆ ಚಕ್ರಕ್ಕೆ ಸಂಬಂಧಪಟ್ಟ ಮಾನಸಿಕ ಶಕ್ತಿಯನ್ನು ಲಯ ಸ್ಥಿತಿಗೆ ತರುತ್ತದೆ. ಪ್ರತಿಯೊಂದು ಚಕ್ರವೂ ಕುಂಡಲಿನಿ ಹಾದು ಹೊದಂತೆಲ್ಲ ಅದರ ಚೈತನ್ಯವು ಹೆಚ್ಚುತ್ತಾ ಹೋಗುತ್ತದೆ. ಏಕೆಂದರೆ, ಕುಂಡಲಿನಿದೇವಿಯ ಉದ್ದೇಶವು ಅತ್ಯಂತ ಉನ್ನತ ಮಟ್ಟದ ಸಹಸ್ರಾರ ಚಕ್ರಕ್ಕೆ ಹತ್ತಿ ಪರಶಿವಚೈತನ್ಯದೊಡನೆ ಒಂದಾಗಿ ಆನಂದವನ್ನನುಭವಿಸುವುದೇ ಆಗಿದೆ ಮತ್ತು ಆಕೆಯು ಹಿಂತಿರುಗಿ ಬರುವಾಗ ಪ್ರತಿಯೊಂದು ಚಕ್ರಕ್ಕೂ ಅದರ ಶಕ್ತಿ ವಿಶೇಷಗಳನ್ನು ಅಭಿವೃದ್ಧಿ ಪಡಿಸುತ್ತಾಳೆ.

ಈ ರೀತಿ ಕುಂಡಲಿನಿ ಶಕ್ತಿಯನ್ನು ಹತ್ತಿಸುವುದಕ್ಕಾಗಿ ಮಾಡತಕ್ಕ ಧ್ಯಾನವು ಸಾಧಕನಿಗೆ ಪ್ರಜ್ಞೆ ತಪ್ಪಿಸುತ್ತದೆ. (ಆರ್ಥರ್ ಅವಲಾನ್) ಷಟ್ ಚಕ್ರನಿರೂಪಣೆ ಗ್ರಂಥಕರ್ತನು

ಹೇಳುವಂತೆ ಒಬ್ಬ ಸಾಧಕನು ಕುಂಡಲಿನಿ ಶಕ್ತಿಯನ್ನು ಎಚ್ಚರಗೊಳಿಸಿ ಸಹಸ್ರಾರ ಚಕ್ರವನ್ನು ಮುಟ್ಟಿಸಬೇಕಾದರೆ ಕೆಲವು ವರ್ಷಗಳ ಪ್ರಯತ್ನ ಅವಶ್ಯಕವೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಅದನ್ನು ಸಾಧಿಸಲು ಅಷ್ಟು ದೀರ್ಘಕಾಲ ಬೇಕಾಗುವುದಿಲ್ಲವೆಂದೂ ಹೇಳುತ್ತಾರೆ. ಅನುಷ್ಠಾನ ಮಾಡುತ್ತಾ ಮಾಡುತ್ತಾ ಅದನ್ನು ಜಾಗ್ರತೆ ಸಾಧಿಸುವ ಸೌಲಭ್ಯ ದೊರೆಯುತ್ತದೆ. ಒಬ್ಬ ನುರಿತ ಯೋಗಿಯು ಒಂದು ಘಂಟೆಯೊಳಗೆ ಕುಂಡಲಿನಿ ಶಕ್ತಿಯನ್ನು ಹತ್ತಿಸಿ ಇಳಿಸಬಲ್ಲ-ಆದರೆ ಆತನು ಸಹಸ್ರಾರ ಚಕ್ರದಲ್ಲಿ ತನಗೆ ಬೇಕಾದಷ್ಟು ಕಾಲ ತಂಗಲು ಸಾಧ್ಯವಿದೆ.

ಕೆಲವು ಗ್ರಂಥಕರ್ತರು ಅಭಿಪ್ರಾಯ ಪಡುವಂತೆ ಕುಂಡಲಿನಿ ಶಕ್ತಿ ಶರೀರದಲ್ಲಿ ಹತ್ತಿಕೊಂಡು ಹೊದಂತೆಲ್ಲ ಅದು ಬಿಟ್ಟ ಹಿಂದಿನ ಶರೀರದ ಭಾಗವು ಶೈತ್ಯದಿಂದ ಕೂಡುತ್ತದೆ. ಆದರೆ ಪ್ರಾರಂಭದಲ್ಲಿನ ಸಾಧಕರಿಗೆ ಪ್ರಜ್ಞೆ ತಪ್ಪತಕ್ಕಂಥವರಿಗೆ ಮಾತ್ರ ಈ ಸ್ಥಿತಿಯು ಅನ್ವಯವಾಗುತ್ತದೆ. ಯೋಗಾಭ್ಯಾಸದಲ್ಲಿ ಸಿದ್ಧಿ ಪಡೆದವರಿಗೆ ಇದು ಅನ್ವಯವಾಗುವುದಿಲ್ಲ.

ಕಲ್ಕತ್ತಾದ ಹತ್ತಿರವಿದ್ದ ದ್ವೀಪವೊಂದರಲ್ಲಿ, ಮೇಡಂ ಬ್ಲಾವಟ್ಸ್ಕಿಯು ಸೀಕ್ರೆಟ್ ಡಾಕ್ಟ್ರಿನ್ ಗ್ರಂಥದಲ್ಲಿ ಬರೆದಿರುವಂತೆ-ಒಬ್ಬ ತಪಸ್ವಿಯ ಶರೀರದ ಮೇಲೆ ಒಂದು ಮರದ ಬೇರುಗಳು ಬೆಳದಿದ್ದವು. ಆತನನ್ನು ಎಚ್ಚರಗೊಳಿಸುವ ಪ್ರಯತ್ನದಲ್ಲಿ ಆ ಬೇರುಗಳನ್ನು ಕಡಿಯುವ ಸಂದರ್ಭದಲ್ಲಿ ಆತನ ದೇಹಕ್ಕೆ ಘಾಯಗಳಾಗಿ ಆತನು ಸತ್ತು ಹೋದನೆಂದು ಹೇಳುತ್ತಾರೆ. ಆಕೆಯೇ ಬರೆದಿರುವ ಪ್ರಕಾರ ಅಲಹಾಬಾದಿನ ಹತ್ತಿರ ಒಬ್ಬ ಯೋಗಿಯು ಒಂದು ಬಂಡೆಯ ಮೇಲೆ 53 ವರ್ಷಗಳ ಕಾಲ ಕುಳಿತಿದ್ದನಂತೆ-ಆತನ ಶಿಷ್ಯರು ಆತನ ದೇಹವನ್ನು ಎತ್ತಿಕೊಂಡು ಹೋಗಿ ಪಕ್ಕದ ನದಿಯಲ್ಲಿ ಸ್ನಾನ ಮಾಡಿಸಿದ ನಂತರ ಆ ಬಂಡೆಯ ಮೇಲೆಯೇ ಅದನ್ನು ತಂದು ಕೂಡಿಸುತ್ತಿದ್ದರಂತೆ-ಹಗಲು ಹೊತ್ತಿನಲ್ಲಿ ಮಾತ್ರ ಆತನ ಪ್ರಜ್ಞೆಯು ಹೊರಮುಖವಾಗಿ ಆತನು ತನ್ನ ಶಿಷ್ಯರಿಗೆ ಬೋಧೆ ಕೊಡುತ್ತಿದ್ದನಂತೆ.

ಕುಂಡಲಿನಿಯ ಗುರಿ

''ಷಟ್ ಚಕ್ರ ನಿರೂಪಣ'' ಗ್ರಂಥದ ಉಪಸಂಹಾರ ಭಾಗವು ಕುಂಡಲಿನಿ ದೇವಿಯ ಪ್ರಯಾಣವನ್ನು ಈ ಮುಂದಿನಂತೆ ವಿವರಿಸುತ್ತದೆ.

ಶುದ್ಧ ಸತ್ವ ಸ್ವರೂಪಳಾದ ದೇವಿಯು ಮೂರು ಲಿಂಗಗಳನ್ನು ಭೇದಿಸಿ ಬ್ರಹ್ಮನಾಡಿ ಪದ್ಮಗಳೆಂಬ ಎಲ್ಲ ಚಕ್ರಗಳನ್ನೂ ಹಾದು ತನ್ನ ಪೂರ್ಣ ಪ್ರಕಾಶದಲ್ಲಿ ಕಂಗೊಳಿಸುತ್ತಾಳೆ. ಅನಂತರ ಆಕೆಯ ಸೂಕ್ಷ್ಮ ಸ್ಥಿತಿಯಲ್ಲಿ ಮಿಂಚಿನಂತೆ ಹೊಳೆಯುತ್ತಾ-ಪದ್ಮದ ಬೇರಿನಂತೆ ಸೂಕ್ಷ್ಮತೆಯಿಂದ ಪ್ರಕಾಶಮಾನವಾದ ಜ್ವಾಲೆಯಂತೆ ಇರುವ ಶಿವನ ಹತ್ತಿರ ಹೊಗುತ್ತಾಳೆ.

ಅಲ್ಲಿ ಪರಮಾನಂದವನ್ನು ಅನುಭವಿಸಿ ತಕ್ಷಣವೇ ಪ್ರಶಾಂತವಾದ ವಿಮೋಚನೆಯನ್ನು ಪಡೆಯುತ್ತಾಳೆ.

ಪರಶಿವನಿಂದ ಹೊರಹೊಮ್ಮುವ ಅಮೃತವನ್ನು ಸೇವಿಸುತ್ತಾಳೆ. ಅಲ್ಲಿ ನಿತ್ಯವಾದ ಅತೀತಾನಂದವು ಹೊರಹೊಮ್ಮುತ್ತದೆ. ಅಲ್ಲಿಂದ ಹಿಂತಿರುಗಿ ಕುಲ ಪಥವನ್ನನುಸರಿಸಿ ಮೂಲಾಧಾರವನ್ನು ಮುಟ್ಟುತ್ತಾಳೆ. ಏಕಾಗ್ರ ಮನಸ್ಸಿನಿಂದ ಯೋಗಿಯು ತನ್ನ ಇಷ್ಟ ದೇವತೆಗೂ ಚಕ್ರಗಳ ದೇವತೆಗಳಿಗೂ ಡಾಕಿಣಿ ಮುಂತಾದವರಿಗೆ ತರ್ಪಣ ಕೊಡುತ್ತಾನೆ. ಆ ತರ್ಪಣವೇ ದಿವ್ಯಾಮೃತವಾಹಿನಿ ಅದು ತಾನು ಗುರುಗಳಿಂದ ಪಡೆದ ಜ್ಞಾನಕ್ಕೆ ಸಂಬಂಧಪಟ್ಟ ಬ್ರಹ್ಮಾಂಡವೆಂಬ ಪಾತ್ರೆಯಲ್ಲಿರುತ್ತದೆ.

ತನ್ನ ಪರಮ ಗುರುವಿನ ಪಾದ ಕಮಲಕ್ಕೆ ತನ್ನನ್ನ ತಾನು ಅರ್ಪಣೆ ಮಾಡಿಕೊಂಡಿರತಕ್ಕ ಯೋಗಿಯು ತನ್ನ ಏಕಾಗ್ರ ಮನಸ್ಸಿನಿಂದ ಹೃತ್ಪೂರ್ವಕವಾಗಿ ಲೋಕಕ್ಕೆ ಸಂಬಂಧಪಟ್ಟ ದಿವ್ಯಜ್ಞಾನದ ತೌರು ಮನೆಯಂತಿರುವ ಈ ಗ್ರಂಥವನ್ನು ವ್ಯಾಸಂಗ ಮಾಡಿ ನಿರ್ದೋಷಿಯೂ ಪರಿಶುದ್ಧನೂ ಆಗಿದ್ದ ಪಕ್ಷದಲ್ಲಿ ಆತನ ಮನಸ್ಸು ತನ್ನ ಇಷ್ಟ ದೇವತೆಯ ಪಾದ ಕಮಲದಲ್ಲಿ ನರ್ತನ ಮಾಡುತ್ತದೆ.

ಉಪಸಂಹಾರ

ನಮ್ಮ ಹಾಗೆಯೇ ಹಿಂದೂಗಳಿಗೂ ಕೂಡ ಎಲ್ಲ ವಿಧವಾದ ಯೋಗಸಾಧನೆಗಳ ಫಲಿತಾಂಶವಾಗಿ ಲಯ ಯೋಗ ಪ್ರಾಪ್ತವಾಗುತ್ತದೆ. ಹಿಂದೂ ಸಂಸ್ಕೃತಿಗೆ ಸಂಬಂಧಪಟ್ಟ ಏಳು ಪಂಥಗಳ ಅನುಯಾಯಿಗಳಂತೆಯೂ ಮಾನವ ಜೀವಿತದ ಪರಮ ಲಕ್ಷ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡಿರುವ ಪಾಶ್ಚಾತ್ಯರಾದ ನಮ್ಮಂತೆಯೂ ಜೀವಿತದ ಪರಮ ಧ್ಯೇಯವಾದ ಮೋಕ್ಷಕ್ಕಿಂತ ಉನ್ನತ ಮಟ್ಟದ ಲೋಕಸೇವೆ-ಎಂದರೆ ದುಃಖಪ್ರದವಾದ ಸಂಸಾರ ಚಕ್ರದಲ್ಲಿ ತೊಳಲಾಡುತ್ತಿರುವ ಲಕ್ಷಾಂತರ ಅಜ್ಞಾನಿಗಳನ್ನು ಉದ್ಧರಿಸಿ ಅವರೂ ಕೂಡ ನಮ್ಮಂತೆಯೇ ಪ್ರತಿಯೊಂದು ಪ್ರಜ್ಞೆ ಮಟ್ಟದಲ್ಲೂ ದೈವಿಕ ಶಕ್ತಿಗಳನ್ನು ಪಡೆದು, ಈಶ್ವರ ಸಂಕಲ್ಪಾನುಸಾರವಾಗಿ ನಿಸ್ವಾರ್ಥ ಸೇವಾತತ್ಪರರಾಗತಕ್ಕ ಅಧಿಕಾರ ಪುರುಷರಾಗಿ ಪರಿವರ್ತನೆ ಹೊಂದುವಂತೆ ಸಹಾಯ ಮಾಡೋಣ. ಅಂತಹ ದೇದೀಪ್ಯ ಮಾನವಾದ ಮಾನವ ಕೋಟಿಗೆ ಸಂಬಂಧಪಟ್ಟ ಸೇವಾನಂದವು ನಮಗೆಲ್ಲ ಕಾದಿದೆ.

ಓ-ಐಮ್ ಕ್ಲೀಮ್ ಸ್ತ್ರೀಂ

ಥಿಯಸಾಫಿಕಲ್ ಸೊಸೈಟಿಯು 1875ರಲ್ಲಿ ಸ್ಥಾಪಿಸಲ್ಪಟ್ಟಿತು. ಇದರ ಪ್ರಥಮ ಉದ್ದೇಶ ವಿಶ್ವ ಸೋದರಭಾವವನ್ನು ಪ್ರಪಂಚದಾದ್ಯಂತ ಪ್ರಸಾರಗೊಳಿಸುವುದು. ಇದು ಜೀವ ಚೈತನ್ಯವು ಮಾನವ ಮತ್ತು ಮಾನವೇತರ ವಿವಿಧ ರೂಪಗಳಲ್ಲಿ ಅವಿಭಾಜ್ಯ ಅಥವಾ ಸಮಗ್ರವಾಗಿ ಒಂದೇ ಎಂಬ ಆದಾರದ ಮೇಲೆ ನಿಂತಿದೆ. ವಿಶ್ವದಾದ್ಯಂತ ವ್ಯಾಪಿಸಿರುವ ಈ ಸಂಸ್ಥೆಯು, ಸತ್ಯಾನ್ವೇಷಣೆ ಮತ್ತು ಜೀವಿತದ ಉದ್ದೇಶವನ್ನು ತಿಳಿದು ಕೊಳ್ಳುವ ಸಾಮಾನ್ಯ ಆಶೋತ್ತರಕ್ಕಾಗಿ ದುಡಿಯುತ್ತಿದೆ. ಸಂಸ್ಥೆಯ ಸದಸ್ಯರು ಥಿಯಾಸಫಿ ತತ್ವಗಳ ವ್ಯಾಸಂಗ, ಮನನ, ಪಾವಿತ್ರ್ಯಜೀವನ ಮತ್ತು ಪ್ರೀತಿ ಪೂರ್ವಕ ಸೇವೆಗಳಲ್ಲಿ ನಿರತರಾಗಿರುತ್ತಾರೆ. ಇಂತಹ ಜಿಜ್ಞಾಸು ಸದಸ್ಯರ ಮೇಲೆ ಸೊಸೈಟಿಯು ಯಾವುದೇ ನಂಬಿಕೆಗಳನ್ನು ವಿಧಿಸುವುದಿಲ್ಲ. ಸರ್ವವೂ ವ್ಯಾಸಂಗ ಮನನಗಳ ಫಲವಾಗಿ ಉದಯಿಸಬೇಕೆಂಬುದೇ ಸಂಸ್ಥೆಯ ಆಶಯ.

ಥಿಯಾಸಫಿ ತತ್ವಗಳ ಗಾಢ ವ್ಯಾಸಂಗದಿಂದ ಎಲ್ಲ ಮತಗಳಲ್ಲಿಯೂ ಅಡಗಿರುವ ಮೂಲ ತತ್ವಜ್ಞಾನವೇ ಥಿಯಾಸಫಿ ಎಂಬುದು ಗೋಚರವಾಗುತ್ತದೆ. ಇದು ಜೀವಿತವನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವ ತತ್ವದರ್ಶನವನ್ನು ನೀಡುತ್ತದೆ. ಈ ತತ್ವಜ್ಞಾನವೇ ಸಮಸ್ತ ವಿಶ್ವಕ್ಕೆ ಮಾರ್ಗದರ್ಶನ ಮಾಡುವ ಶಕ್ತಿಗಳಾದ ಧರ್ಮ ಮತ್ತು ಪ್ರೇಮ ಎಂಬುದನ್ನು ನಿರೂಪಿಸುತ್ತದೆ. ಮಾನವನಲ್ಲಿ ಸುಪ್ತವಾಗಿರುವ ಆಧ್ಯಾತ್ಮಿಕ ಸ್ವಭಾವದ ಅರಳುವಿಕೆಗೆ ಈ ಭೋದೆಗಳು ಅಗಾಧವಾದ ಸಹಾಯ ಮಾಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬಹುದಾದ ವಿಳಾಸ:

ಕರ್ನಾಟಕ ಥಿಯಾಸಾಫಿಕಲ್ ಫೆಡರೇಷನ್

ನಂ. 90, ಶ್ರೀ ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು - 560 004
ದೂರವಾಣಿ : 6500382, 6616440

ಹಿಂದೂ ಮತ್ತು ಇತರೆ ಗುಪ್ತಶಾಲೆಗಳ ಬೋಧನೆಗಳ ಪ್ರಕಾರ ಮನುಷ್ಯನ ಸ್ಥೂಲ ದೇಹದ ಆಚೆ ಇರುವ ದೇಹಗಳಲ್ಲಿ ಸೂಕ್ಷ್ಮ ಅಂಗಗಳಿವೆ. ಈ ಅಂಗಗಳು ಅತೀಂದ್ರಿಯ ಚೈತನ್ಯಗಳು ಮತ್ತು ಪ್ರಾಣಶಕ್ತಿಗಳಿಗೆ ನಾಲೆಗಳಾಗಿವೆ; ಅಲ್ಲದೆ, ಪ್ರಜ್ಞೆಯ ಭೌತಿಕ, ಅತೀಂದ್ರಿಯ ಮತ್ತು ಭೌತದೇಹಾತೀತ ಸ್ಥಿತಿಗಳ ಕೊಂಡಿಯಾಗಿ ಕೆಲಸ ಮಾಡುತ್ತವೆ. ಈ ಕೇಂದ್ರಗಳಿಗೆ ಸಂಸ್ಕೃತದಲ್ಲಿ ''ಚಕ್ರಗಳು'' ಎನ್ನಲಾಗಿದೆ, ಎಂದರೆ 'ಗಾಲಿಗಳು' ಎಂದು. ಈ ಚಕ್ರಗಳನ್ನು ಅನೇಕ ದಳಗಳುಳ್ಳ ಪುಷ್ಪಗಳಿಗೆ ಹೋಲಿಸಲಾಗಿದೆ. ಅತೀಂದ್ರಿಯ ದೃಷ್ಟಿಯುಳ್ಳ ಪರಿಶೋಧಕರಿಗೆ ಗಾಲಿಯ ಹಾಗೆ ತಿರುಗಣೆಗಳುಳ್ಳಂತೆ ಇರುವ ಇವು ಶೋಭಾಯಮಾನವಾಗಿ ಧಗಧಗನೆ ಹೊಳೆಯುವ ನೀರಿನ ಸುಳಿಗಳುಳ್ಳಂತೆ ಇವೆ.

1927ರಲ್ಲಿ ಪ್ರಕಟಣೆಗೊಂಡ ಈ ಪುಸ್ತಕದಲ್ಲಿ ಸಿ.ಡಬ್ಲ್ಯೂ. ಲೆಡ್‌ಬೀಟರ್‌ರವರು ಚಕ್ರಗಳ ಸ್ವಭಾವ ಮತ್ತು ಕಾರ್ಯಗಳ ಬಗ್ಗೆ ಮಾಡಿದ ಸಂಶೋಧನೆಯನ್ನು ವಿವರಿಸಿರುತ್ತಾರೆ. ಅನೇಕ ಮುದ್ರಣಗಳನ್ನು ಕಂಡ ಈ ಗ್ರಂಥವು ತನ್ನ ಕ್ಷೇತ್ರದಲ್ಲಿ ಶ್ರೇಷ್ಠ ಕೃತಿ ಎನಿಸಿದೆ. ಈ ಕೃತಿಯು ಅನೇಕ ಬಣ್ಣದ ಫಲಕಗಳು ಮತ್ತು ರೇಖಾಚಿತ್ರಗಳಿಂದ ವಿವರಿಸಲ್ಪಟ್ಟಿದೆ.

ಸಿ.ಡಬ್ಲ್ಯೂ. ಲೆಡ್‌ಬೀಟರ್ (1847- 1934)ರವರು ಬಹಳ ಉನ್ನತ ಮಟ್ಟದ ಅತೀಂದ್ರಿಯ ದೃಷ್ಟಿ ಉಳ್ಳವರು. ಇವರು ಆಧ್ಯಾತ್ಮಿಕ ಜೀವನ ಮತ್ತು ಮಾನವನ ಅತೀಂದ್ರಿಯ ಸ್ವಭಾವವನ್ನು ಕುರಿತಂತಹ ಬಹಳ ಪುಸ್ತಕಗಳ ಕರ್ತೃವಾಗಿದ್ದಾರೆ.

ಇವರು ತಮ್ಮ ಜೀವನ್ಮುಕ್ತ ಗುರುವಿನ ಮಾರ್ಗದರ್ಶನದಲ್ಲಿ ಪೂರ್ಣವಾಗಿ ಅತೀಂದ್ರಿಯ ಸಾಮರ್ಥ್ಯವನ್ನು ಪಡೆದು, ಅದನ್ನು ವ್ಯಕ್ತಪಡಿಸಿದರು. ಇವರು 1893ರಲ್ಲಿ ತಮ್ಮ ಅತೀಂದ್ರಿಯ ದೃಷ್ಟಿಯಿಂದ ಸಂಶೋಧನೆಯನ್ನು ಪ್ರಾರಂಭಿಸಿ, ತಮ್ಮ ಅವಸಾನದವರೆಗೂ ಅದನ್ನು ನಡೆಸಿಕೊಂಡು ಬಂದರು.

ಇವರ ಕೃತಿಗಳಲ್ಲಿ ಕೆಲವು ಇಂತಿವೆ:

ಅತೀಂದ್ರಿಯ ದೃಷ್ಟಿ, ವಸ್ತುಗಳ ಗುಪ್ತಮುಖ, ದೃಶ್ಯಾದೃಶ್ಯ ಮನುಷ್ಯ, ಅದೃಶ್ಯ ಸಹಾಯಕರು.

ಕರ್ನಾಟಕ ಥಿಯಾಸಫಿ
ಪ್ರಚಾರ ಮತ್ತು ಶಿಕ್ಷಣ
ಸಮಿತಿ, ಬೆಂಗಳೂರು